ಹಳದಿ ಬಣ್ಣ: ಲಿವರ್ ಸಮಸ್ಯೆ ಇದ್ದಾಗ ನಿಮ್ಮ ಅಂಗೈ ಅಥವಾ ಸೂರ್ಯ ಪರ್ವತ ಹಳದಿ ಬಣ್ಣವಾಗುತ್ತದೆ. ಅಂದರೆ ಪಿತ್ತ ಜನಕಾಂಗದ ಸಮಸ್ಯೆ ಇದೆ ಎಂದರ್ಥ. ಅಥವಾ ನೀವು ಅತಿಯಾಗಿ ನಿದ್ದೆಗೆಟ್ಟಿದ್ದೀರಿ, ಸೊಂಟದ ನೋವು ತುಂಬಾ ಇದೆ ಎಂದೂ ಆಗಬಹುದು.

ನಿಮ್ಮ ಮೇಲೆ ಅಪವಾದ ಬೇಗ ಬರುತ್ತದೆ. ಕೀರ್ತಿ ನಿಮ್ಮ ಕನಸು ಮಾತ್ರ. ಸದಾ ಕಾಲ ನಿಮ್ಮನ್ನು ನಿರಾಸೆ ಕಾಡುತ್ತಿರುತ್ತದೆ. ಆತ್ಮ ವಿಶ್ವಾಸ ಕಡಿಮೆ. ಹಣವಂತೂ ಯಾವಾಗಲೂ ಇರುವುದೇ ಇಲ್ಲ. ನೀವು ನಿಮ್ಮ ಯಕೃತ್‌ನ್ನು ಸರಿಪಡಿಸಿಕೊಂಡರೆ ಎಲ್ಲವೂ ಸರಿಹೋಗುತ್ತದೆ.

ನೀಲಿ ಅಥವಾ ನೇರಳೆ ಬಣ್ಣ: ನಿಮ್ಮಲ್ಲಿ ರಕ್ತ ಸಂಚಾರ ಸರಿಯಾಗಿ ಆಗುತ್ತಿಲ್ಲ, ಹೃದಯದಲ್ಲಿ ಸಮಸ್ಯೆ ಇದೆ ಎಂದು ಅರ್ಥ. ಅಥವಾ ನೀವು ಶೀತ ಪ್ರವೃತ್ತಿಯವರು ಇರಬಹುದು. ಚಳಿ ಮತ್ತು ಮಳೆಗಾಲದಲ್ಲಿ ನಿಮ್ಮ ಅಂಗೈ ನೀಲಿಯಾಗಿ ಇರುತ್ತದೆ ಎಂದಾದರೆ ಹೃದಯದ ಸಮಸ್ಯೆ ಇರಬೇಕೆಂದಿಲ್ಲ.

ಸೂರ್ಯ ಪರ್ವತ ನೀಲಿಯಾಗಿದ್ದರಂತೂ ನಿಮ್ಮ ಅವಕಾಶಗಳೆಲ್ಲಾ ತಪ್ಪಿಯೇ ಹೋಗುತ್ತದೆ. ನಿಮ್ಮ ಶ್ರಮವನ್ನು ಯಾರೂ ಲೆಕ್ಕಿಸುವುದೇ ಇಲ್ಲ. ನೀವೂ ಸಹಾ ಯಾವುದೇ ಕೆಲಸಕ್ಕೂ ಕೈ ಹಾಕದೇ ಹಾಗೇ ಉಳಿಯುತ್ತೀರಿ. ಕೀರ್ತಿ ಬಂದರೂ ಅದು ನಿಮಗೆ ತೃಪ್ತಿಯನ್ನು ನೀಡುವುದಿಲ್ಲ.

ಕಪ್ಪು ಬಣ್ಣ/ ಕಪ್ಪು ಕಲೆಗಳು: ಅಂಗೈ ಕಪ್ಪಾಗಿದ್ದರೆ ನಿಮ್ಮ ಭವಿಷ್ಯ ಸಹಾ ಕತ್ತಲಲ್ಲೇ ಇರುತ್ತದೆ. ನೀವು ಅಪರಾಧಿಗಳು. ಒಂದೊಮ್ಮೆ ಅಪರಾಧಿಗಳು ಅಲ್ಲದಿದ್ದರೂ ನಿಮ್ಮ ಮಾನಹಾನಿ ನಿರಂತರವಾಗಿ ನಡೆಯುತ್ತಿರುತ್ತದೆ. ಸೂರ್ಯ ರೇಖೆ ಕಪ್ಪಾಗಿದ್ದರಂತೂ ವೃತ್ತಿಯಲ್ಲಿ ಸದಾ ಸಂಕಟ.

ಬಿಳಿ/ ಬೂದು ಬಣ್ಣ: ನಿಮಗೆ ರಕ್ತ ಹೀನತೆಯಾಗಿದೆ, ಬೇಗ ಸರಿಪಡಿಸಿಕೊಳ್ಳಿ ಎಂದು ಅಂಗೈ ಹೇಳುತ್ತಿದೆ. ನಿಮ್ಮಲ್ಲಿ ಉತ್ಸಾಹದ ಹೀನತೆಯೂ ಆಗಿರುತ್ತದೆ. ನಿಮ್ಮಲ್ಲಿ ಪ್ರತಿಭೆ ಇದ್ದರೂ ನಿಮಗೆ ಯಾವುದೇ ಅವಕಾಶಗಳು ಸಿಗದೇ ಎಲೆ ಮರೆಯ ಕಾಯಂತೆ ಇರುತ್ತೀರಿ. ಒಂದೊಮ್ಮೆ ವೇದಿಕೆ ಸಿಗುತ್ತದೆ ಎಂದಾದಾಗ ಯಾರಾದರೂ ಅದನ್ನು ತಪ್ಪಿಸುತ್ತಾರೆ. ಆರೋಗ್ಯ ಆಗಾಗ ಬಿಗಡಾಯಿಸುವ ಕಾರಣ ಯಾವ ಕೆಲಸವೂ ಬೇಗನೆ ಆಗುವುದಿಲ್ಲ, ಯಶಸ್ಸಂತೂ ಸದಾ ಕೈತಪ್ಪಿ ಹೋಗುತ್ತಿರುತ್ತದೆ. ನೀವು ದೇವರಲ್ಲಿ ಬೇಡುವುದು ಒಂದೇ 'ಧೈರ್ಯ ಕೊಡು ದೇವರೇ' ಎಂದು ಮಾತ್ರ.

ನರಗಳು ನೇರಳೆ ಬಣ್ಣ: ಅತಿಯಾದ ಒತ್ತಡ, ನಿದ್ರಾ ಹೀನತೆ, ಯಾವಾಗ ಹೆಸರು ಗಳಿಸುತ್ತೇನೋ, ಯಾವಾಗ ಹಣ ಬರುತ್ತದೋ, ಬಂದಿದ್ದು ನಿಲ್ಲುತ್ತದೋ, ಇಲ್ಲವೋ ಎನ್ನುವ ಚಿಂತೆಯಿಂದಾಗಿ ನಿಮ್ಮ ಅಂಗೈಯಲ್ಲಿ ನರಗಳು ನೇರಳೆಯಾಗಿ ಕಾಣುತ್ತಿರುತ್ತವೆ.

ನಿಮ್ಮ ಆರೋಗ್ಯ ಸರಿಪಡಿಸಿಕೊಂಡರೆ ಬಣ್ಣದ ದೋಷಗಳ ನಿವಾರಣೆಯಾಗುತ್ತದೆ. ಸೂರ್ಯನಿಗೆ ಅರ್ಘ್ಯ ನೀಡುವುದು, ಸೂರ್ಯ ನಮಸ್ಕಾರ ಮಾಡುವುದು, ಬೆಳಗಿನ ಝಾವವೇ ಎದ್ದು ಸ್ನಾನ ಮಾಡಿ ಪೂಜೆ ಮಾಡುವುದು, ಬೆಳಗಿನ ವಾಕಿಂಗ್, ಮುಂಜಾನೆ ದಿನಾಲೂ ಹೂವುಗಳನ್ನು ಕೊಯ್ದು ಮಾಲೆ ಮಾಡುವುದು. ಹೀಗೆ ಸೂರ್ಯನನ್ನು ಸೇವಿಸುವ ಕೆಲಸಗಳನ್ನು ಮಾಡಬೇಕು.

ಅಲೆಯ ರೇಖೆ: ಸೂರ್ಯ ರೇಖೆಯು ಅಡ್ಡಾದಿಡ್ಡಿಯಾಗಿ ಹಾವು ಹರಿದಂತೆ ಓರೆಕೋರೆಯಾಗಿ ಇದ್ದರೆ, ಅದೆಂದೂ ಶುಭ ಲಕ್ಷಣವಲ್ಲ. ಏರಿಳಿತ ಸಾಮಾನ್ಯ, ಹಣ ಕೈಗೆ ಬರುತ್ತಿದ್ದಂತೆ ಹೋಗುತ್ತದೆ. ಇಂದು ಅರಸ ನಾಳೆ ಆಳು ಎನ್ನುವ ಅನಿಶ್ಚಿತತೆ ಕಾಡುತ್ತದೆ. ಸ್ಥಿರತೆಯಂತೂ ದೂರದ ಮಾತು

ನಿಮ್ಮ ಮನಸ್ಸು ಯಾವಾಗಲು ಚಂಚಲವಾಗಿಯೇ ಇರುತ್ತದೆ. ಒಮ್ಮೆ ಕಲೆ, ಇನ್ನೊಮ್ಮೆ ವ್ಯಾಪಾರ ಮಾಡುತ್ತೇನೆ ಎನ್ನುವುದು, ಮತ್ತೊಮ್ಮೆ ಸರ್ಕಾರಿ ಕೆಲಸಕ್ಕೆ ಟ್ರೈ ಮಾಡುತ್ತೇನೆ ಎನ್ನುವುದು. ಯಾವುದೇ ಕ್ಷೇತ್ರದಲ್ಲಿ ಇಂತಹವರು ಹೆಚ್ಚು ಕಾಲ ಇರುವುದಿಲ್ಲ. ಅಲ್ಲಲ್ಲಿ ಅಂಕುಡೊಂಕಾಗಿದ್ದರೆ, ಗುರಿ ಮುಟ್ಟುತ್ತೀರಿ. ಆದರೆ ಅಡ್ಡಿ ತಪ್ಪದು. ಅದೇ ತುಂಬಾ ಅಡ್ಡಡ್ಡ ಸರಪಳಿಯಂತೆ ಇದ್ದರೆ, ಜೀವನ ಪೂರ್ತಿ ಒಂದಲ್ಲಾ ಒಂದು ಹೋರಾಟ ನಿಶ್ಚಿತ. ಒಂದು ಸಮಸ್ಯೆ ಮುಗಿಯಿತೋ ಇನ್ನೊಂದು ಬರಲು ಸಿದ್ಧವಾಗಿರುತ್ತದೆ.

ರೇಖೆಗಳು ಬದಲಾಗುತ್ತಿರುತ್ತವೆ! ನೇರವಾಗುವುದು, ದಪ್ಪವಾಗುವುದು, ತೆಳುವಾಗುವುದು, ಆಳವಾಗುವುದು ಇವೆಲ್ಲಾ ನಿಮ್ಮ ಜೊತೆಗೆ ಬದಲಾಗುವ ಕ್ರಿಯೆಗಳು. ಸ್ವಂತ ಅನುಭವಗಳು ನಿಮ್ಮನ್ನು ಮಾಗುವಂತೆ ಮಾಡುತ್ತದೆ. ಅದೇ ಅಲೆಯ ರೇಖೆಯ ಅಕ್ಕಪಕ್ಕದಲ್ಲಿ ಸಮಾನಾಂತರ ರೇಖೆಗಳು ಇದ್ದರೆ, ನಿಮಗೆ ಗುರುಗಳ ಅಥವಾ ಗುರುಗಳಂತ ಸ್ನೇಹಿತರ ಸಹಾಯ ಸಿಗುತ್ತದೆ. ಚೌಕವು ಅಲೆಗಳ ನಡುವೆ ಇದ್ದರೆ, ದೊಡ್ಡ ನಷ್ಟದಿಂದ ಪಾರಾದ ಹಾಗೇ.

ನೀವು ಯಾವುದೇ ಕೆಲಸ ಮಾಡುವಾಗ ಮೊದಲೇ ಸಂಕಲ್ಪ ಮಾಡಬೇಕು. ನಿಮ್ಮ ಇಚ್ಛೆ ಯಾವುದು ಎನ್ನುವುದು ತಿಳಿಸುವುದು ಸೂಕ್ತ. ಉಪ್ಪು ಖಾರಗಳನ್ನು ವಾರದಲ್ಲಿ ಯಾವುದಾದರೂ ಒಂದು ದಿನ ಮಾತ್ರ ಸೇರಿಸಬೇಕು. ಸೂರ್ಯ ನಮಸ್ಕಾರ ಮತ್ತು ಪ್ರಾಣಾಯಾಮ ಮಾಡಲೇಬೇಕು. ಮಾಣಿಕ್ಯವನ್ನು ಧರಿಸಲೇ ಬೇಡಿ. ಜಾತಕ ಮತ್ತು ಬಲ ಅಂಗೈಯನ್ನು ನೋಡಿರಿ. ನೆನಪಿಡಿ, ಯಾವಾಗಲೂ ರೇಖೆಗಳು ಬದಲಾಗುತ್ತಿರುತ್ತವೆ. ಹೃದಯ ರೇಖೆ ಮತ್ತು ಶಿರೋ ರೇಖೆಗಳು ಬಲವಾಗಿದ್ದರೆ, ಬುದ್ಧಿಯಿಂದ ಅಸ್ಥಿರತೆಯನ್ನು ತಡೆಯಬಹುದು.

ಸೂರ್ಯ ರೇಖೆಯ ಮೇಲೆ ಗುಣಿಸು ಗುರುತು: ಇದು ಅಶುಭ ಸಂಕೇತ, ಸೂರ್ಯ ರೇಖೆಯ ಮೇಲೆ ಅಡ್ಡ ಗುರುತು ಅಥವಾ ಗುಣಿಸುವ ಚಿಹ್ನೆಯು ನಿಮ್ಮ ಯಶಸ್ಸು ಯಾವಾಗ ಡಮಾರ್ ಎಂದು ಬೀಳುವುದನ್ನು ತೋರಿಸುತ್ತದೆ. ಕೆಲಸ ಅರ್ಧಕ್ಕೆ ನಿಂತು ಹೋಗುವುದು, ಪ್ರಾಜೆಕ್ಟ್ ಕ್ಯಾನ್ಸಲ್ ಆಗುವುದು, ಉದ್ಯೋಗದಿಂದ ಹೊರಬರಬಹುದು. ಹಠಾತ್ ತಡೆ, ಕೋರ್ಟ್ ಕಚೇರಿ ಅಲೆದಾಟ. ಪೊಲೀಸ್ ಕೇಸ್, ಅಪವಾದ, ಮೀಡಿಯಾದಲ್ಲಿ ಕೆಟ್ಟ ಸುದ್ದಿ. ಜೀವನ ಪೂರ್ತಿ ಕೊರಗು ನಿಮ್ಮದು. ಅಂದರೆ ನೀವು ಯಾವುದಾದರೂ ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆಯ ಮೇಲೆ ಬಹುಕಾಲ ಇರುವಂತಾಗುವುದು. ದೈಹಿಕವಾದ ಅಪಾಯಗಳು, ವೃತ್ತಿಗೆ ಸಮಸ್ಯೆ ಹೀಗೆ ಇವೆ. ಪರಿಹಾರ ಎಂದರೆ, ಪಾಲುದಾರಿಕೆ ಮಾಡಿಕೊಳ್ಳುವಾಗ ಎಚ್ಚರದಿಂದ ಇರಿ. ಗುಟ್ಟಾಗಿ ಪೋಲೀಸ್ ಕೇಸ್ ಆಗಬಹುದು. ಯಾವಾಗಲೂ ಸಾಮಾನ್ಯವಾದದ್ದು ನಿಮಗೆ ಮಾತ್ರ ಕಷ್ಟಕರ ಎನ್ನುತ್ತದೆ. ಒಟ್ಟಾರೆ ನೀವು ಸದಾ ಅಲೆಯುತ್ತಾ ಇರುತ್ತೀರಿ.

ರಾಬರ್ಟ್ ಕಾಲ್ಡ್‌ವೆಲ್‌ನಿಂದ ಜೋಸೆಫ್ ವಿಜಯ್‌ವರೆಗೆ

ಹಿಂದುಗಳನ್ನು ವಿಭಜಿಸುವ ತಂತ್ರಗಳು ತಮಿಳ್ನಾಡಿನಲ್ಲಿ ಆಳವಾಗಿ ಬೇರೂರಿವೆ. ಅದು ಬದಲಾವಣೆಯಾಗದೆ ಹಿಂದು ಏಕತೆ ಅಸಾಧ್ಯ.

ಒಳನೋಟ

• ಹೆ.ಬಾ. ಮಲ್ಯ



ಇತ್ತೀಚೆಗೆ ನಡೆದ 5 ವಿಧಾನಸಭೆಗಳ ಚುನಾವಣೆಯ ಫಲಿತಾಂಶ ಭಾರತೀಯ ರಾಜಕೀಯ ಕ್ಷೇತ್ರದಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭಿಸಿದೆ. ಮುಖ್ಯವಾಗಿ ಪಶ್ಚಿಮ ಬಂಗಾಳದಲ್ಲಿ ಆಗಿರುವ ಅಗಾಧ ಬದಲಾವಣೆ. ಒಂದೇ ತಿಂಗಳಲ್ಲಿ ದಿಗ್ಗಜರು, ಅಜೇಯರು ಎನಿಸಿಕೊಂಡಿದ್ದ ಮೂವರು ಮುಖ್ಯಮಂತ್ರಿಗಳು - ಕೇರಳದ ಪಿಣರಾಯಿ ವಿಜಯನ್, ತಮಿಳ್ನಾಡಿನ ಎಂ.ಕೆ. ಸ್ಟಾಲಿನ್, ಪ.ಬಂಗಾಳದ ಮಮತಾ - ಇವರ ಮಹಾಪತನದ ಜೊತೆಗೆ ಅವರ ಪಕ್ಷಗಳ ಹೀನಾಯ ಸೋಲು. ಆದರೆ ಹಿಂದುಗಳ ಮಟ್ಟಿಗೆ ದೊಡ್ಡ ಗೆಲುವು ಎಂದರೆ ಪಶ್ಚಿಮ ಬಂಗಾಳದಲ್ಲಿ ಮಮತಾ ಹಾಗೂ ಟಿ.ಎಂ.ಸಿ.ಯ ಹೀನಾಯ ಸೋಲು ಹಾಗೂ ಸುವೇಂದು ಅಧಿಕಾರಿಯವಂಥ ಮುಖ್ಯಮಂತ್ರಿ ಅಧಿಕಾರಕ್ಕೇರಿದ್ದು. ಇನ್ನು ಪಿಣರಾಯಿ ವಿಜಯನ್ ಹಾಗೂ ಅವರ ಮಾರ್ಕ್ಸಿಸ್ಟ್ ಪಕ್ಷದ ಸೋಲು, ಕಮ್ಯೂನಿಸ್ಟ್ - ನಕ್ಸಲ್‌ಮುಕ್ತ ಭಾರತದ ಘೋಷಣೆಯನ್ನು ನಿಜಮಾಡಿ ತೋರಿಸಿದೆ. ಅಲ್ಲಿ ಭಾಜಪ ಭದ್ರವಾದ ನೆಲೆ ಕಂಡುಕೊಳ್ಳುವಲ್ಲಿ ಯಶಸ್ಸು ಕಂಡಿದೆ. ಈಗ ಕರ್ನಾಟಕದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟ ಮೇಲೆ, ಕಾಂಗ್ರೆಸ್ ಅಸ್ಥಿರತೆಯತ್ತ ಸಾಗುತ್ತಿರುವುದು ನಿಶ್ಚಿತ. ಇಂಡಿ ಕೂಟ ಛಿದ್ರವಾಗಿದೆ.

ತಮಿಳ್ನಾಡಿನ ಫಲಿತಾಂಶದ ಕುರಿತಂತೆ ಹಿಂದು ಸಮಾಜ ಆಳವಾಗಿ ಚಿಂತಿಸಬೇಕಾದ ಆವಶ್ಯಕತೆಯಿದೆ. ಸನಾತನ ಧರ್ಮ ನಾಶ ಮಾಡಲು ಹೊರಟ ಸ್ಟಾಲಿನ್, ಉದಯನಿಧಿಯ ಡಿ.ಎಂ.ಕೆ. ಪಕ್ಷವೇ ನಾಶದ ಅಂಚಿನಲ್ಲಿದೆ. ಅದು ಸಮಾಧಾನ ತಂದಿದೆ. ಆದರೆ ಜೋಸೆಫ್ ವಿಜಯ್ ಹಾಗೂ ಅವರ ಟಿ.ವಿ.ಕೆ. ಪಕ್ಷ ಅಪಾರ ಯಶಸ್ಸು ಸಾಧಿಸಿದ್ದರಿಂದ ಹಿಂದುಗಳು ಸಂತಸಪಡುವ ಅಗತ್ಯವಿಲ್ಲ. ಹಳೆಯ ಪಾಸ್ಟರ್ (ಕ್ರೈಸ್ತ ಪುರೋಹಿತ) ಹೋಗಿ ಹೊಸ ಪಾಸ್ಟರ್ ಬಂದಷ್ಟೇ ಬದಲಾವಣೆ ತಮಿಳ್ನಾಡಿನದು. ತಮಿಳ್ನಾಡಿನ ಹಿಂದುಗಳ ಸ್ವಭಾವ ವಿಚಿತ್ರವಾದದ್ದು. ಅಲ್ಲಿ ಹಿಂದುಗಳು 86%ರಷ್ಟಿದ್ದಾರೆ. ಕ್ರೈಸ್ತರು 7% ಹಾಗೂ ಮುಸಲ್ಮಾನರು 7%. ವಿಚಿತ್ರವೆಂದರೆ ಅಲ್ಲಿ ಸತತವಾಗಿ ಕ್ರೈಸ್ತ ಮುಖ್ಯಮಂತ್ರಿಗಳೇ ಅಧಿಕಾರದಲ್ಲಿದ್ದಾರೆ. ವಾಸ್ತವದಲ್ಲಿ ಅಲ್ಲಿ ನಡೆಯುತ್ತಿರುವುದು ಚರ್ಚ್ ಆಡಳಿತ. ಇದಕ್ಕೆ 200 ವರ್ಷಗಳ ಸುದೀರ್ಘ ಇತಿಹಾಸವಿದೆ.

ತಮಿಳ್ನಾಡಿನ ಪರಿಸ್ಥಿತಿ ಪ. ಬಂಗಾಳದ ಪರಿಸ್ಥಿತಿಗಿಂತ ಭಿನ್ನವಾಗಿದೆ. ಮುಸ್ಲಿಮರಲ್ಲಿನ ಕೆಲವು ಜಿಹಾದಿಗಳು ಯಾವ ಮುಲಾಜಿಲ್ಲದೆ ಹಿಂದುಗಳ ಮೇಲೆ ನೇರವಾಗಿ ದೌರ್ಜನ್ಯ ಎಸಗುವ ಸ್ವಭಾವದವರು. ಹಿಂದುಗಳು ದೌರ್ಜನ್ಯ ಅತೀವವಾದಾಗ ಒಮ್ಮೆಲೇ ಎದ್ದು ಘರ್ಜಿಸಿ ಇದಿರಾಳಿಯನ್ನು ನಾಶ ಮಾಡುತ್ತಾರೆ. ಪ. ಬಂಗಾಳದಲ್ಲಾದುದು ಇದೇ. ಆದರೆ ಕ್ರೈಸ್ತ ಮಿಷನರಿಗಳು ಬಹಳ ಹಿಂದೆಯೇ ಕ್ರುಸೇಡ್ ಮಾನಸಿಕತೆಯನ್ನು ಬಿಟ್ಟುಕೊಟ್ಟು, ಆಮಿಷ, ಸೇವೆಯ ಸೋಗಿನಲ್ಲಿ ಮೌನವಾಗಿ ಹಿಂದುಗಳ ಮಾನಸಿಕತೆಯನ್ನೇ ಬದಲಾಯಿಸುತ್ತಾರೆ. ಕಳೆದ 200 ವರ್ಷಗಳಿಂದ ಬ್ರಿಟಿಷರು, ಮಿಷನರಿಗಳು ಈ ತಂತ್ರವನ್ನು ಬಳಸಿ ಹಿಂದುಗಳನ್ನು ಮನೋದಾಸ್ಯದಲ್ಲಿ ಇಡುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದು ಸಮಾಜದೊಳಗೆ, ಜಾತಿ-ಜಾತಿಗಳೊಳಗೆ ಒಡಕು ಸೃಷ್ಟಿಸುವುದು, ಅದಕ್ಕೆ ಪೂರಕವಾದ ಭ್ರಮಾತ್ಮಕ ನೆರೇಟಿವ್‌ಗಳನ್ನು ಸೃಷ್ಟಿಸಿ ಹಿಟ್ಲರ್ ಅನುಯಾಯಿ ಗೊಬೆಲ್ಸ್‌ನಂತೆ ನಿರಂತರವಾಗಿ ಪ್ರಚಾರ ಮಾಡುತ್ತಲೇ ಇರುವುದು ಅವರ ತಂತ್ರ. ತಮಿಳ್ನಾಡಿನಲ್ಲಾದುದು ಇದೇ.

ನೇರ ಶಾರೀರಿಕ ಆಕ್ರಮಣವನ್ನು ಎದುರಿಸುವುದು ಹಿಂದುಗಳಿಗೆ ಕಷ್ಟವೇನೂ ಅಲ್ಲ. ಆದರೆ ಪರೋಕ್ಷವಾದ, ಮನಸ್ಸಿನ ಮೇಲಿನ ಆಕ್ರಮಣ ಎದುರಿಸುವುದು ಅಷ್ಟು ಸುಲಭವಲ್ಲ. ಪ. ಬಂಗಾಳ ಮತ್ತು ತಮಿಳ್ನಾಡಿನ ಪರಿಸ್ಥಿತಿಗಳಲ್ಲಿ ಇಂಥ ಭಿನ್ನತೆ ಇರುವುದರಿಂದಲೇ ಅಲ್ಲಿನ ಫಲಿತಾಂಶಗಳಲ್ಲೂ ಭಿನ್ನತೆ ಸಹಜ.

ಇಷ್ಟು ವಿಶಾಲ ದೇಶವನ್ನು ಹಾಗೂ ಇಲ್ಲಿನ ಅಪಾರ ಸಂಖ್ಯೆಯ ಹಿಂದುಗಳನ್ನು ದೀರ್ಘಕಾಲ ದಾಸ್ಯದಲ್ಲಿ ಇಡಲು ಸಾಧ್ಯವಿಲ್ಲವೆಂದರಿತ ಬ್ರಿಟಿಷರು ಕ್ರೈಸ್ತ ಮಿಷನರಿಗಳ ಸಹಾಯ ಪಡೆದರು. ಇಲ್ಲಿ ಹಿಂದು ಸಂಸ್ಕೃತಿ -ಸಂಪ್ರದಾಯ, ಭಕ್ತಿ, ಭಜನೆ, ದೇವರು, ವೇದ-ಪುರಾಣ ಇತ್ಯಾದಿಗಳು ಹಿಂದುಗಳ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿರುವುದರಿಂದ ಅವುಗಳನ್ನು ಕುಟಿಲೋಪಾಯದಿಂದಲೇ ನಾಶ ಮಾಡಲು ಯೋಜನೆ ರೂಪಿಸಿದರು. ಸುಮಾರು 120 ವರ್ಷಗಳ ಹಿಂದೆ ಫ್ರಾನ್ಸಿಸ್ ವೈಟ್ ಎಲ್ಲಿಸ್ ಎಂಬಾತ ಒಂದು ಪುಸ್ತಕ ಬರೆದು, ತಮಿಳು ಸಂಸ್ಕೃತಿಗೂ ಹಿಂದು ಸಂಸ್ಕೃತಿಗೂ ಸಂಬಂಧವಿಲ್ಲವೆಂಬ ನರೇಟಿವ್ ರೂಪಿಸಿದ. ಹಿಂದುಗಳು ಬ್ರಾಹ್ಮಣರು, ಆರ್ಯರು, ಉತ್ತರ ಭಾರತದವರು, ತಮಿಳರು ಸಂಪೂರ್ಣ ಭಿನ್ನವಾದ ದ್ರಾವಿಡ ಸಂಸ್ಕೃತಿಗೆ ಸೇರಿದವರು ಎಂಬ ವಾದ ಮಂಡಿಸಿದ. ತಮಿಳು ಭಾಷೆಗೂ ಸಂಸ್ಕೃತಕ್ಕೂ ಸಂಬಂಧವಿಲ್ಲವೆಂದು ವಾದಿಸಿದ. ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಆಡಳಿತವು ಸಿವಿಲ್ ಸರ್ವಿಸ್‌ನಲ್ಲಿ ಇಂಗ್ಲಿಷಿನ ಜೊತೆ ತಮಿಳನ್ನು ಸೇರಿಸಿತು. ನಂತರ ಬಂದವನೇ ರಾಬರ್ಟ್ ಕಾಲ್ಡ್‌ವೆಲ್. ಈತ ತಿರುನಲ್ವೇಲಿಗೆ ಆ್ಯಂಗ್ಲಿಕನ್ ಬಿಷಪ್ ಆಗಿ ಬಂದ. ಜಾತೀಯ, ಸಾಂಸ್ಕೃತಿಕ ಭಿನ್ನತೆ ಸೃಷ್ಟಿಸಿದ. ನಂತರ ಒಂದು ರಾಜಕೀಯ ವೇದಿಕೆಯನ್ನು ಸೃಷ್ಟಿಸುವ ಯೋಜನೆ ನಡೆಯಿತು. ಈ ಕಾಲ್ಡ್‌ವೆಲ್ 'ಕಂಪೇರಿಟೀವ್ ಗ್ರಾಮರ್ ಆಫ್ ದ ದ್ರಾವಿಡಿಯನ್ ಲ್ಯಾಂಗ್ವೇಜಸ್' ಎಂಬ ಗ್ರಂಥ ರಚಿಸಿ ತಮಿಳು ಹಾಗೂ ದಕ್ಷಿಣದ ದ್ರಾವಿಡಿಯನ್ ಭಾಷೆಗಳಿಗೂ ಉತ್ತರ ಭಾರತದ ಭಾಷೆ, ಸಂಸ್ಕೃತಿಗಳಿಗೂ ಸಂಬಂಧವಿಲ್ಲ ಹಾಗೂ ದ್ರಾವಿಡ ಭಾಷೆಗಳು ಸ್ವತಂತ್ರ ಭಾಷೆಗಳು ಎಂಬ ನರೇಟಿವ್ ಸೃಷ್ಟಿಸಿದ. ಬ್ರಿಟಿಷ್ ಸರಕಾರದ ಸಹಾಯವಿದ್ದುದರಿಂದ ಆಂಗ್ಲ ಶಾಲೆಗಳನ್ನು ತೆರೆದು ಇಂಗ್ಲಿಷ್ -ತಮಿಳಿಗೆ ಪ್ರಾಧಾನ್ಯತೆ ನೀಡಲು ಸುಲಭವಾಯಿತು. ಅವರಿಗೆ ತಮ್ಮ ದ್ರಾವಿಡ ಸಿದ್ಧಾಂತ, ಆರ್ಯ ಆಕ್ರಮಣ ಹಾಗೂ ಉತ್ತರ ದಕ್ಷಿಣ ಭೇದಗಳನ್ನು ಮಕ್ಕಳಲ್ಲಿ ತುಂಬುವ ಕಾರ್ಯ ಪ್ರಾರಂಭವಾಯಿತು. ಹಿಂದುಗಳೆಂದರೆ ಬ್ರಾಹ್ಮಣರು, ಉತ್ತರ ಭಾರತದವರು, ಆರ್ಯರು. ದನಗಾಹಿಗಳಾದ ಅವರು ಹೊರಗಿನಿಂದ ಅಂದರೆ ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದು ಇಲ್ಲಿನ ಮೂಲನಿವಾಸಿಗಳಾಗಿದ್ದ ದ್ರಾವಿಡರನ್ನು ಸೋಲಿಸಿ ದಕ್ಷಿಣಕ್ಕೆ ಓಡಿಸಿದರು. ಈ ಬ್ರಾಹ್ಮಣರು ನಿರಂತರವಾಗಿ ದ್ರಾವಿಡರನ್ನು ಶೋಷಣೆ ಮಾಡಿದರು ಎಂಬಿತ್ಯಾದಿ ಕಾಗಕ್ಕ-ಗೂಬಕ್ಕ ಕತೆಗಳನ್ನು ಕಟ್ಟಿ ಮಕ್ಕಳ ಮನಸ್ಸಿನಲ್ಲಿ ಬಿತ್ತಿದರು. ಇದು ಕ್ರಮೇಣ ಹಿಂದು ತಮಿಳು ಜನಾಂಗದ ಮೆದುಳಿನಲ್ಲಿ ಇಳಿದು ಭದ್ರವಾಗತೊಡಗಿತು. ಇಂದಿನ 'ದಲಿತ' ಎಂಬ ಹೊಸ ಪದ ಈ ದ್ರಾವಿಡ ಮೂಲದ್ದೆ ಆಗಿದೆ. ಇದರಿಂದಾಗಿ ಅಲ್ಲಿ ಬಹು ಸಂಖ್ಯೆಯಲ್ಲಿರುವ ಹಿಂದುಳಿದವರು 'ದಲಿತ' ಎಂಬ ಹೆಸರಿನಲ್ಲಿ ತಮಗೆ ಪ್ರತ್ಯೇಕ ದ್ರಾವಿಡ ಸ್ಥಾನ ಬೇಕು ಎಂಬ ಬೇಡಿಕೆ ಇಡಲಾರಂಭಿಸಿದರು. ಇದಕ್ಕೊಂದು ರಾಜಕೀಯ ವೇದಿಕೆ ಬೇಕಾಗಿತ್ತು. 1916ರಲ್ಲಿ ಸಿ. ನಟೇಶ್ ಮೊದಲಿಯಾರ್, ಪಿ.ಎಂ. ನಾಯರ್, ತ್ಯಾಗರಾಜ ಶೆಟ್ಟಿ ಮುಂತಾದ ಬ್ರಿಟಿಷ್ ಪರ ವ್ಯಕ್ತಿಗಳು ಸೇರಿ ಜಸ್ಟೀಸ್ ಪಾರ್ಟಿ ಸ್ಥಾಪಿಸಿದರು. ಇದು ಬ್ರಿಟಿಷರ ಪರವಾಗಿತ್ತು. ಸರಕಾರದ ಸಹಾಯದಿಂದ ಶಾಲೆಗಳನ್ನು ಪ್ರಾರಂಭಿಸಿದರು. ಗುರುಕುಲಗಳು, ಸಂಸ್ಕೃತ ಹಾಗೂ ವೇದಾಧ್ಯಯನ ಮೂಲೆಗುಂಪಾದವು. ಬ್ರಾಹ್ಮಣೇತರರಿಗೆ ಮೀಸಲಾತಿ ಬೇಕೆಂಬ ನಿರ್ಣಯ ಮಂಡಿಸಿದರು. ಹೀಗೆ ಹಿಂದು ಸಮಾಜದಲ್ಲಿ ಒಡಕು ಮೂಡಿಸುವಲ್ಲಿ ಬ್ರಿಟಿಷರು- ಮಿಷನರಿಗಳು ಯಶಸ್ವಿಯಾದರು.

ನಂತರ ಬಂದವರು ಪೆರಿಯಾರ್ ಇ. ವಿ.ರಾಮಸ್ವಾಮಿ ನಾಯ್ಕರ್. ಇವರು ಪಕ್ಕಾ ನಾಸ್ತಿಕರು. ಹಿಂದು ವಿರೋಧಿ, ಬ್ರಾಹ್ಮಣ ವಿರೋಧಿ. ನಾಟಕ, ಭಾಷಣಗಳ ಮೂಲಕ ದ್ರಾವಿಡ- ದಲಿತವಾದವನ್ನು ಗಟ್ಟಿಗೊಳಿಸಿದರು. ಇವರ ಶಿಷ್ಯ ಅಣ್ಣಾದೊರೈ ಹಾಗೂ ಕರುಣಾನಿಧಿ. ಇವರು ನಾಟಕ, ಸಿನಿಮಾ, ಭಾಷಣಗಳ ಮೂಲಕ ಹಿಂದು ವಿರೋಧ ಮುಂದುವರಿಸಿದರು. ಅದಕ್ಕಾಗಿ 1949ರಲ್ಲಿ ಡಿ.ಎಂ.ಕೆ (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷವನ್ನು ಸ್ಥಾಪಿಸಿದರು. 1967ರಲ್ಲಿ ಮೊದಲ ದ್ರಾವಿಡ ಸರಕಾರ ಅಧಿಕಾರಕ್ಕೆ ಬಂತು. 1968ರಲ್ಲಿ ಚೆನ್ನೈನ ಮರಿನಾ ಬೀಚಿನಲ್ಲಿ ರಾಬರ್ಟ್ ಕಾಲ್ಡ್‌ವೆಲ್ ಮೂರ್ತಿ ಸ್ಥಾಪಿಸಲಾಯಿತು. 2010ರಲ್ಲಿ ಆತನ ಚಿತ್ರವಿರುವ ಅಂಚೆ ಚೀಟಿ ಬಿಡುಗಡೆ ಮಾಡಲಾಯಿತು.

1996ರ ಲೋಕಸಭಾ ಚುನಾವಣೆಯಲ್ಲಿ ವಾಜಪೇಯಿ ನೇತೃತ್ವದಲ್ಲಿ ಬಿಜೆಪಿ ಅತಿ ದೊಡ್ಡ ಬಹುಮತದ ಪಕ್ಷವಾದರೂ ಸಂಖ್ಯಾ ಬಲವಿಲ್ಲದೆ 13 ದಿನದೊಳಗೆ ಪತನವಾಯಿತು. ನಂತರ ಜಯಲಲಿತಾ ತಮಿಳ್ನಾಡಿನ ಎಐಡಿಎಂಕೆ ಮುಖ್ಯಮಂತ್ರಿಯಾಗಿದ್ದಾಗ ಅವರ ಪಕ್ಷದ 27 ಸಂಸತ್ ಸದಸ್ಯರ ಬೆಂಬಲ ವಾಜಪೇಯಿಗೆ ಲಭಿಸಿ ಅವರು ಮತ್ತೆ ಪ್ರಧಾನಿಯಾದರು. ಆದರೆ ಜಯಲಲಿತಾ ತನ್ನ ಬೆಂಬಲ ಹಿಂತೆಗೆದುಕೊಂಡುದುದರಿಂದ ಒಂದೇ ಒಂದು ಓಟಿನ ಕೊರತೆಯಿಂದ ವಾಜಪೇಯಿ ಸರಕಾರ ಬಿದ್ದು ಹೋಯಿತು. ಆಗ ಕರುಣಾನಿಧಿ ಹಾಗೂ ಅವರ ಡಿಎಂಕೆ ಪಕ್ಷ ವಾಜಪೇಯಿಗೆ ಬೆಂಬಲ ನೀಡಿದ್ದರಿಂದ ವಾಜಪೇಯಿ ಮತ್ತೆ ಪ್ರಧಾನಿಯಾದರು.

ಇತ್ತೀಚೆಗೆ ಜೋಸೆಫ್ ವಿಜಯ್ ಪ್ರಧಾನಿ ಮೋದಿಯವರ ಭೇಟಿ ಮಾಡಿ ಇಂಡಿಕೂಟದಿಂದ ಹೊರಬಂದು ಲೋಕಸಭೆಯಲ್ಲಿ ಪ್ರತ್ಯೇಕ ಆಸನ ನೀಡಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಈಗ ತಮಿಳ್ನಾಡಿನಲ್ಲಿ ಬಿಜೆಪಿ ನೆಲೆ ಕಂಡುಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಹಿಂದುಗಳಲ್ಲಿ ವಿಶೇಷವಾಗಿ ಅಲ್ಲಿನ ದಲಿತ ಎಂದು ಕರೆಸಿಕೊಳ್ಳುವ ಹಿಂದುಳಿದವರ ಜೊತೆ ಪ್ರೀತಿಯಿಂದ ವ್ಯವಹರಿಸಿ ಅವರ ಮನೆಗೆದ್ದು ಅವರ ಮಾನಸಿಕತೆಯಲ್ಲಿ ಬದಲಾವಣೆ ತರುವ ಅಗತ್ಯವಿದೆ. ಅದು ತಕ್ಷಣವೇ ಆಗುತ್ತದೆ ಎಂದು ಹೇಳಲಾಗುವುದಿಲ್ಲ.

ಡಿಎಂಕೆಯವರು ರಚಿಸಿದ ಸಿನಿಮಾಗಳು, ನಾಟಕಗಳು ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿವೆ. ಜಯಲಲಿತಾ, ಎಂ.ಜಿ. ರಾಮಚಂದ್ರನ್, ಈಗ ಜೋಸೆಫ್ ವಿಜಯ್ ಎಲ್ಲರೂ ಸಿನಿಮಾ ನಟರೇ. ತಮಿಳ್ನಾಡಿನ ಜನರು ಸಿನಿಮಾ ನಟರ ಮಾತಿಗೆ ಹುಚ್ಚರಾಗಿ ಬೆಂಬಲಿಸುತ್ತಾರೆ. ಜೋಸೆಫ್ ವಿಜಯರ ಭಾರೀ ಗೆಲುವಿಗೆ ತಮಿಳರ ಈ ಮನಸ್ಥಿತಿಯೂ ಕಾರಣ. ಹಾಗಾಗಿ ಇಲ್ಲಿ ಬದಲಾವಣೆ ತರಬೇಕಾದರೆ ಬಿಜೆಪಿ ಹಾಗೂ ಹಿಂದುಗಳು ಬಹಳ ಹೋಂವರ್ಕ್ ಮಾಡಿ ಎಚ್ಚರಿಕೆಯಿಂದ ಹೆಜ್ಜೆ ಇರುವ ಅಗತ್ಯವಿದೆ. ಹಾಗೆಂದು ನಿರಾಶೆಗೆ ಅವಕಾಶವಿಲ್ಲ. ಮುಂದೊಂದು ದಿನ ಗೆಲುವು ನಿಶ್ಚಿತ.

ಮಜ್ಜಿಗೆಯಿಂದ ಹಾಲು ರೂಪಾಂತರ

ಅಣುರಪ್ಯಸತಾಂ ಸಂಗಃ ಸದ್ಗುಣಂ ಹಂತಿ ವಿಸ್ತೃತಮ್ ।
ಗುಣರೂಪಾಂತರಂ ಯಾನಿ ತಕ್ರಯೋಗಾದ್ ಯಥಾ ಪಯಃ ॥

-ಸುಭಾಷಿತ ರತ್ನಭಾಂಡಾಗಾರ

ಮಜ್ಜಿಗೆಯ ಸಹಯೋಗದಿಂದ ಹಾಲು ರೂಪಾಂತರ ಹೊಂದುವಂತೆ ಅಸತ್ಪುರುಷರ ಸಂಗವು ಅಣುವಿನಷ್ಟಾದರೂ ಸಾಕು, ಅಪಾರವಾದ ಸದ್ಗುಣಗಳನ್ನು ನಾಶಪಡಿಸುತ್ತದೆ - ಎಂಬುದು ಶ್ಲೋಕಾರ್ಥ.

ನಮ್ಮಲ್ಲಿ 'ಸಹವಾಸ ದೋಷ' ಎಂಬ ನುಡಿಗಟ್ಟಿದೆ. ಇದರ ಅರ್ಥ ಕೆಟ್ಟವರ ಸಹವಾಸ, ಗೆಳೆತನ ಮಾಡಿದರೆ, ಸಂಬಂಧ ಬೆಳೆಸಿದರೆ ಕೆಟ್ಟವನಾಗುತ್ತಾನೆ ಎಂಬುದು. ಹೆಚ್ಚಿನವರು ಹಾಳಾಗುವುದು ಈ ಸಹವಾಸದಿಂದ. ಕೆಟ್ಟವರ ಒಡನಾಟವಾದರೆ ಬಹು ಬೇಗನೆ ಕೆಟ್ಟ ಚಟಗಳನ್ನು ಕಲಿತು ಕೊಳ್ಳುತ್ತಾರೆ. ಹಾಗಾಗಿ ಹಿರಿಯರು 'ಗುಣ ನೋಡಿ ಗೆಳೆತನ ಮಾಡು' ಎನ್ನುತ್ತಾರೆ, ಎಚ್ಚರಿಸುತ್ತಾರೆ. ಕೆಟ್ಟವರ ಸಹವಾಸ ಮಾಡಿ ಕೆಡುವವರೇ ಜಾಸ್ತಿ. ಒಳ್ಳೆಯವರ ಒಡನಾಟ ಮಾಡಿ ಒಳ್ಳೆಯರಾಗುವವರ ಸಂಖ್ಯೆ ತೀರಾ ಕಡಿಮೆ. ಕೆಟ್ಟದ್ದರಲ್ಲಿರುವ ಆಕರ್ಷಣೆ. ಕೆಟ್ಟದ್ದನ್ನು ಮಾಡುವಾಗ ಸಿಗುವ ಮಜಾ ಒಳ್ಳೆಯದರಲ್ಲಿ ಸಿಗುವುದಿಲ್ಲ. ಸಿಗಬೇಕಾದರೂ ಅಂತಹ ಸಂಸ್ಕಾರ ಪಡೆದಿರಬೇಕು.

ಕೆಟ್ಟ ಹಣ್ಣಿನ ಜೊತೆಗೆ ಒಳ್ಳೆಯ ಹಣ್ಣನ್ನಿಟ್ಟರೆ ಅದೆಂದೂ ಒಳ್ಳೆಯದಾಗುವುದಿಲ್ಲ. ಅದೇ ಕೆಟ್ಟು ಹೋಗುತ್ತದೆ. ಸುವಾಸನೆಯ ಹೂವನ್ನು ಅಲ್ಪವೇ ದುರ್ವಾಸನೆ ಬರುವ ವಸ್ತುವಿನ ಜೊತೆಗಿರಿಸಿದರೆ ಸುಹಾಸನೆಯನ್ನೇ ಕೆಡಿಸುತ್ತದೆ.



ಕೆಡುವುದಕ್ಕೆ ಹೆಚ್ಚು ಬೇಕಾಗಿಲ್ಲ, ಒಳ್ಳೆಯ ಹಾಲಿಗೆ ಒಂದೆರಡು ಹುಳಿಯ ಹುಂಡು ಬಿದ್ದರೆ ಸಾಕು ಕೆಟ್ಟು ಹೋಗುತ್ತದೆ. ಒಳ್ಳೆಯ ಶುಭ್ರವಾದ ಬಟ್ಟೆಯ ಮೇಲೆ ಒಂದೆರಡು ಕಲೆ ಬಿದ್ದರೆ ಸಾಕು ಬಟ್ಟೆ ಅಂದವೇ ಮಾಯವಾಗಿ ಬಿಡುತ್ತದೆ. ಆದ್ದರಿಂದ ವ್ಯವಹರಿಸುವಾಗ ಎಚ್ಚರವಹಿಸಿದಷ್ಟು ಒಳ್ಳೆಯದು. ಅದರಲ್ಲಿಯೂ ದುಷ್ಟರ ಸಹವಾಸ ಮಾಡುವಾಗ, ಅವರೊಂದಿಗೆ ವ್ಯವಹಾರ ಮಾಡುವಾಗ ಜಾಗ್ರತೆ ವಹಿಸಿದಷ್ಟೂ ಕಡಿಮೆ.

ಅಸತ್ಪುರುಷರ, ಅವಿವೇಕಿಗಳ ಸಹವಾಸ ಅಣುವಿನಷ್ಟಾದರೂ ಮಹತ್ತಾದ ನಷ್ಟವನ್ನೇ ಉಂಟುಮಾಡುತ್ತದೆ. ಅಪಾರವಾದ ಸದ್ಗುಣವನ್ನು ನಾಶಪಡಿಸುತ್ತದೆ. ಒಮ್ಮೆ ನಾಶವಾದರೆ ಪುನಃ ತುಂಬಿಕೊಳ್ಳುವುದು ಕಷ್ಟ ಸಾಧ್ಯ.

ಹಾಲು ಅಮೃತಕ್ಕೆ ಸಮಾನ. ಮಗುವಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಈ ಪಾತ್ರೆ ತುಂಬಾ ಹಾಲಿದ್ದರೂ ಅದಕ್ಕೆ ಒಂದಿಷ್ಟು ಮೊಸರು ಬಿದ್ದರೆ ಪಾತ್ರೆಯಲ್ಲಿರುವ ಹಾಲು ಹಾಲಾಗಿ ಉಳಿಯದೆ ಮೊಸರಾಗಿ ಪರಿವರ್ತನೆ ಹೊಂದುತ್ತದೆ. ಹಾಲು ಮೊಸರಾಗಲು ಹೆಚ್ಚೇನು ಮೊಸರು ಬೇಕಿಲ್ಲ, ಸ್ವಲ್ಪವೇ ಸಾಕು. ಹಾಲಿನ ಪಾತ್ರೆಯನ್ನು ಮೊಸರಿನ ಪಾತ್ರೆಯನ್ನಾಗಿಸುತ್ತದೆ. ಹಾಲು ಮೊಸರಾಗುವುದನ್ನು ತಡೆಯಲೂ ಸಾಧ್ಯವಿಲ್ಲ, ಅದನ್ನು ಹಾಲಾಗಿ ಪರಿವರ್ತಿಸಲೂ ಸಾಧ್ಯವಿಲ್ಲ.

ಅಸತ್ಪುರುಷರ ಸಹವಾಸವು ಇದೇ ಪರಿಣಾಮವನ್ನು ಬೀರಬಲ್ಲದು. ಅವರ ಸಹವಾಸಕ್ಕೆ ಸಿಕ್ಕಿಕೊಂಡರೆ ಕಬ್ಬಿನ ಗಾಣಕ್ಕೆ ಕೈ ಕೊಟ್ಟಂತೆ. ಹಿಂದಿರುಗುವುದು ಕಷ್ಟ ಸಾಧ್ಯ. ಆದ್ದರಿಂದ ಎಚ್ಚರವಹಿಸಿ ಗೆಳೆತನಕ್ಕೆ, ಒಡನಾಟಕ್ಕೆ ಮುಂದಾಗಬೇಕು. ಬದುಕನ್ನು ಮೇಲೆತ್ತುವುದಕ್ಕೂ ಸಹವಾಸವೇ ಕಾರಣ. ಕೆಳಕ್ಕೆ ತಳ್ಳುವುದಕ್ಕೂ ಸಹವಾಸವೇ ಕಾರಣ. ತತ್ಪುರುಷರ ಸಂಗ ಮಾಡಿ ಸಜ್ಜನರಾಗೋಣ. ಅಸತ್ಪುರುಷರ ಸಹವಾಸ ಮಾಡಿ ಅವಿವೇಕಿಗಳಾಗದೆ ಇರೋಣ.

ಪತ್ರ ಮಿತ್ರ

ಹಿಂದುಗಳ ಕಡೆಗಣನೆ ಏಕೆ?

ಭಟ್ಕಳ ತಾಲೂಕಿನ ವೆಂಕಟಾಪುರ ಪ್ರದೇಶದಲ್ಲಿ ಹಿಂದುಗಳ ಧಾರ್ಮಿಕ ನಂಬಿಕೆಗೆ ಸಂಬಂಧ ಪಟ್ಟ 'ಮುರಿಕಟ್ಟೆ'ಯನ್ನು ರಸ್ತೆ ಅಗಲೀಕರಣ ಸಂದರ್ಭ ತೆರವುಗೊಳಿಸಲಾಗಿತ್ತು. ಈಗ ರಸ್ತೆಗೆ ಬಾಧಕವಾಗದ ರೀತಿಯಲ್ಲಿ ಇನ್ನೊಂದು ಸ್ಥಳದಲ್ಲಿ ಕಟ್ಟೆಯನ್ನು ಪುನರ್ ನಿರ್ಮಾಣ ಮಾಡಲು ಹೋದ ಹಿಂದೂ ಪ್ರಮುಖರನ್ನು ಪೊಲೀಸರು ವಶಕ್ಕೆ ಪಡೆದು ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಇದು ಏನನ್ನು ಸೂಚಿಸುತ್ತದೆ. ನಮ್ಮ ದೇಶದಲ್ಲೇ ನಮಗೆ ನಮ್ಮ ಧರ್ಮಾನುಸಾರ ನಡೆಯುವ ಅವಕಾಶವಿಲ್ಲವೆಂದೆ? ಪೊಲೀಸರೇನು ಅವರಷ್ಟಕ್ಕೇ ಈ ನಿರ್ಧಾರ ತೆಗೆದುಕೊಂಡಿರಲಾರರು. ಸರಕಾರದ ಕಡೆಯಿಂದ ಅದಕ್ಕೆ ಸೂಕ್ತ ಆದೇಶ ಬಂದಿರಲೇ ಬೇಕಲ್ಲವೆ? ಹಾಗಿದ್ದರೆ, ಸರಕಾರವು ಎಲ್ಲರನ್ನು ಸಮಾನವಾಗಿ ನೋಡುವುದನ್ನು ಬಿಟ್ಟು ಕೆಲವರ ಹಿತಾಸಕ್ತಿಯನ್ನಷ್ಟೇ ಕಾಯುತ್ತಿದೆ ಎಂದರ್ಥವೆ? ಧಾರ್ಮಿಕ ಸ್ವಾತಂತ್ರ್ಯ ಹಿಂದುಗಳಿಗೂ ಇಲ್ಲವೆ? ಅಭಿವೃದ್ಧಿ ದೃಷ್ಟಿಯಿಂದ ಈ ಹಿಂದೆ ಇದ್ದ ಸ್ಥಳವನ್ನು ಬಿಟ್ಟುಕೊಟ್ಟಿದ್ದೇ ದಡ್ಡತನವಾಯಿತೆ ? ಹಿಂದುಗಳೆಂದೂ ಸಂಕುಚಿತ ಭಾವದಿಂದ ಯೋಚಿಸುವುದಿಲ್ಲ. ದೇಶದ ಅಭಿವೃದ್ಧಿಯ ವಿಷಯದಲ್ಲಿ ಸಹಕಾರ ನೀಡುತ್ತಾರೆ.

ಇಂದು, ಭಟ್ಕಳ ಅಂದಕೂಡಲೇ ಅದು ಮುಸ್ಲಿಮರದ್ದು ಅಂದುಕೊಂಡವರೂ ಇದ್ದಾರೆ. ಆದರೆ ಅಲ್ಲಿ ಹಿಂದುಗಳೂ ಸಾಕಷ್ಟು ಪ್ರಮಾಣದಲ್ಲಿದ್ದಾರೆ ಎಂಬುದನ್ನು ಮರೆಯಲಾಗದು ಮತ್ತು ಮರೆಯಬಾರದು. ಈ ಹಿಂದೆಯೂ, ಭಟ್ಕಳದಲ್ಲಿ ಹಿಂದುಗಳ ಮೇಲೆ ಮಾರಣಾಂತಿಕ ಹಲ್ಲೆಗಳೂ ನಡೆದಿವೆ. ಇದಕ್ಕೆಲ್ಲ ಕಾರಣ ಅವರಿಗೆ ಸರಕಾರದಿಂದ ಸಿಗುತ್ತಿರುವ ಬೆಂಬಲ. ಈಗಷ್ಟೇ ರಾಜ್ಯ ಸರಕಾರ ಮುಸ್ಲಿಮರ ಮೇಲಿನ ಹಲವಾರು ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆದ ಬೆಳವಣಿಗೆಯೂ ನಡೆದಿದೆ. ಕಾಂಗ್ರೆಸ್ ಆಳ್ವಿಕೆಯಿರುವಲ್ಲೆಲ್ಲ ಈ ರೀತಿ ಅಲ್ಪಸಂಖ್ಯಾತ ಓಲೈಕೆ ನಡೆಯುತ್ತಿರುವುದೇಕೆ? ಹಿಂದುಗಳನ್ನೇಕೆ ಕಡೆಗಣಿಸಲಾಗುತ್ತಿದೆ?

-ಶಂಕರನಾರಾಯಣ ಭಟ್, ಮಾಡಗೇರಿ

ಮಾವು ಆಮದಿಗೆ ನಿಷೇಧ

ಜಪಾನ್ ಭಾರತದಿಂದ ಮಾವುಗಳ ಆಮದಿಗೆ ನಿಷೇಧ ಹೇರಿರುವ ಬಗ್ಗೆ ವರದಿಯಾಗಿದೆ. ಅದಕ್ಕೆ ಕಾರಣ ಭಾರತದಲ್ಲಿ ಮಾವುಗಳ ಶೇಖರಣೆಯಲ್ಲಿ ಮತ್ತು ಮಾವುಗಳು ಹಣ್ಣಾಗುವಂತೆ ಮಾಡುವಲ್ಲಿ ಸರಿಯಾದ ನಿಯಮ ಪಾಲಿಸದಿರುವುದು. ಆಮದಿಗೆ ತಯಾರಾದ ಮಾವುಗಳನ್ನು ದಾಸ್ತಾನು ಮಾಡುವಲ್ಲಿ ದೊಡ್ಡ ಪ್ರಮಾಣದಲ್ಲಿ ನೊಣ ಹಾಗೂ ಕೀಟಗಳ ಹಾವಳಿಯಿರುವುದು ಕೂಡಾ ಜಪಾನೀಯರ ಅಸಮಾಧಾನಕ್ಕೆ ಕಾರಣವಾಗಿದೆಯಂತೆ. ಜಪಾನಿನ ತಪಾಸಕರು ಭಾರತದಲ್ಲಿ ಇಂತಹ ಗೋದಾಮುಗಳಿಗೆ ಭೇಟಿ ನೀಡಿ ಮಾವಿನ ಹಣ್ಣಿನ ಸಂಸ್ಕರಣೆಯಲ್ಲಿ ನಿಯಮ ಪಾಲಿಸದಿರುವುದು, ಅತಿಯಾದ ಪ್ರಮಾಣದಲ್ಲಿ ಕೀಟ ನಾಶಕ ಬಳಸುತ್ತಿರುವುದನ್ನು ಕಂಡುಕೊಂಡ ಬಳಿಕ ಈ ವರ್ಷ ಮಾವು ಆಮದು ಮಾಡದಿರಲು ನಿರ್ಧರಿಸಿದ್ದಾರೆ. ಅತ್ತ ಅಮೆರಿಕದಲ್ಲಿ ಕೂಡಾ ಭಾರತದಿಂದ ಬರುವ ಮಾವಿನ ಹಣ್ಣುಗಳನ್ನು ಖರೀದಿಸಲು ಕೆಲವರು ಹಿಂದೇಟು ಹಾಕುವ ಪ್ರಸಂಗಗಳು ವರದಿಯಾಗುತ್ತಿವೆ.

ಈಗಾಗಲೆ ಭಾರತದಲ್ಲಿ ಹಣ್ಣುಗಳು ಬೇಗ ಕಳಿಯುವಂತೆ ಮಾಡಲು ರಾಸಾಯನಿಕಗಳನ್ನು ಬಳಸುವ ಕುರಿತಂತೆ, ದೊಡ್ಡ ಪ್ರಮಾಣದಲ್ಲಿ ಕೀಟನಾಶಕಗಳನ್ನು ಬಳಸುವ ಕುರಿತಂತೆ ಆರೋಪಗಳಿವೆ. ನಮಗೆ ನೈಸರ್ಗಿಕವಾಗಿ ಮಾಗಿದ ಹಣ್ಣುಗಳು ಸಿಗುವುದೇ ಅಪರೂಪ ಎಂಬಂತಾಗಿದೆ. ನಮ್ಮ ಸರಕಾರಗಳು ಕೂಡಾ ಹಣ್ಣುಗಳನ್ನು ಕೃತಕವಾಗಿ ಮಾಗಿಸುವುದರ ವಿರುದ್ಧ, ರಾಸಾಯನಿಕ ಬಳಸುವುದರ ವಿರುದ್ಧ ಕ್ರಮ ಕೈಗೊಳ್ಳಬೇಕು.

-ಚಿದಂಬರ ರಾವ್, ಕುಂದಾಪುರ

ರೈತರಿಗೆ ಅನ್ಯಾಯ

ಬೆಂಗಳೂರಿನ ಸುತ್ತಮುತ್ತಲಿನ ಹಸಿರು ವಲಯವನ್ನು ನುಂಗಿ ಹಾಕಲು ಹೊರಟಿರುವ ಬೃಹತ್ ಉಪನಗರ ಯೋಜನೆಗಳು ಕೇವಲ ಅಧಿಕೃತ ರಿಯಲ್ ಎಸ್ಟೇಟ್ ದಂಧೆಯಾಗಿ ಮಾರ್ಪಟ್ಟಿದೆ ಎಂಬುದು ಜನಜನಿತ. ಕೃಷಿ ಪ್ರಧಾನ ವಲಯವಾಗಿರುವ ಬಿಡದಿಯ ತೆಂಗು, ಹಿಪ್ಪನೇರಳೆ ಬೆಳೆಯುವ ಫಲವತ್ತಾದ 8000 ಕ್ಕೂ ಹೆಚ್ಚು ಎಕರೆ ನೀರಾವರಿ ಭೂಮಿಯನ್ನು ಬಲವಂತವಾಗಿ ಕಸಿದುಕೊಳ್ಳುತ್ತಿರುವುದು ಅತ್ಯಂತ ಕ್ರೂರ ಹಾಗೂ ಅಮಾನವೀಯ ಕ್ರಮ. ರೈತರ ಜಮೀನಿಗೆ ಕೇವಲ ತಲಾ 2 ಕೋಟಿ ರೂಪಾಯಿ ನಿಗದಿಪಡಿಸಿ, ಖಾಸಗಿ ಹಿತಾಸಕ್ತಿಗಳ ಜಾಗಕ್ಕೆ ಬರೋಬ್ಬರಿ 14 ಕೋಟಿ ರೂಪಾಯಿ ಬೆಲೆ ಕಟ್ಟುವುದು ಸರ್ಕಾರದ ಪರಮ ವಂಚನೆ ಮತ್ತು ಹಗಲು ದರೋಡೆ. ಶೇಕಡಾ 80ರಷ್ಟು ರೈತರು ಸಮ್ಮತಿಸಿದ್ದಾರೆ ಎಂದು ಆಡಳಿತಶಾಹಿ ಸುಳ್ಳು ಹೇಳುತ್ತಿದೆ. ಸೈಟುಗಳ ಮಾರಾಟ ಮತ್ತು ತೆರಿಗೆಯ ಮೂಲಕ ಬಡ ಅನ್ನದಾತರನ್ನು ಬೀದಿಗೆ ತಳ್ಳಿ 40,000 ಕೋಟಿ ರೂಪಾಯಿಗೂ ಅಧಿಕ ಹಣ ಲೂಟಿ ಮಾಡಲು ಹೊರಟಿರುವ ಈ ಜನವಿರೋಧಿ ಯೋಜನೆ ತಕ್ಷಣ ನಿಲ್ಲಿಸಬೇಕಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಈ ದಲ್ಲಾಳಿ ಆಡಳಿತ ಖಂಡನೀಯ.

-ಡಾ. ವಿಜಯಕುಮಾರ್, ರಾಯಚೂರು

ಹಳಿಯೇರಬಹುದೆ ?

ಮಲೆನಾಡು-ಕರಾವಳಿಯನ್ನು ಬೆಸೆಯುವ ಹಾಗೂ ಪಶ್ಚಿಮಘಟ್ಟವನ್ನು ಸೀಳಿ ಹಾದುಹೋಗುವ ಶಿವಮೊಗ್ಗಾ- ಶೃಂಗೇರಿ- ಮಂಗಳೂರು ರೈಲುಮಾರ್ಗ ನಿರ್ಮಿಸುವ ಬೃಹತ್ ಯೋಜನೆ ಡಿಪಿಆರ್ ಸಲ್ಲಿಸುವ ಹಂತದಲ್ಲಿದ್ದು, ಈ ಭಾಗದ ಜನರ ದಶಕಗಳ ಕನಸು ನನಸಾಗುವ ಸಾಧ್ಯತೆ ಕಾಣುತ್ತಿದೆ. ಆದರೆ, ಕರಾವಳಿಯನ್ನು ಕರ್ನಾಟಕದ ಉತ್ತರ ಹಿನ್ನಾಡಿಗೆ ಸೇರಿಸುವ, ಪಶ್ಚಿಮಘಟ್ಟದಲ್ಲಿ ಹಾದುಹೋಗುವ 162 ಕಿಮೀ ಉದ್ದದ ಹುಬ್ಬಳ್ಳಿ-ಅಂಕೋಲಾ ರೈಲು ಯೋಜನೆಗೆ 1998ರಲ್ಲಿ ಅಂದಿನ ಪ್ರಧಾನಿ ವಾಜಪೇಯಿಯವರು ಅಡಿಗಲ್ಲು ಹಾಕಿದ್ದರು. ಅದಕ್ಕೆ ಈಗಾಗಲೇ ಸುಮಾರು 400 ಕೋಟಿ ವ್ಯಯವಾಗಿದ್ದರೂ ಪರಿಸರ ಸಂಬಂಧಿ ವಿರೋಧದಿಂದ ಹಳಿತಪ್ಪಿ ಆಡಳಿತಾತ್ಮಕ ಅನುಮತಿ ಮತ್ತು ಅನುದಾನಕ್ಕೆ ಕಾಯುತ್ತಿದೆ. ಹಾಗಿರುವಾಗ ಪ್ರಸ್ತಾವಿತ ಶಿವಮೊಗ್ಗಾ-ಮಂಗಳೂರು ಯೋಜನೆಯೂ ಅದೇ ಹಾದಿಯನ್ನು ಹಿಡಿಯುವ ಸಾಧ್ಯತೆ ಇದೆ. ಪರಿಸರವಾದಿಗಳು ಇಲ್ಲೂ ರೆಡ್ ಸಿಗ್ನಲ್ ತೋರಿಸುವುದನ್ನು ಅಲ್ಲಗಳೆಯಲಾಗದು.

ಮಲೆನಾಡನ್ನು ಕರಾವಳಿಗೆ ಸೇರಿಸುವ ಇನ್ನೊಂದು ರೈಲು ಯೋಜನೆ ತಾಳಗುಪ್ಪಾ -ಹೊನ್ನಾವರ ಮಾರ್ಗ ಕೂಡಾ ಪರಿಸರ ಸಂಬಂಧಿ ಕಾರಣದಿಂದ ದಶಕಗಳಿಂದ ಹಳಿ ಏರಲು ಕಾಯುತ್ತಿದೆ. ಹಾಗಾಗಿ ಶಿವಮೊಗ್ಗಾ- ಮಂಗಳೂರು ರೈಲು ಯೋಜನೆ ಶ್ಲಾಘನೀಯವಾದರೂ ಅದು ಅನುಷ್ಠಾನಗೊಳ್ಳುವುದು ಸಂದೇಹ ಅನಿಸುತ್ತದೆ.

-ರಮಾನಂದ ಎಸ್, ಬೆಂಗಳೂರು

ಕಿರುಸುದ್ದಿ

ನಟ ದರ್ಶನ್ ಫಾರ್ಮ್ ಹೌಸ್ ಕುದುರೆಗಳ ಮಾರಾಟ

ಮೈಸೂರು: ಚಿತ್ರ ದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿ ಪ್ರಸ್ತುತ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ದಿನಗಳನ್ನು ಕಳೆಯುತ್ತಿರುವ ಚಿತ್ರ ನಟ ದರ್ಶನ್ ಅವರ ಮೈಸೂರಿನ ಫಾರ್ಮ್‌ಹೌಸ್‌ನಲ್ಲಿದ್ದ ಪ್ರಾಣಿಗಳನ್ನು ಇದೀಗ ಮಾರಾಟ ಮಾಡಲಾಗುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ, ಮೈಸೂರು–ಟಿ.ನರಸೀಪುರ ರಸ್ತೆಯಲ್ಲಿರುವ ವಿನೀಶ್ ದರ್ಶನ್ ಮಾರ್ವಾರಿ ಸ್ಟಡ್ ಫಾರ್ಮ್‌ನ ಮುಂಭಾಗದಲ್ಲಿ ಬೃಹತ್ ಗಾತ್ರದ ಹಾರ್ಸ್ ಫಾರ್ ಸೇಲ್ (ಕುದುರೆಗಳು ಮಾರಾಟಕ್ಕಿವೆ) ಎಂಬ ಬೋರ್ಡ್ ಹಾಕಲಾಗಿದ್ದು, ಇದು ಸೋಶಿಯಲ್ ಮೀಡಿಯಾದಲ್ಲಿ ಭಾರಿ ಸಂಚಲನ ಸೃಷ್ಟಿಸಿದೆ. ದರ್ಶನ್ ಅವರು ಪ್ರಾಣಿ ಮತ್ತು ಸಾಕು ಕುದುರೆಗಳ ಮೇಲೆ ಅಪಾರ ಪ್ರೀತಿ ಹೊಂದಿದ್ದರು. ಈ ಫಾರ್ಮ್‌ಹೌಸ್‌ನಲ್ಲಿ ಕೇವಲ ಕುದುರೆಗಳು ಮಾತ್ರವಲ್ಲ, ಬರೋಬ್ಬರಿ 20ಕ್ಕೂ ಹೆಚ್ಚು ರೇಸ್ ಕುದುರೆಗಳು, ಎರಡು ಡಜನ್ ಹಸುಗಳು, ಅಪರೂಪದ ಹಳ್ಳಿಕಾರ್ ತಳಿಯ ಎತ್ತುಗಳು, ಕುರಿ, ಮೇಕೆಗಳು, ಎಮು ಪಕ್ಷಿಗಳು, ವಿದೇಶಿ ತಳಿಯ ಶ್ವಾನಗಳು, ಬಾತುಕೋಳಿಗಳು ಹಾಗೂ ಕತ್ತೆಗಳು ಸೇರಿದಂತೆ ಹತ್ತಾರು ಪ್ರಾಣಿಗಳನ್ನು ಪ್ರತ್ಯೇಕ ಗೂಡುಗಳಲ್ಲಿ ಅತ್ಯಂತ ಪ್ರೀತಿಯಿಂದ ಸಾಕುತ್ತಿದ್ದರು. ಈ ಫಾರ್ಮ್‌ನಲ್ಲಿರುವ ಕುದುರೆಗಳು ಸಾಮಾನ್ಯ ಕುದುರೆಗಳಲ್ಲ, ಇವೆಲ್ಲಾ ವಿದೇಶಗಳಿಂದ ಆಮದು ಮಾಡಿಕೊಳ್ಳಲಾದ ಅತ್ಯಂತ ದುಬಾರಿ ತಳಿಯ ರೇಸ್ ಕುದುರೆಗಳಾಗಿದ್ದು, ಇವುಗಳ ಮೌಲ್ಯವೇ ಲಕ್ಷಾಂತರ ರೂಪಾಯಿ ದಾಟುತ್ತದೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು ತೂಗುದೀಪ ಫಾರ್ಮ್‌ಹೌಸ್‌ನ ಮಾಜಿ ಪಶುವೈದ್ಯ ಡಾ. ರಾಮಚಂದ್ರ ಮಾತನಾಡಿ, ದರ್ಶನ್ ಅವರ ಫಾರ್ಮ್‌ನಲ್ಲಿರುವ ರೇಸ್ ಕುದುರೆಗಳು ನಿಜಕ್ಕೂ ಅತ್ಯಂತ ಅಮೂಲ್ಯವಾದ ಮತ್ತು ದುಬಾರಿ ತಳಿಯ ಕುದುರೆಗಳಾಗಿವೆ ಎಂದು ತಿಳಿಸಿದರು.

ಹಿಂದುಗಳು ಜಾಗೃತರಾಗದಿದ್ದರೆ ಸಂಕಷ್ಟ: ಸಂಜಯ್ ಧವಳೇಕರ್

ವಿಜಯಪುರ: ದೇಶದಲ್ಲಿ ಹಿಂದುಗಳ ಸಂಖ್ಯೆ ಕ್ಷೀಣಿಸುತ್ತಿದ್ದು ಇದರ ಬಗ್ಗೆ ಎಚ್ಚೆತ್ತು ಜಾಗೃತರಾಗದಿದ್ದರೆ ಮುಂದಿನ ದಿನಗಳಲ್ಲಿ ಸಂಕಷ್ಟಕ್ಕೆ ಸಿಲುಕುವ ಅನಿವಾರ್ಯತೆ ಎದುರಾಗಲಿದೆ ಎಂದು ವಿಎಚ್‌ಪಿ ಅಖಿಲ ಭಾರತೀಯ ವಿಶೇಷ ಸಂಪರ್ಕ ಪ್ರಮುಖ್ ಶ್ರೀ ಸಂಜಯ್ ಧವಳೇಕರ್ ಹೇಳಿದರು. ಪಟ್ಟಣದ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯದಲ್ಲಿ ವಿಶ್ವ ಹಿಂದು ಪರಿಷದ್ ಬೆಂಗಳೂರು ಗ್ರಾಮಾಂತರ ಜಿಲ್ಲೆ ವತಿಯಿಂದ ಆಯೋಜಿಸಿದ್ದ ಗಣ್ಯರೊಂದಿಗೆ ಸಂವಾದ ಮತ್ತು ಧರ್ಮ ರಕ್ಷಾ ನಿಧಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪಾಶ್ಚಿಮಾತ್ಯ ಸಂಸ್ಕೃತಿಗೆ ಮರುಳಾಗಿ ಇಂದು ಯುವಜನತೆ ವಿಭಿನ್ನ ಜೀವನ ಶೈಲಿಯಲ್ಲಿ ಬದುಕುತ್ತಿದ್ದಾರೆ. ಇದು ಮುಂದೆ ಒಂದು ದಿನ ಹಿಂದುಗಳ ಸಂಖ್ಯೆ ಕ್ಷೀಣಿಸಿ ದಬ್ಬಾಳಿಕೆಗೆ ಒಳಗಾಗುವ ಅನಿವಾರ್ಯತೆ ಎದುರಾಗಲಿದೆ. ಲವ್ ಜಿಹಾದ್, ಮತಾಂತರ ವಿರುದ್ಧ ಹಿಂದು ಸಮಾಜವನ್ನು ಇನ್ನಷ್ಟು ಗಟ್ಟಿಗೊಳಿಸಬೇಕು. ಹಿಂದುಗಳು ಒಗ್ಗಟ್ಟಾಗಬೇಕು ಹಾಗೂ ಹಿಂದುಗಳು ಜಾಗೃತಗೊಂಡು ದೇಶದ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಹಿಂದು ಎಂಬ ಭಾವನೆ ಮೂಡಬೇಕು ಎಂದರು. ವಿಎಚ್‌ಪಿ ಪ್ರಾಂತ ವಿಶೇಷ ಸಂಪರ್ಕ ವಿಭಾಗದ ಪ್ರಮುಖ್ ಮಂಜುನಾಥ ಸ್ವಾಮಿ ಮಾತನಾಡಿ, ಸಂಘಟನೆಗಳು ಬಲಗೊಳ್ಳಲು ಧ್ಯೇಯ, ನೇತೃತ್ವ, ಪ್ರಾಮಾಣಿಕತೆ, ಕಾರ್ಯಬದ್ಧತೆ, ಕಾರ್ಯಕರ್ತರ ತಂಡ ಇದ್ದರೆ ಮಾತ್ರವೇ ಸಾಧ್ಯ. ಹಿಂದು ಸಮಾಜದ ಅಭಿವೃದ್ಧಿಗಾಗಿ ಅನೇಕ ಯೋಜನೆ, ಉದ್ದೇಶಗಳನ್ನು ಇಟ್ಟುಕೊಂಡು ಸರ್ವವ್ಯಾಪಿ, ಸರ್ವಸ್ಪರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಾ ವಿಶ್ವ ಹಿಂದು ಪರಿಷದ್ ಬಂದಿದೆ ಎಂದು ಹೇಳಿದರು. ವಿಶ್ವ ಹಿಂದು ಪರಿಷದ್ ಪ್ರಾಂತ ಸಹ ವಿಶೇಷ ಪ್ರಮುಖ್ ಮುನಿರಾಜ್, ಕೋಲಾರ ವಿಭಾಗ ಕಾರ್ಯದರ್ಶಿ ಗೌರಿಶಂಕರ, ಬಜರಂಗದಳ ಕೋಲಾರ ವಿಭಾಗ ಸಂಯೋಜಕ್ ಕೃಷ್ಣಮೂರ್ತಿ ಸೇರಿದಂತೆ ವಿವಿಧ ಗಣ್ಯರು ಇದ್ದರು.

₹12 ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಅನುಮೋದನೆ

ಆನೇಕಲ್: ತಾಲೂಕಿನ ಯಮರೆ ಗ್ರಾಮ ಪಂಚಾಯಿತಿಯ ಬಿ.ಹೊಸಹಳ್ಳಿಯಲ್ಲಿ ಮೊದಲಸುತ್ತಿನ ಗ್ರಾಮಸಭೆಯನ್ನು ಆಯೋಜಿಸಲಾಗಿತ್ತು. ಗ್ರಾಮಸಭೆಯಲ್ಲಿ ತಾಲೂಕಿನ ಸಿಡಿಪಿಯು, ಕೃಷಿ ಇಲಾಖೆ, ಶಿಕ್ಷಣ ಇಲಾಖೆ, ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ತಮ್ಮ ಇಲಾಖೆಗೆ ಸಂಬಂಧಿಸಿದ ಸೌಲಭ್ಯಗಳ ಕುರಿತು ಸಾರ್ವಜನಿಕರೊಂದಿಗೆ ಮಾಹಿತಿಯನ್ನು ಹಂಚಿಕೊಂಡರು. ಯಮರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಜಯಶಂಕರ್ ಮಾತನಾಡಿ, ಯಮರೆ ಪಂಚಾಯಿತಿಗೆ ವಾರ್ಷಿಕ ವರಮಾನ 9 ಕೋಟಿ ರೂ.ಇದೆ. ಇದರಲ್ಲಿ ಕುಡಿಯುವ ನೀರು, ವಿದ್ಯುತ್, ರಸ್ತೆ, ಮಹಿಳಾ ಸಬಲೀಕರಣ, ಶೈಕ್ಷಣಿಕ ಅಭಿವೃದ್ಧಿ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಅನುದಾನಗಳನ್ನು ಮೀಸಲಿಡಲಾಗಿದೆ ಎಂದರು. 2026–27ನೇ ಸುತ್ತಿನ ಗ್ರಾಮಸಭೆಯಲ್ಲಿ ಸುಮಾರು 12 ಕೋಟಿ ರೂ.ವೆಚ್ಚದ ವಿವಿಧ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯಲಾಯಿತು. ಈ ಬಾರಿ ಇ ಖಾತೆಗಳು ಸರಿಯಾಗಿ ಆಗುತ್ತಿಲ್ಲ. ಹಾಗಾಗಿ ಇ ಖಾತೆಗೆ ತಾಂತ್ರಿಕ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸುವ ನಿಟ್ಟಿನಲ್ಲಿ ಸರಕಾರಕ್ಕೆ ಒತ್ತಾಯಿಸಲಾಗಿದೆ ಎಂದು ಅವರು ಹೇಳಿದರು. ಗ್ರಾಮಸಭೆಯಲ್ಲಿ ಪಂಚಾಯಿತಿ ಸದಸ್ಯರು, ಸಿಬ್ಬಂದಿ, ಶಿಕ್ಷಕರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರನ್ನು ಸನ್ಮಾನಿಸಲಾಯಿತು. ಈ ವೇಳೆ ಗ್ರಾಪಂ ಸದಸ್ಯರಾದ ಸುಲೋಚನಾ, ಕಾಂತರಾಜು, ಮುನಿಕೆಂಪಣ್ಣ, ರಾಜೇಶ್ವರಿ, ಮುನಿರಾಜು, ಭುವನೇಶ್, ಪುನೀತ್, ಗೀತಾ, ರೇಖಾ, ಗೌತಮಿ, ರಮೇಶ್ ರೆಡ್ಡಿ, ಪವಿತ್ರಾ ಜಯಪ್ರಕಾಶ್, ಕಮಲಾ, ಜ್ಯೋತಿ, ಕಾಂತಮ್ಮ, ವೀಣಾ, ಭುವನೇಶ್, ಪುನೀತ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಹೇಶ್, ಪಿಡಿಒ ಪ್ರವೀಣ್, ಬಿಲ್ ಕಲೆಕ್ಟರ್ ನಾರಾಯಣಸ್ವಾಮಿ ಮತ್ತಿತರರಿದ್ದರು.

ರಾಸಾಯನಿಕ ಗೊಬ್ಬರಗಳ ಬಳಕೆಗೆ ಕೃಷಿ ಇಲಾಖೆಯಿಂದ ಮಾರ್ಗಸೂಚಿ | ರೈತರಿಗೆ ಅಗತ್ಯ ಮಾಹಿತಿ

ಮುಂಗಾರು: ಬಿತ್ತನೆಗೆ ರೈತರ ಭರದ ಸಿದ್ಧತೆ



ದೊಡ್ಡಬಳ್ಳಾಪುರ: ಜಿಲ್ಲಾದ್ಯಂತ ಮುಂಗಾರು ಪೂರ್ವ ಮಳೆ ಆರಂಭವಾಗಿದ್ದು, ರೈತರು ಮುಂಗಾರು ಬಿತ್ತನೆಗೆ ಭೂಮಿಯನ್ನು ಹದಮಾಡಿಕೊಳ್ಳುವಲ್ಲಿ ಕಾರ್ಯ ಪ್ರವೃತ್ತರಾಗುತ್ತಿದ್ದಾರೆ. ಬಿತ್ತನೆಗೂ ಮುನ್ನ ರೈತರಿಗೆ ಉತ್ತಮ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಪೂರೈಕೆ ಹಾಗೂ ಸುರಕ್ಷಿತ ಕೀಟನಾಶಕಕಗಳ ಬಳಕೆ ಸಂಬಂಧ ಅಗತ್ಯ ಮಾಹಿತಿಯನ್ನು ಕೃಷಿ ಇಲಾಖೆ ಮಾಹಿತಿ ನೀಡಿದೆ.

ಈ ಬಾರಿ ಮುಂಗಾರು ಹಂಗಾಮಿಗೆ ಪ್ರಮುಖ ಬೆಳೆಗಳಾದ ರಾಗಿ–59,100 ಹೆಕ್ಟೇರ್, ಮುಸುಕಿನ ಜೋಳ–7000 ಹೆಕ್ಟೇರ್, ತೊಗರಿ–1000 ಹೆಕ್ಟೇರ್, ಅವರೆ –750 ಹೆಕ್ಟೇರ್, ಹುರುಳಿ–500 ಹೆಕ್ಟೇರ್, ಅಲಸಂದೆ–433 ಹೆಕ್ಟೇರ್, ಶೇಂಗಾ–195 ಹೆಕ್ಟೇರ್, ಹರಳು–150 ಹೆಕ್ಟೇರ್, ಭತ್ತ–100 ಹೆಕ್ಟೇರ್ ಹಾಗೂ ತೃಣ ಧಾನ್ಯಗಳು–10 ಹೆಕ್ಟೇರ್ ಒಟ್ಟು–69,548 ಹೆಕ್ಟೇರ್ ಪ್ರದೇಶಕದಲ್ಲಿ ಬಿತ್ತನೆ ಗುರಿ ನಿಗದಿಯಾಗಿದೆ. ರೈತ ಸಂಪರ್ಕ ಕೇಂದ್ರಗಳಲ್ಲಿ ತೊಗರಿ–17.2 ಕ್ವಿಂಟಲ್, ರಾಗಿ–154 ಕ್ವಿಂಟಲ್, ಅಲಸಂದೆ–7.2 ಕ್ವಿಂಟಲ್ ದಾಸ್ತಾನು ಇದೆ ಎಂದು ಅಂದಾಜಿಸಲಾಗಿದೆ.

ಬೆಳೆಗಳಿಗೆ ರಾಸಾಯನಿಕ ಗೊಬ್ಬರ ಬಳಕೆಗೆ ಶಿಫಾರಸ್ಸು: ಪೂರ್ವ ಮುಂಗಾರು ಆರಂಭದ ಬೆನ್ನೆಲೆ ಕೃಷಿ ಆಧಾರಿತ ಬೆಳೆಗಳ ಉತ್ತಮ ಇಳುವರಿ ಹಾಗೂ ಮಣ್ಣಿನ ಫಲವತ್ತತೆ ಕಾಪಾಡಲು ಸಂಯುಕ್ತ ರಾಸಾಯನಿಕ ರಸಗೊಬ್ಬರಗಳನ್ನು ಬಳಕೆ ಮಾಡುವಂತೆ ಕೃಷಿ ಇಲಾಖೆಯು ಶಿಫಾರಸ್ಸು ಮಾಡಿದೆ. ಜಿಲ್ಲೆಯ ಪ್ರಮುಖ ಬೆಳೆಯಾದ ರಾಗಿ ಬೆಳೆಗೆ ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಇವರ ಶಿಫಾರಸ್ಸಿನ ಸಾರಜನಕದ ಪ್ರಮಾಣವು ಒಂದು ಎಕರೆಗೆ 20 ಕೆಜಿ ಮಾತ್ರ. ಅಂದರೆ ಒಂದು ಎಕರೆಗೆ ಸುಮಾರು 45 ಕೆಜಿ ಯೂರಿಯಾ ನೀಡಬೇಕು. ಬಿತ್ತನೆ ಸಮಯದಲ್ಲಿ ಅರ್ಧದಷ್ಟು ಸಾರಜನಕವನ್ನು ಸಂಯುಕ್ತ ರಸಗೊಬ್ಬರ/ಡಿಎಪಿ ಮೂಲಕ ನೀಡುವುದು, ಉಳಿದ ಅರ್ಧದಷ್ಟು ಸಾರಜನಕವನ್ನು ಅಂದರೆ ಸುಮಾರು 22–23 ಕೆಜಿ ಯೂರಿಯಾ ಗೊಬ್ಬರವನ್ನು 2 ಹಂತಗಳಲ್ಲಿ ಅಂದರೆ ರಾಗಿ ಬೆಳವಣಿಗೆಯ 20–25 ದಿನಗಳೊಳಗಾಗಿ ಒಮ್ಮೆ ಹಾಗೂ ಮತ್ತೊಮ್ಮೆ 30–45 ದಿನಗಳೊಳಗಾಗಿ ಹಾಕಿದಾಗ ಉತ್ತಮ ಇಳುವರಿ ಬರಲು ಸಾಧ್ಯವಾಗುತ್ತದೆ. ಹೆಚ್ಚಾಗಿ ಹಾಕಿದ ಯೂರಿಯಾ ಮಣ್ಣು/ನೀರಿನ ಮೂಲಕ ವ್ಯರ್ಥವಾಗುತ್ತದೆ.

ರೈತರು ಆದಷ್ಟು ಬೇಸಾಯದ ಖರ್ಚು ಕಡಿಮೆ ಮಾಡಿಕೊಳ್ಳುವ/ಪರಿಸರದ ಹಾನಿ ತಪ್ಪಿಸುವ ಸಲುವಾಗಿ ಶಿಫಾರಸ್ಸಿತ ಪ್ರಮಾಣದಲ್ಲಿಯೇ ರಸಗೊಬ್ಬರಗಳನ್ನು ಖರೀದಿಸುವುದು ಉತ್ತಮ.

ರಸಗೊಬ್ಬರ ಖರೀದಿ ಪ್ರಮಾಣ: ಜಿಲ್ಲೆಯ ರೈತರಿಗೆ ಅಗತ್ಯ ಪ್ರಮಾಣದ ಶಿಫಾರಿತ ಪ್ರಮಾಣದಲ್ಲೇ ರಸಗೊಬ್ಬರಗಳನ್ನು ತರಿಸುವುದು ಅತ್ಯವಶ್ಯಕ. ಹೆಚ್ಚು ಯೂರಿಯಾ ಬಳಕೆ ಮಾಡುವುದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ನಿಯಂತ್ರಿಸಬಹುದಾಗಿರುತ್ತದೆ.

ಆದ್ದರಿಂದ ಪ್ರಮುಖ ಕೃಷಿ ಬೆಳೆಗಳಾದ ರಾಗಿ, ತೊಗರಿ, ಮುಸುಕಿನ ಜೋಳ, ಅಲಸಂದೆ, ಭತ್ತ, ಅವರೆ, ಶೇಂಗಾ, ಹರಳು ಹಾಗೂ ಹುರುಳಿ ಬೆಳೆಗಳಿಗೆ ನೀಡಬೇಕಾಗಿರುವ ರಸಗೊಬ್ಬರದ ಪ್ರಮಾಣವನ್ನು ಹಾಗೂ ವಿವಿಧ ಸಂಯುಕ್ತ ರಸಗೊಬ್ಬರಗಳ ಕಾಂಬಿನೇಷನ್ ಮೂಲಕ ನೀಡಬಹುದಾದ ರಸಗೊಬ್ಬರ ಪ್ರಮಾಣದ ಮಾಹಿತಿಯನ್ನು ಈಗಾಗಲೇ ಜಿಲ್ಲೆಯ ಎಲ್ಲಾ ರಸಗೊಬ್ಬರ ಮಾರಾಟಗಾರರಿಗೆ ನೀಡಲಾಗಿದೆ.

ಶಿಫಾರಸಿನಷ್ಟೇ ಯೂರಿಯಾ ಗೊಬ್ಬರ ಖರೀದಿಸಿ

ರೈತರು ರಸಗೊಬ್ಬರ ಖರೀದಿ ಮಾಡುವಾಗ ಶಿಫಾರಿತ ಪ್ರಮಾಣವನ್ನು ಮಾತ್ರ ಖರೀದಿಸುವುದು ಹಾಗೂ ಸಾರಜನಕವನ್ನು ಕೇವಲ ಯೂರಿಯಾ ಮೂಲಕ ನೀಡದೆ ಸಂಯುಕ್ತ ರಸಗೊಬ್ಬರಗಳಾದ 15:15:15, 19:19:19, 10:26:26 ಅಥವಾ ಅಮೋನಿಯಮ್ ಸಲ್ಫೇಟ್ ಅನ್ನು ಮೂಲಗೊಬ್ಬರವಾಗಿ ಬಳಸಿ ಯೂರಿಯಾ ಗೊಬ್ಬರವನ್ನು ಮೇಲುಗೊಬ್ಬರಕ್ಕಾಗಿ ಮಾತ್ರ ಬಳಸಬೇಕು.

ಕೃಷಿಗೆ ಅವಶ್ಯಕತೆ ಇರುವಷ್ಟೇ ರಸಗೊಬ್ಬರ ಬಳಸಿ

ಮುಂಗಾರು ಹಂಗಾಮಿನಲ್ಲಿ ಕೃಷಿ ಚಟುವಟಿಕೆ ಗರಿಗೆದರಿದ್ದು ತಮ್ಮ ಬೆಳಗಳಿಗೆ ಅವಶ್ಯಕತೆ ಇರುವಷ್ಟು ರಸಗೊಬ್ಬರ ಮಾತ್ರ ಬಳಕೆ ಮಾಡಿ ಜಂಟಿ ಕೃಷಿ ನಿರ್ದೇಶಕರು ರೈತರಲ್ಲಿ ಮನವಿ ಮಾಡಿದ್ದಾರೆ.

ಸಂಸ್ಕೃತಿ–ಪರಂಪರೆ ಬೆಳೆಸಲು ಯುವ ಪೀಳಿಗೆ ಮುಂದಾಗಲಿ

ದ್ರೌಪತಾಂಬಾ ಕರಗೋತ್ಸವ ಅದ್ಧೂರಿ



ನಾಳೆ ಹೂವಿನ ಕರಗ

ಯುವಪೀಳಿಗೆಗೆ ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶದಿಂದ ಕರಗ ಮಹೋತ್ಸವವನ್ನು ವೈಭವದಿಂದ ನಡೆಸಲಾಗುತ್ತಿದೆ. ಮೇ 31 ರಂದು ಹೂವಿನ ಕರಗ ಮಹೋತ್ಸವವು ನಡೆಯಲಿದ್ದು, ಶ್ರೀ ಪ್ರಣವಾನಂದಪುರಿ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಲಿದ್ದಾರೆ ಹಾಗೂ ಕರಗವನ್ನು ಮುನಿರಾಜು ಹೊರಲಿದ್ದಾರೆ ಎಂದು ಮಣಿ ಶಂಕರ್ ತಿಳಿಸಿದರು.

ತಾವರೆಕೆರೆ: ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದ ಶ್ರೀ ದ್ರೌಪತಾಂಬಾ ದೇವಿಯ 75ನೇ ವರ್ಷದ ಹಸಿಕರಗಮಹೋತ್ಸವುಸಾಂಪ್ರದಾಯಕವಾಗಿ ನಡೆಯಿತು.

ಗ್ರಾಮದ ಶ್ರೀ ಕಾಟೇರಮ್ಮ ದೇವಾಲಯದಿಂದ ಹೊರಟ ಕರಗವು ಬಾಣಮಾಕನಹಳ್ಳಿ ಗ್ರಾಮದ ಮಾರ್ಗವಾಗಿ ಗ್ರಾಮದ ಪ್ರಮುಖ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಗೋವಿಂದ, ಗೋವಿಂದ ಎನ್ನುವ ನಾಮಜಪದೊಂದಿಗೆ ಕರಗ ಮಹೋತ್ಸವ ಆಚರಿಸಲಾಯಿತು. ನಂತರ ಗ್ರಾಮ ದೇವತೆ ಶ್ರೀ ಪಟಾಲಮ್ಮ ದೇವಾಲಯಕ್ಕೆ ಮರಳಿ ಮಹಾ ಮಂಗಳಾರತಿಯೊಂದಿಗೆ ಹಸಿ ಕರಗ ಮಹೋತ್ಸವಕ್ಕೆ ತೆರೆ ಎಳೆಯಲಾಯಿತು.

ವಹ್ನಿಕುಲ ಕ್ಷತ್ರಿಯ ಸಮುದಾಯದ ಯಜಮಾನರಾದ ಮಣಿ ಶಂಕರ್ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಗ್ರಾಮದಲ್ಲಿ ಸುಮಾರು 75 ವರ್ಷಗಳಿಂದ ನಿರಂತರವಾಗಿ ಕರಗ ಮಹೋತ್ಸವವು ನಡೆಯುತ್ತಾ ಬಂದಿದೆ, ಅದೇ ರೀತಿ ಹಸಿ ಕರಗ ಮಹೋತ್ಸವವು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಗ್ರಾಮಸ್ಥರು, ಯುವಕರು ಹಾಗೂ ಮಹಿಳೆ ಯರು ಒಗ್ಗಟ್ಟಿನಿಂದ ಹಬ್ಬದ ಸಿದ್ಧತೆಯಲ್ಲಿ ಭಾಗವಹಿಸಿರುವುದು ಸಂತಸದ ವಿಚಾರವಾಗಿದೆ ಎಂದರು. ಹಸಿಕರಗವು ಗ್ರಾಮೀಣ ಸಂಸ್ಕೃತಿ, ಭಕ್ತಿ ಮತ್ತು ಸಮುದಾಯದ ಐಕ್ಯತೆಯ ಪ್ರತೀಕವಾಗಿದ್ದು, ದೇವಿಯ ಆರಾಧನೆಯ ಮೂಲಕ ಗ್ರಾಮಕ್ಕೆ ಸುಖ, ಶಾಂತಿ ಹಾಗೂ ಸಮೃದ್ಧಿ ಲಭಿಸಲಿ ಎಂಬುದು ಎಲ್ಲರ ಪ್ರಾರ್ಥನೆಯಾಗಿದೆ. ಮಹೋತ್ಸವದ ಅಂಗವಾಗಿ ವಿಶೇಷ ಪೂಜೆಗಳು, ಅಲಂಕಾರ, ಮೆರವಣಿಗೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಸುತ್ತಮುತ್ತಲಿನ ಗ್ರಾಮಗಳಿಂದಲೂ ಸಾವಿರಾರು ಭಕ್ತರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಇದೇಸಂದರ್ಭದಲ್ಲಿಕರಗದಪೂಜಾರಿಮುನಿರಾಜು, ಲಕ್ಷ್ಮೀನಾರಾಯಣ್, ಲೋಕೇಶ್, ನಾಗೇಶ್ ಹಾಗೂ ವಹ್ನಿಕುಲ ಕ್ಷತ್ರಿಯ ಗೌಡರು, ಯಜಮಾನರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಮುನಿರಾಜು ಅಧಿಕಾರ ಸ್ವೀಕಾರ



ದೇವನಹಳ್ಳಿ: ತಾಲೂಕು ಪಂಚಾಯಿತಿಗೆ ನೂತನ ಕಾರ್ಯನಿರ್ವಹಣಾಧಿಕಾರಿಯಾಗಿ ಮುನಿರಾಜು ಅಧಿಕಾರ ವಹಿಸಿಕೊಂಡರು.

ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಶ್ರೀನಾಥ್ ಗೌಡರು ಚಿಕ್ಕಬಳ್ಳಾಪುರ ತಾಲೂಕು ಪಂಚಾಯಿತಿಗೆ ವರ್ಗಾವಣೆಯಾಗಿದ್ದರಿಂದ, ಚಿಕ್ಕಬಳ್ಳಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದ, ಮುನಿರಾಜು ಚಿಕ್ಕಬಳ್ಳಾಪುರ ತಾಲೂಕು ಪಂಚಾಯಿತಿಯಲ್ಲಿ ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ಹಿರಿಯ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಈ ಸಮಯದಲ್ಲಿ ನೂತನ ಕಾರ್ಯನಿರ್ವಾಹಕ ಅಧಿಕಾರಿ ಮುನಿರಾಜು ಮಾತನಾಡಿ, ದೇವನಹಳ್ಳಿ ತಾಲೂಕು ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಕಾರ್ಯವೈಕರಿಯನ್ನು ಪರಿಶೀಲಿಸಿ ಅಭಿವೃದ್ಧಿ ಪಡಿಸಲು ತಾಕೀತು ಮಾಡಲಾಗುವುದು, ಏನಾದರೂ ಲೋಪದೋಷಗಳಿದ್ದರೆ, ಸರಿಪಡಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ನಗರಸಭೆ ಉಪಾಧ್ಯಕ್ಷರಾಗಿ ವೆಂಕಟೇಶ್ ಅಧಿಕಾರ ಸ್ವೀಕಾರ



ದೊಡ್ಡಬಳ್ಳಾಪುರ: ನಗರಸಭೆ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿಯಿಂದ ವೆಂಕಟೇಶ್ (ಬಂತಿ) ನೂತನ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದು ಶುಕ್ರವಾರ ಗಣ್ಯರ ಸಮ್ಮುಖದಲ್ಲಿ ಅಧಿಕಾರ ಸ್ವೀಕರಿಸಿದರು.

ಈ ವೇಳೆ ಮಾತನಾಡಿದ ಅವರು, ತಾಲೂಕಿನ ಹೆಮ್ಮೆಯ ಶಾಸಕರಾದ ಧೀರಜ್ ಮುನಿರಾಜು, ನಗರಸಭೆ ಅಧ್ಯಕ್ಷರಾದ ಸುಮಿತ್ರಾ ಆನಂದ್, ಬಿಜೆಪಿ ಹಾಗೂ ಜೆಡಿಎಸ್ ಬೆಂಬಲಿತ ನಗರಸಭೆಯ ಸರ್ವ ಸದಸ್ಯರ ಸಹಕಾರದೊಂದಿಗೆ ಹಾಗೂ ತಾಲೂಕು ಘಟಕದ ಅಧ್ಯಕ್ಷ ಹರೀಶ್ ಗೌಡರ ಬೆಂಬಲದೊಂದಿಗೆ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು ಎಲ್ಲರ ಸಮ್ಮುಖದಲ್ಲಿ ಅಧಿಕಾರ ವಹಿಸಿಕೊಂಡಿದ್ದೇನೆ. ಪ್ರಸ್ತುತ ಇರುವ 5 ತಿಂಗಳ ಅಲ್ಪಾವಧಿಯಲ್ಲಿ ನಗರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಕೊಡುವ ಮೂಲಕ ನಗರದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಾಮಾಣಿಕಪ್ರಯತ್ನ ಮಾಡಲಾಗುವುದು. ನಗರಸಭೆ ಗ್ರೇಡ್ 1 ಆಗಿ ಪರಿವರ್ತನೆಗೊಂಡಲ್ಲಿ ಹೆಚ್ಚಿನ ಅನುದಾನ ಪಡೆಯಲು ಸಹಾಯಕವಾಗುತ್ತದೆ. ನಗರದ ಅಭಿವೃದ್ಧಿ ಮತ್ತಷ್ಟು ಮಾಡಬಹುದಾಗಿದೆ ಎಂದರು. ನೂತನ ಉಪಾಧ್ಯಕ್ಷರನ್ನು ಶಾಸಕ ಧೀರಜ್ ಮುನಿರಾಜು, ಬಮುಲ್ ನಿರ್ದೇಶಕ ಬಿ.ಸಿ.ಆನಂದ್ ಕುಮಾರ್, ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಪ್ರೇಮ್ ಕುಮಾರ್, ದೊಡ್ಡಬಳ್ಳಾಪುರ ನಗರಸಭೆ ಅಧ್ಯಕ್ಷೆ ಸುಮಿತ್ರಾ ಆನಂದ್, ಎಲ್ಲಾ ವಾರ್ಡಿನ ಸದಸ್ಯರು, ಬಿಜೆಪಿ ಜಿಲ್ಲಾ ಹಾಗೂ ತಾಲೂಕು ಘಟಕದ ಪ್ರಮುಖರು, ದೊಡ್ಡತುಮಕೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜುನಾಥ್ ಸೇರಿದಂತೆ ಹಲವು ಪ್ರಮುಖರು ಸಿಹಿ ನೀಡಿ ಅಭಿನಂದಿಸಿ ಶುಭ ಹಾರೈಸಿದರು.

ತಹಸೀಲ್ದಾರ್ ಕಚೇರಿಗೆ ಬಾಂಬ್ ಸ್ಫೋಟದ ಬೆದರಿಕೆ

ದುಷ್ಕರ್ಮಿಯಿಂದ ಇ–ಮೇಲ್ ಸಂದೇಶ



ಸರಗೂರು: ತಾಲೂಕಿನ ತಹಸೀಲ್ದಾರ್ ಕಚೇರಿಗೆ ಶುಕ್ರವಾರ ಬೆಳಗ್ಗೆ ಬಾಂಬ್ ಸ್ಫೋಟದ ಬೆದರಿಕೆ ಮೇಲ್ ಸಂದೇಶ ಸಿಬ್ಬಂದಿ ಹಾಗೂ ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿತ್ತು.

ಸರಗೂರು ತಹಸೀಲ್ದಾರ್ ಕಚೇರಿಯಲ್ಲಿ ಶೀಘ್ರದಲ್ಲೇ ಪ್ರಬಲ ಬಾಂಬ್ ಸ್ಫೋಟ ಸಂಭವಿಸಲಿದೆ. ಎಲ್ಲರನ್ನೂ ತಕ್ಷಣ ತೆರವುಗೊಳಿಸಿ ಎಂಬ ಶೀರ್ಷಿಕೆಯನ್ನು ಕನ್ನಡದಲ್ಲಿ ಉಲ್ಲೇಖಿಸಿ ಮೇ 29–2026ರ ಬೆಳಗ್ಗೆ 6.52ಕ್ಕೆ ದುಷ್ಕರ್ಮಿಯೊಬ್ಬ ಇ–ಮೇಲ್ ಸಂದೇಶ ರವಾನಿಸಿದ್ದು, ಮೇಲ್ ನೋಡಿದ ಸಮಯದಲ್ಲಿ ಕಚೇರಿಯಲ್ಲಿ ಇದ್ದ ಸಿಬ್ಬಂದಿ ಭಯಭೀತರಾಗಿ ತಹಸೀಲ್ದಾರ್ ಪ್ರಭಾರ ಶ್ರೀನಿವಾಸ್ ಗಮನಕ್ಕೆ ತಂದ ಕೂಡಲೇ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಯಿತು. ಸ್ಥಳಕ್ಕೆ ತಕ್ಷಣ ಸರಗೂರು ಪೊಲೀಸರು ಭೇಟಿ ನೀಡಿ ಕಚೇರಿಯಲ್ಲಿದ್ದ ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಕಚೇರಿಯಿಂದ ಹೊರ ಕಳಿಸಿದ್ದಾರೆ. ಇದರಿಂದ ಕೆಲವು ಗಂಟೆ ಆತಂಕದ ಸ್ಥಿತಿ ನಿರ್ಮಾಣವಾಗಿತ್ತು. ತಹಸೀಲ್ದಾರ್ ಕಚೇರಿ ಮುಂಭಾಗ ಜನಸ್ತೋಮವೇ ನೆರೆದಿತ್ತು ಹಾಗೂ ಜನತೆಯಲ್ಲಿ ಭಯಭೀತಿ ಎದುರಾಗಿತ್ತು.

ತಹಸೀಲ್ದಾರ್ ಕಚೇರಿಗೆ ಆಗಮಿಸಿದ ಬಾಂಬ್ ನಿಷ್ಕ್ರಿಯ ಹಾಗೂ ಶ್ವಾನದಳ ಒಂದು ಗಂಟೆಗೂ ಹೆಚ್ಚು ಕಾಲ ಪರಿಶೀಲನೆ ನಡೆಸಿತು. ತಹಸೀಲ್ದಾರ್ ಕಚೇರಿ ಮಾತ್ರವಲ್ಲದೆ ಇಡೀ ಕಟ್ಟಡವನ್ನು ಸಂಪೂರ್ಣವಾಗಿ ಶೋಧಿಸಲಾಯಿತು. ಕಚೇರಿಯಲ್ಲಿ ಬಾಂಬ್ ವಸ್ತುಗಳು ಕಾಣಿಸಿಲ್ಲ ಹಾಗೂ ಅನುಮಾನಾಸ್ಪದ ರೀತಿಯಲ್ಲಿ ಯಾವುದೇ ಕುರುಹು ಕಂಡುಬಂದಿಲ್ಲ ಎಂದು ಮಾಹಿತಿ ಬಂದ ನಂತರ ಪೊಲೀಸ್ ಇಲಾಖೆ ಹಾಗೂ ತಹಸೀಲ್ದಾರ್ ಯಾವುದೆ ಬಾಂಬ್ ಇಲ್ಲದಿರುವುದರ ಬಗ್ಗೆ ಮಾಹಿತಿ ನೀಡಿದರು. ತಹಸೀಲ್ದಾರ್ ಪ್ರಭಾರ ಶ್ರೀನಿವಾಸ್ ಮಾತನಾಡಿ, ಕಚೇರಿಯ ಶಿರಸ್ತೇದಾರ್ ಮನೋಹರ್ ಮೇಲ್ ಅನ್ನು ಪ್ರತಿ ದಿನ ನೋಡುತ್ತಾರೆ ಹಾಗಾಗಿ ಈ ಸಂಗತಿ ಬೆಳಕಿಗೆ ಬಂದಿದೆ. ಮೇಲ್‌ನಲ್ಲಿ ಸರಗೂರು ತಾಲೂಕು ಇರುವುದರಿಂದ ನಾವುಗಳು ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುವ ಬೇಕಾಗಿತ್ತು. ಆದಕಾರಣ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದ ಕೂಡಲೇ ಶೀಘ್ರದಲ್ಲೇ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಿದ್ದ ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಹೊರ ಕಳಿಸಿ. ಕೂಡಲೇ ಜಿಲ್ಲಾಧಿಕಾರಿಗಳು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಬಾಂಬ್ ನಿಷ್ಕ್ರಿಯ ಹಾಗೂ ಶ್ವಾನದಳ ಆರ್.ಎಸ್.ಐ.ವೀರಭದ್ರಪ್ಪ, ಎ.ಆರ್.ಎಸ್.ಐ. ರಾಘವೇಂದ್ರ, ಎಚ್.ಸಿ.ಪುಟ್ಟರಾಜು, ಮೂರ್ತಿ, ಪಿ.ಸಿ.ಜಗದೀಶ್, ಡಾಗ್ ಈಶಾ ಒಂದು ಗಂಟೆಗೂ ಹೆಚ್ಚು ಕಾಲ ಸ್ಥಳ ಪರಿಶೀಲಿಸಿದ ನಂತರ ಕಚೇರಿಯಲ್ಲಿ ಬಾಂಬ್ ವಸ್ತುಗಳು ಯಾವುದು ಕಂಡುಬಂದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ ನಂತರ ಯಾರೂ ಆತಂಕಕ್ಕೆ ಒಳಗಾಗದೆ ದಿನನಿತ್ಯ ಸಾರ್ವಜನಿಕರು ತಮ್ಮ ಕೆಲಸಕ್ಕೆ ಬರಬಹುದು ಎಂದು ತಿಳಿಸಿದರು.

ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನ

ದೊಡ್ಡಬಳ್ಳಾಪುರ: ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 09 ಅಂಗನವಾಡಿ ಕಾರ್ಯಕರ್ತೆ ಮತ್ತು 84 ಸಹಾಯಕಿ ಹುದ್ದೆಗಳಿಗೆ ಗೌರವ ಸೇವೆಯ ಆಧಾರದ ಮೇಲೆ ಆಯ್ಕೆ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯಲ್ಲಿ ಅರ್ಜಿ ಪಡೆದು ಜೂ.30 ರೊಳಗೆ ಭರ್ತಿ ಮಾಡಿದ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ. ಸಂಖ್ಯೆ: 080–27625228 ಅಥವಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಎಪಿಎಂಸಿ ಬಿಲ್ಡಿಂಗ್ ಒಳಾವರಣ, ದೊಡ್ಡಬಳ್ಳಾಪುರ, ಇಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರ ಒತ್ತಾಯ

ಕೆ.ಎಚ್.ಮುನಿಯಪ್ಪಗೆ ಡಿಸಿಎಂ ಸ್ಥಾನ ನೀಡಿ



ದೇವನಹಳ್ಳಿ: ಕೆ.ಎಚ್.ಮುನಿಯಪ್ಪ ಅವರನ್ನು ಉಪ ಮುಖ್ಯಮಂತ್ರಿ ಮಾಡಿ ಎಂದು ದೇವನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ.ಮಂಜುನಾಥ್ ಒತ್ತಾಯ ಮಾಡಿದರು.

ಪಟ್ಟಣದ ಪರಿವೀಕ್ಷಣಾ ಮಂದಿರದಲ್ಲಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಮಿತಿಯಿಂದ ಮೂರು ಬ್ಲಾಕ್‌ಗಳ ಅಧ್ಯಕ್ಷರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಬಳಿಕ ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್‌ರವರಿಗೆ ಸಿ.ಎಂ ಸ್ಥಾನ ಬಹುತೇಕ ಖಚಿತವಾಗಿದೆ. 7 ಬಾರಿ ಸಂಸದರಾಗಿ, ಮಂತ್ರಿಯಾಗಿ, ರಾಜ್ಯ ರಾಜಕಾರಣದಲ್ಲಿ ಹಿರಿಯರಾದ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಸ್ತುವಾರಿ ಸಚಿವರಾದ ಕೆ.ಎಚ್.ಮುನಿಯಪ್ಪ ಅವರನ್ನು ಉಪಮುಖ್ಯಮಂತ್ರಿ ಮಾಡಬೇಕೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸರ್ಕಾರದ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಲ್ಲಿ ವಿನಂತಿಸಿಕೊಳ್ಳುತ್ತೇವೆ ಎಂದು ತಿಳಿಸಿದರು.

ಬಯಪ ಅಧ್ಯಕ್ಷ ದ್ಯಾವರಹಳ್ಳಿ ಶಾಂತಕುಮಾರ್ ಮಾತನಾಡಿ, ಕೆ.ಎಚ್.ಮುನಿಯಪ್ಪನವರ ಹಿರಿತನ ಹಾಗೂ ಅನುಭವವನ್ನು ಪರಿಗಣಿಸಿ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ದೇವನಹಳ್ಳಿ ವಿಧಾನಸಭಾ ಕಾಂಗ್ರೆಸ್‌ನಿಂದ ಒತ್ತಾಯ ಮಾಡುವುದಾಗಿ ಹೇಳಿದರು. ಇದೇ ಸಮಯದಲ್ಲಿ ದೇವನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ಮಂಜುನಾಥ್, ವಿಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿನ್ನೂರು ವೆಂಕಟೇಶ್, ತೂಬಗೆರೆ ರವಿಸಿದ್ದಪ್ಪ, ಗ್ಯಾರಂಟಿ ಯೋಜನಾ ಜಿಲ್ಲಾಧ್ಯಕ್ಷ ಬಿ.ರಾಜಣ್ಣ, ತಾಲೂಕು ಅಧ್ಯಕ್ಷ ಸಿ. ಜಗನ್ನಾಥ್, ಬಯಪ ಅಧ್ಯಕ್ಷ ಶಾಂತಕುಮಾರ್, ಬಮುಲ್ ನಿರ್ದೇಶಕ ಎಸ್.ಪಿ. ಮುನಿರಾಜು, ಬಯಪ ನಿರ್ದೇಶಕರಾದ ಪ್ರಸನ್ನ ಕುಮಾರ್, ಮಂಜುನಾಥ್, ರಾಮಚಂದ್ರಪ್ಪ, ಶ್ರೀಧರ್, ಈರಣ್ಣ, ರಮೇಶ್, ರಘು, ಶ್ರೀನಿವಾಸ್, ಬಚ್ಚೇಗೌಡ, ಎಸ್.ಆರ್.ರವಿಕುಮಾರ್, ಮಹೇಶ್, ನಾರಾಯಣಸ್ವಾಮಿ, ಮುನಿ ರಾಜು, ಸಜ್ಜಾದ್ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ಗಾಣಿಗರ ಮಹಾಸಂಸ್ಥಾನ ಮಠಶ್ರೀ ಪೂರ್ಣಾನಂದಪುರಿ ಸ್ವಾಮೀಜಿ ಬೇಸರ

ಜಾತಿಗಣತಿ ಅನುಷ್ಠಾನದಿಂದ ಅಪಾಯ



ನೆಲಮಂಗಲ: ಸಿದ್ದರಾಮಯ್ಯ ಎಂದಿಗೂ ಹಿಂದುಳಿದ ವರ್ಗಗಳ ನಾಯಕನಾಗಲು ಸಾಧ್ಯವಿಲ್ಲ, ಅವರಿಂದ ಸ್ವಜಾತಿಗೆ ಅನುಕೂಲವಾಗಿದೆಯೇ ವಿನಃ ಹಿಂದುಳಿದ ವರ್ಗದಲ್ಲಿನ ಜಾತಿಗಳಿಗಲ್ಲ ಎಂದು ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠಶ್ರೀ ಪೂರ್ಣಾನಂದಪುರಿ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ನಗರ ಸಮೀಪದ ನಗರೂರಿನ ಶ್ರೀಕ್ಷೇತ್ರತೈಲೇಶ್ವರ ಗಾಣಿಗರ ಮಹಾ ಸಂಸ್ಥಾನ ಮಠದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಸಿದ್ದರಾಮಯ್ಯ ಹಿಂದುಳಿದವರ್ಗಗಳ ಪರವಾಗಿ ನಿಂತ ಅಹಿಂದ ನಾಯಕನಂತೆ ವರ್ತನೆ ಮಾಡುತ್ತಿದ್ದಾರೆ ಅವರಿಂದ ಯಾವುದೇ ಕಾರಣಕ್ಕೆ ಹಿಂದುಳಿದವರ್ಗಗಳಜಾತಿಗಳು ಬೆಳವಣಿಗೆಯಾಗಿಲ್ಲ, ಕೇವಲ ಸ್ವಜಾತಿ ಪ್ರೇಮದ ಕುರುಬ ಸಮುದಾಯಕ್ಕೆ ಮಾತ್ರ ಸಹಕಾರ ಮಾಡಿದ್ದಾರೆ. ಸ್ವಜಾತಿ ಪ್ರೇಮದ ಸಲುವಾಗಿ ಗಾಣಿಗ, ಮಡಿವಾಳ, ಸವಿತಾ ಸೇರಿದಂತೆ ನೂರಾರು ಸಮುದಾಯಗಳಿಗೆ ಅನ್ಯಾಯ ಮಾಡಿದ ಜತೆಗೆ ಜಾತಿಗಣತಿಯ ಮೂಲಕ ಕೊನೆಗೊಳಿಸುವ ಕೆಲಸ ಮಾಡಿದ್ದಾರೆ ಎಂದರು. ಡಿಕೆ ಬಲಿಪಶು: ಸಿದ್ದರಾಮಯ್ಯ ಕೊನೆ ಕ್ಷಣದಲ್ಲಿ ಜಾತಿಗಣತಿ ಸ್ವೀಕಾರ ಮಾಡಿರುವುದು ಡಿ.ಕೆ.ಶಿವಕುಮಾರ್‌ರನ್ನು ಬಲಿಪಶು ಮಾಡಲು ಮಾತ್ರ, ದೇವರಾಜು ಅರಸು ಮಾಡಿದಂತೆ ಜಾತಿ ಗಣತಿ ಮಾಡಿಲ್ಲ, ಒಕ್ಕಲಿಗರು, ಲಿಂಗಾಯಿತರು ಹಾಗೂ ಸಣ್ಣ ಜಾತಿಗಳನ್ನು ಅಂತ್ಯ ಮಾಡುವ ಕೆಲಸವನ್ನು ಸಿದ್ದರಾಮಯ್ಯನವರು ಮಾಡಿದ್ದಾರೆ. ಜಾತಿಗಣತಿಯಾಗಿ ಒಂದು ತಿಂಗಳಲ್ಲಿ ಸ್ವೀಕಾರ ಮಾಡುವುದಾಗಿ ಹೇಳಿದ್ದ ಸಿದ್ದರಾಮಯ್ಯ ವಿಳಂಬ ಮಾಡಿ ಡಿ.ಕೆ ಶಿವಕುಮಾರ್ ಬೆನ್ನಿಗೆ ಕಟ್ಟಿದ್ದಾರೆ. ಡಿಕೆಶಿ ಅನುಷ್ಠಾನ ಮಾಡಲು ಮುಂದಾದರೆ ಹೆಜ್ಜೇನು ಗೂಡಿಗೆ ಕಲ್ಲು ಹೊಡೆದಂತೆ, ಬಲಿಷ್ಠ ಸಮುದಾಯಗಳು ಯಾವುದೇ ಕಾರಣಕ್ಕೂ ಈ ವರದಿ ಒಪ್ಪಲು ಸಾಧ್ಯವಿಲ್ಲ, ಹತ್ತಾರು ಪಂಗಡಗಳಿರುವ ಮುಸ್ಲಿಂ ಸಮುದಾಯವನ್ನು ಒಂದು ಮಾಡಿ ನಂ.1 ಮಾಡಿರುವುದು ದೊಡ್ಡ ಅಪರಾಧವಾಗಿದೆ ಎಂದರು.

ನಾಳೆ ಗಾಣಿಗರ ಹಬ್ಬ

ವಿಶ್ವಗಾಣಿಗರ ಸಮುದಾಯ ಚಾರಿಟೇಬಲ್ ಟ್ರಸ್ಟ್‌ನಿಂದ ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದಲ್ಲಿ ಶ್ರೀ ಪೂರ್ಣಾನಂದಪುರಿ ಸ್ವಾಮೀಜಿಗಳ 5ನೇ ಪಟ್ಟಾಭಿಷೇಕ ಮಹೋತ್ಸವ, ನೂತನ ಅನ್ನದಾಸೋಹ ಕಟ್ಟಡ ಶಂಕುಸ್ಥಾಪನೆ ಹಾಗೂ ಗಾಣಿಗರ ಹಬ್ಬವನ್ನು ಮೇ 31ರಂದು ಬೆಳಗ್ಗೆ 9.30ಕ್ಕೆ ಆಯೋಜಿಸಲಾಗಿದ್ದು ಮಧ್ಯಾಹ್ನ 4 ಗಂಟೆಯವರೆಗೂ ಪ್ರತಿಭಾ ಪುರಸ್ಕಾರ, ವಧು–ವರರ ಅನ್ವೇಷಣೆ, ಆರೋಗ್ಯ ತಪಾಸಣೆ ಶಿಬಿರ, ಸೀರೆ ಮಾರಾಟ, ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು ಕೈಲಾಸ ಆಶ್ರಮದ ಶ್ರೀ ಜಯೇಂದ್ರಪುರಿ ಸ್ವಾಮೀಜಿಗಳು ಆಗಮಿಸಲಿದ್ದು, ಅನ್ನದಾಸೋಹ ನೂತನ ಕಟ್ಟಡ ಶಂಕುಸ್ಥಾಪನೆಯನ್ನು ಶಂಕರಾಚಾರ್ಯ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಮಾಡಲಿದ್ದಾರೆ.

ಕಿರುಸುದ್ದಿ

ಕಾಮಗಾರಿ ಹಿನ್ನೆಲೆ: ನೇರಳೆ ಮೆಟ್ರೋ ಸೇವೆ ವ್ಯತ್ಯಯ

• **ಬೆಂಗಳೂರು:** ಮೆಟ್ರೋ ಹಳಿಗಳ ತುರ್ತು ನಿರ್ವಹಣಾ ಕಾಮಗಾರಿಗಳ ಹಿನ್ನೆಲೆಯಲ್ಲಿ ಮೇ 31ರ ಭಾನುವಾರ ಬೆಳಗ್ಗೆ ನೇರಳೆ ಮಾರ್ಗ ಮೆಟ್ರೋ ರೈಲು ಸೇವೆಯಲ್ಲಿ ಕೆಲ ಗಂಟೆಗಳ ಕಾಲ ತಾತ್ಕಾಲಿಕ ವ್ಯತ್ಯಯ ಉಂಟಾಗಲಿದೆ ಎಂದು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಪ್ರಕಟಣೆಯಲ್ಲಿ ತಿಳಿಸಿದೆ. ನೇರಳೆ ಮಾರ್ಗದ ಅತ್ತಿಗುಪ್ಪೆ ಮತ್ತು ವಿಜಯನಗರ ಮೆಟ್ರೋ ನಿಲ್ದಾಣಗಳ ನಡುವೆ ಅಗತ್ಯ ನಿರ್ವಹಣಾ ಕೆಲಸಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ದೀಪಾಂಜಲಿನಗರ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೆಟ್ರೋ ನಿಲ್ದಾಣಗಳ ನಡುವೆ ರೈಲು ಸಂಚಾರ ಇರುವುದಿಲ್ಲ. ಮೇ 31ರ ಬೆಳಗ್ಗೆ 7 ಗಂಟೆಯಿಂದ 9 ಗಂಟೆಯವರೆಗೆ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದ್ದು, ಬಳಿಕ ಎಂದಿನಂತೆ ಕಾರ್ಯನಿರ್ವಹಿಸಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ. ಪ್ರಯಾಣಿಕರು ಈ ತಾತ್ಕಾಲಿಕ ಸೇವಾ ವ್ಯತ್ಯಯವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಪ್ರಯಾಣವನ್ನು ಯೋಜಿಸಬೇಕಾಗಿ ಬಿಎಂಆರ್‌ಸಿಎಲ್ ಮನವಿ ಮಾಡಿದೆ.

ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಕಬಳಿಕೆ ಯತ್ನ

• **ಬೆಂಗಳೂರು:** ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕೋಟ್ಯಂತರ ರೂ. ಮೌಲ್ಯದ ಆಸ್ತಿಯನ್ನು ಕಬಳಿಸಲು ಯತ್ನಿಸಿದ ಭೂಗಳ್ಳತನ ಹಗರಣವೊಂದು ಬೆಳಕಿಗೆ ಬಂದಿದೆ. ಈ ದಂಧೆಗೆ ಸಂಬಂಧಿಸಿದಂತೆ ಶಾಲೂಮ್ ಕುಮಾರ್ ಎಂಬಾತನನ್ನು ಶೇಷಾದ್ರಿಪುರಂ ಠಾಣೆ ಪೊಲೀಸರು ಗುರುವಾರ ತಡರಾತ್ರಿ ಬಂಧಿಸಿದ್ದಾರೆ. ಬಂಧಿತ ಆರೋಪಿ ಗ್ರೇಟರ್ ಬೆಂಗಳೂರು ಅಥಾರಿಟಿ ಹೆಸರಿನಲ್ಲಿ ನಕಲಿ ದಾಖಲೆಗಳು ಹಾಗೂ ನಕಲಿ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಪತ್ರಗಳನ್ನು ಸೃಷ್ಟಿಸುತ್ತಿದ್ದ ಎನ್ನಲಾಗಿದೆ. ಈ ನಕಲಿ ದಾಖಲೆಗಳನ್ನೇ ಅಸ್ತ್ರವಾಗಿಸಿಕೊಂಡು ಬಿಡಿಎಗೆ ಸೇರಿದ ಅರ್ಕಾವತಿ ಲೇಔಟ್ ಹಾಗೂ ಒಎಂಬಿಆರ್ ಲೇಔಟ್‌ಗಳಲ್ಲಿರುವ ಕೋಟ್ಯಂತರ ರೂ. ಮೌಲ್ಯದ ಸೈಟ್‌ಗಳನ್ನು ತನ್ನದಾಗಿಸಿಕೊಳ್ಳಲು ಸ್ಕೆಚ್ ಹಾಕಿದ್ದ. ಈ ಅಕ್ರಮ ದಂಧೆಯ ಜಾಲದ ಬಗ್ಗೆ ಖಚಿತ ಮಾಹಿತಿ ಪಡೆದ ಸಾರ್ವಜನಿಕರು ಬಿಡಿಎ ವಿಜಿಲೆನ್ಸ್ ವಿಭಾಗಕ್ಕೆ ದೂರು ನೀಡಿದ್ದರು. ಸಾರ್ವಜನಿಕರ ದೂರಿನ ಬೆನ್ನಲ್ಲೇ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಬಿಡಿಎ ವಿಜಿಲೆನ್ಸ್ ವಿಭಾಗದ ಎಸ್ಪಿ ನಾಗರಾಜ್ ಅವರು ಸಮಗ್ರ ತನಿಖೆಗೆ ಆದೇಶಿಸಿದ್ದರು. ತನಿಖೆ ಪೂರ್ಣಗೊಳಿಸಿ ಅಕ್ರಮ ನಡೆದಿರುವುದನ್ನು ದೃಢಪಡಿಸಿಕೊಂಡ ನಾಗರಾಜ್, ಬಿಡಿಎ ಆಯುಕ್ತ ಮೇಜರ್ ಮಣಿವಣ್ಣನ್ ಅವರಿಗೆ ವರದಿ ಸಲ್ಲಿಸಿದ್ದರು. ವಿಜಿಲೆನ್ಸ್ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಆಯುಕ್ತರು, ವಂಚಕನ ವಿರುದ್ಧ ತಕ್ಷಣವೇ ಕಠಿಣ ಕಾನೂನು ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದ್ದರು. ಆಯುಕ್ತರ ಆದೇಶದಂತೆ ಬಿಡಿಎ ವಿಜಿಲೆನ್ಸ್ ವಿಭಾಗದ ಅಧಿಕಾರಿ ಗೋವಿಂದರಾಜು ಅವರು ನೀಡಿದ ದೂರಿನ ಆಧಾರದ ಮೇಲೆ ಶೇಷಾದ್ರಿಪುರಂ ಪೊಲೀಸರು ಆರೋಪಿ ಶಾಲೂಮ್ ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದರು. ಈ ಬೆನ್ನಲ್ಲೇ ಕಾರ್ಯಪ್ರವೃತ್ತರಾದ ಪೊಲೀಸರು ತಡರಾತ್ರಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಹೆಡೆಮುರಿಕಟ್ಟಿದ್ದಾರೆ.

ಅಧಿಕಾರಿಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಎಸ್‌ಐಆರ್‌ಗೆ ಸಿದ್ಧತೆ ಮಾಡಿಕೊಳ್ಳಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್ ಐಆರ್)ಯನ್ನು ಸಮರ್ಪಕವಾಗಿ ನಡೆಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಎಸ್‌ಐಆರ್ ಸಂಬಂಧ ಅಧಿಕಾರಿಗಳ ಸಭೆ ನಡೆಸಿದ ಅವರು, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಕೇಂದ್ರ, ಉತ್ತರ, ದಕ್ಷಿಣ ಹಾಗೂ ಬೆಂಗಳೂರು ನಗರ ಜಿಲ್ಲೆಗಳಲ್ಲಿ ಎಸ್ ಐಆರ್ ಕುರಿತಂತೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಸಮರ್ಪಕವಾಗಿ ಮಾಡಿಕೊಂಡು ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಎಲ್ಲಾ ಬಿ.ಎಲ್.ಒಗಳು ಕರ್ತವ್ಯ ನಿರ್ವಹಣೆಯನ್ನು ಕಡ್ಡಾಯವಾಗಿ ಮಾಡುವ ಸಲುವಾಗಿ ಬಿ.ಎಲ್ .ಒ ಗಳಾಗಿ ನಿಯೋಜನೆಗೊಂಡಿರುವಂತಹ ವಿವಿಧ ಇಲಾಖಾ ಮುಖ್ಯಸ್ಥರು ಗಳಿಗೆ ಪತ್ರ ಕಳುಹಿಸಲು ಕ್ರಮ ಕೈಗೊಳ್ಳಿ. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಎಸ್‌ಐಆರ್ ಕುರಿತಂತೆ ಪ್ರತಿದಿನ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು. ಎಲ್ಲಿಯೂ ಯಾವುದೇ ರೀತಿಯ ಲೋಪದೋಷಗಳಾಗದಂತೆ ಪ್ರಕ್ರಿಯೆಯನ್ನು ಸಮರ್ಪಕವಾಗಿ ನಡೆಸಬೇಕೆಂದು ತಿಳಿಸಿದರು. ಎಲ್ಲಾ ಬೂತ್ ಮಟ್ಟದ ಅಧಿಕಾರಿಗಳು ಜೂನ್ 16 ರ ಒಳಗಾಗಿ ಮತದಾರರ ಪೂರ್ವ ಮ್ಯಾಪಿಂಗ್ ಗೆ ಸಂಬಂಧಿಸಿದಂತೆ ಶೇ.100 ರಷ್ಟು ಪ್ರಗತಿ ಸಾಧಿಸಬೇಕೆಂದು



ನೋಟಿಸ್ ಜಾರಿ

ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯಲ್ಲಿ ಬೂತ್ ಮಟ್ಟದ ಅಧಿಕಾರಿಗಳ ಕೊರತೆಯಿದ್ದರೆ ಕೂಡಲೇ ನಿಯೋಜನೆ ಮಾಡಿಕೊಳ್ಳಬೇಕು. ಈವರೆಗೆ ಕರ್ತವ್ಯಕ್ಕೆ ಹಾಜರಾಗದ ಬಿ.ಎಲ್.ಒ ಗಳಿಗೆ ಕೂಡಲೇ ನೋಟೀಸ್ ಜಾರಿ ಮಾಡಬೇಕು. ನೋಟೀಸ್‌ಗೆ ಪ್ರತಿಕ್ರಿಯೆ ನೀಡದ ಬಿ.ಎಲ್. ಒಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮಹೇಶ್ವರ್ ರಾವ್ ಕಟ್ಟುನಿಟ್ಟಿನ ಸೂಚನೆಯನ್ನು ಅಧಿಕಾರಿಗಳಿಗೆ ನೀಡಿದರು.



ಸೂಚಿಸಿದರು. ನಗರದಲ್ಲಿ ಜೂನ್ 20 ರಿಂದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪ್ರಾರಂಭವಾಗಲಿದ್ದು, ಈ ಕುರಿತು ನಾಗರಿಕರಲ್ಲಿ ಹೆಚ್ಚಿನ ಅರಿವು ಮೂಡಿಸಲು ಸಲಹೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಎಸ್‌ಐಆರ್ ವೇಳಾಪಟ್ಟಿ

- ಜೂನ್ 20 ರಿಂದ 29 : ಎಸ್‌ಐಆರ್‌ಗೆ ಸಿದ್ಧತೆ, ತರಬೇತಿ ಹಾಗೂ ಮುದ್ರಣ
- ಜೂನ್ 30 ರಿಂದ ಜುಲೈ 29 : ಮತದಾರರ ಮನೆಗಳಿಗೆ ಬಿ.ಎಲ್. ಒಗಳ ಭೇಟಿ
- ಜುಲೈ 29 : ಮತದಾನ ಕೇಂದ್ರಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ
- ಆಗಸ್ಟ್ 5 : ಎಸ್‌ಐಆರ್ ಭಾಗವಾಗಿ ಮತದಾರರ ಕರಡು ಪಟ್ಟಿ ಪ್ರಕಟ
- ಆಗಸ್ಟ್ 5 ರಿಂದ ಸೆಪ್ಟೆಂಬರ್ 4 : ಆಕ್ಷೇಪಣೆ ಸಲ್ಲಿಸಲು ಅವಕಾಶ
- ಆಗಸ್ಟ್ 5 ರಿಂದ ಅಕ್ಟೋಬರ್ 3 : ನೋಟೀಸ್, ವಿಲೇವಾರಿ, ಆಕ್ಷೇಪಣೆ
- ಅಕ್ಟೋಬರ್ 7 : ಅಂತಿಮ ಮತದಾರರ ಪಟ್ಟಿ ಪ್ರಕಟ

ಆರ್‌ಸಿಬಿ ಪಂದ್ಯ: ಮಾರ್ಗಸೂಚಿ ಬಿಡುಗಡೆ

• **ಬೆಂಗಳೂರು:** ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಟಾಟಾ ಐಪಿಎಲ್ 2026ರ ಫೈನಲ್ ಪಂದ್ಯಕ್ಕೆ ಲಗ್ಗೆ ಇಟ್ಟ ಬೆನ್ನಲ್ಲೇ, ರಾಜಧಾನಿಯಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಸಾರ್ವಜನಿಕ ಶಾಂತಿಯನ್ನು ಕಾಪಾಡುವ ನಿಟ್ಟಿನಲ್ಲಿ ನಗರ ಪೊಲೀಸ್ ಆಯುಕ್ತರು ಕಟ್ಟುನಿಟ್ಟಿನ ಸಾರ್ವಜನಿಕ ಸಲಹಾ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದಾರೆ. ಮೇ 31ರಂದು ನಡೆಯಲಿರುವ ಈ ಹೈವೋಲ್ಟೇಜ್ ಫೈನಲ್ ಪಂದ್ಯದ ಹಿನ್ನೆಲೆಯಲ್ಲಿ, ಸಾರ್ವಜನಿಕರು ಹಾಗೂ ಕ್ರಿಕೆಟ್ ಅಭಿಮಾನಿಗಳು ಕಡ್ಡಾಯವಾಗಿ ಪಾಲಿಸಬೇಕಾದ ಪ್ರಮುಖ ನಿಯಮಗಳು:

ಪರದೆಗಳ ಪ್ರದರ್ಶನಕ್ಕೆ ನಿರ್ಬಂಧ: ಫೈನಲ್ ಪಂದ್ಯದ ಫಲಿತಾಂಶ ಪ್ರಕಟವಾದ ನಂತರ, ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ವಿಜಯೋತ್ಸವ ಅಥವಾ ಸಂಭ್ರಮಾಚರಣೆಗಳನ್ನು ಮಾಡುವಂತಿಲ್ಲ. ರಸ್ತೆಗಳಿಗೆ ಮುಖ ಮಾಡಿರುವ ಎಲ್‌ಇಡಿ ವಾಲ್‌ಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಪೂರ್ವಾನುಮತಿ ಇಲ್ಲದೆ ಅಳವಡಿಸುವಂತಿಲ್ಲ. ಅಷ್ಟೇ ಅಲ್ಲದೆ, ಮಾಲ್‌ಗಳು, ಪಬ್ ಗಳು ಅಥವಾ ಸಾರ್ವಜನಿಕರಿಗೆ ಕಾಣಿಸುವಂತಹ ಇತರೆ ಸ್ಥಳಗಳ ಹೊರಭಾಗದಲ್ಲಿ ಫೈನಲ್ ಪಂದ್ಯ ವೀಕ್ಷಿಸಲು ಸ್ಕ್ರೀನ್ ಗಳನ್ನು ಹಾಕುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಮದ್ಯಪಾನ ನಿಷೇಧ: ಪಂದ್ಯದ ಖುಷಿಯಲ್ಲಿ ಪಟಾಕಿ ಸಿಡಿಸುವುದು ಹಾಗೂ ಇನ್ನಿತರ ಅಪಾಯಕಾರಿ ವಸ್ತುಗಳನ್ನು ಬಳಸುವುದನ್ನು ನಿಷೇಧಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮಾಡಿ ಅಶಾಂತಿ ಸೃಷ್ಟಿಸುವುದು, ಗಲಾಟೆ ಮಾಡುವುದು ಅಥವಾ ಅಸಭ್ಯವಾಗಿ ವರ್ತಿಸುವುದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

- ನಾಳೆ ಆರ್‌ಸಿಬಿ ಹೈವೋಲ್ಟೇಜ್ ಫೈನಲ್ ಪಂದ್ಯ
- ಸಾರ್ವಜನಿಕ ಶಾಂತಿ ಕಾಪಾಡಲು ಪೊಲೀಸ್ ಇಲಾಖೆ ಕ್ರಮ



ಸಂಚಾರ ನಿಯಮಗಳ ಪಾಲನೆ

ಬೈಕ್ ರ‍್ಯಾಲಿ ನಡೆಸುವುದು, ಅತಿವೇಗದ ಚಾಲನೆ, ವೀಲಿಂಗ್ ನಂತಹ ಸ್ಟಂಟ್‌ಗಳು, ಹಾರ್ನ್‌ಗಳ ದುರುಪಯೋಗ ಮತ್ತು ರಸ್ತೆ ತಡೆ ಉಂಟುಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ವಾಹನ ಸವಾರರು ಮತ್ತು ಸಾರ್ವಜನಿಕರು ಸಂಚಾರ ಪೊಲೀಸರು ನೀಡುವ ಸಲಹೆ ಹಾಗೂ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಜನಸಂದಣಿ ಹೆಚ್ಚಿರುವ ಪ್ರದೇಶಗಳಲ್ಲಿ ಸಾರ್ವಜನಿಕರು ಶಾಂತಿ ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು.

ಸೋಶಿಯಲ್ ಮೀಡಿಯಾ ಮೇಲೆ ನೀಗಾ

ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ರೀತಿಯ ಪ್ರಚೋದನಕಾರಿ ಪೋಸ್ಟ್‌ಗಳು, ದ್ವೇಷಪೂರಿತ ಸಂದೇಶಗಳು ಅಥವಾ ಸುಳ್ಳು ವದಂತಿಗಳನ್ನು ಹಂಚಿಕೊಳ್ಳಬಾರದು. ಪಂದ್ಯದ ಫಲಿತಾಂಶದ ನೆಪದಲ್ಲಿ ಎದುರಾಳಿ ಅಥವಾ ಇತರ ತಂಡದ ಅಭಿಮಾನಿಗಳನ್ನು ಕೆಣಕುವುದು, ನಿಂದಿಸುವುದು ಅಥವಾ ಜಗಳಕ್ಕೆ ಪ್ರಚೋದನೆ ನೀಡುವಂತೆ ವರ್ತಿಸಬಾರದು.

ಬಿಜೆಪಿಯಿಂದ ಸಾವರ್ಕರ್ ಜನ್ಮದಿನೋತ್ಸವ

• **ಯಲಹಂಕ:** ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ನಾಯಕ, ಮಹಾನ್ ದೇಶಭಕ್ತ, ಸ್ವಾತಂತ್ರ್ಯವೀರ ವಿನಾಯಕ ದಾಮೋದರ್ ಸಾವರ್ಕರ್ ಅವರ 143ನೇ ಜನ್ಮದಿನೋತ್ಸವವನ್ನು ಯಲಹಂಕ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಆಚರಿಸಿದರು.

ಯಲಹಂಕ ಉಪನಗರದ ವೀರ ಸಾವರ್ಕರ್ ಸೇತುವೆ ಬಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಸ್.ಆರ್. ವಿಶ್ವನಾಥ್ ಸಾರ್ವಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ನಮನ ಸಲ್ಲಿಸಿದರು. ನೂರಾರು ಜನರು ವೀರ ಸಾವರ್ಕರ್ ಭಾವಚಿತ್ರವುಳ್ಳ ಬೃಹತ್ ಬ್ಯಾನರ್ ಹಿಡಿದು ಮೆರವಣಿಗೆ ನಡೆಸಿದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ವಿಶ್ವನಾಥ್, ಸ್ವಾತಂತ್ರ್ಯ ವೀರ ಸಾವರ್ಕರ್ ಹಿಂದುತ್ವದ ಮೂಲಕ ರಾಷ್ಟ್ರೀಯತೆಯ ಬೀಜ ಬಿತ್ತಿದ ಮಹಾನ್ ಚಿಂತಕರು. ಅವರ ತ್ಯಾಗ, ದೇಶಭಕ್ತಿ ಮತ್ತು ಅಖಂಡ ಭಾರತದ ಕನಸು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿ. ಕಾಂಗ್ರೆಸ್ ಸರ್ಕಾರ



ಸಾವರ್ಕರ್ ಅವರನ್ನು ಅಪಮಾನಿಸುತ್ತಿರುವುದನ್ನು ದೇಶದ ಜನತೆ ಕ್ಷಮಿಸುವುದಿಲ್ಲ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಯಲಹಂಕ ನಗರ ಮಂಡಲ ಬಿಜೆಪಿ ಅಧ್ಯಕ್ಷ ಎಂ.ಮುನಿರಾಜು, ಪ್ರಧಾನ ಕಾರ್ಯದರ್ಶಿ ವಿ.ಪವನ್ ಕುಮಾರ್, ಮುಖಂಡರಾದ ಎಸ್.ಎನ್.ರಾಜಣ್ಣ, ಮಧುಸೂದನ್,ನರಸಿಂಹಮೂರ್ತಿ,ಎಸ್. ಸೋಮಶೇಖರ್, ಯುವ ಮೋರ್ಚಾ ಅಧ್ಯಕ್ಷ ಕಿರಣ್, ಶರತ್ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

ನೀರು ಸರಬರಾಜಿನಲ್ಲಿ ವ್ಯತ್ಯಯ ಇಂದು

• **ಬೆಂಗಳೂರು:** ಕಾವೇರಿ 2ನೇ ಹಂತದ 600 ಮಿ.ಮೀ. ವ್ಯಾಸದ ಮುಖ್ಯ ಕುಡಿಯುವ ನೀರಿನ ಕೊಳವೆಯಲ್ಲಿ ಉಂಟಾಗಿರುವ ಭಾರೀ ಸೋರಿಕೆಯನ್ನು ತಡೆಗಟ್ಟಲು ಬೆಂಗಳೂರು ಜಲಮಂಡಳಿಯು ತುರ್ತು ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ರಸ್ತೆ ಸೇವಾ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಮೇ 30 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಂಗಳೂರು ಜಲಮಂಡಳಿ ತಿಳಿಸಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಿರುವ ಜಲಮಂಡಳಿ, ಮೇ 30 ರಂದು ಬೆಳಗ್ಗೆ 9ಕ್ಕೆ ಕಾಮಗಾರಿಯನ್ನು ಜಲಮಂಡಳಿ ಕೈಗೆತ್ತಿಕೊಳ್ಳಲಿದೆ. ಈ ಹಿನ್ನೆಲೆಯಲ್ಲಿ ದುರಸ್ತಿ ಕಾಮಗಾರಿ ಮುಗಿಯುವವರೆಗೆ ಅಂದರೆ ಸುಮಾರು 8 ಗಂಟೆಗಳ ಕಾಲ ಮೈಸೂರು ರಸ್ತೆ ಸೇವಾ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸೌತ್ ಎಂಡ್ ವೃತ್ತದ ಮುಖಾಂತರ ಮೈಸೂರು ರಸ್ತೆ ಸೇವಾ ಪ್ರದೇಶಗಳಿಗೆ ಪ್ರತಿನಿತ್ಯ 14 ಎಂಎಲ್‌ಡಿ ನೀರು ಸರಬರಾಜು ಮಾಡುವ ಪೈಪ್‌ಲೈನ್ ರಸ್ತೆಯ ಮುಖ್ಯ ಕೊಳವೆಯಲ್ಲಿ ರಂಧ್ರ ಉಂಟಾಗಿ, ಹೆಚ್ಚಿನ ಒತ್ತಡದಲ್ಲಿ ನೀರು ಚಿಮ್ಮುತ್ತಿದೆ.

‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ’ ಬೆಳೆದು ಬಂದ ಹಾದಿ







ಮಹಾತ್ಮಾ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆಯಲ್ಲಿ, ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ, ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಸ್ವಾವಲಂಬನೆಗೆ ಪ್ರಾಮುಖ್ಯತೆಯನ್ನು ನೀಡುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಹೆಗ್ಗಡೆಯವರ ಕನಸಿನ ಕೂಸು ‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ’.

ಡಾ. ಡಿ. ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿಯ ನಾಯಕತ್ವದಲ್ಲಿ ಸ್ಥಾಪಿತವಾದ ಎಸ್‌ಕೆಡಿಆರ್‌ಡಿಪಿ ಮತ್ತು ರುಡ್ ಸೆಟ್ ಸಂಸ್ಥೆ ಮುಂತಾದ ಮಹತ್ವದ ಸಾಮಾಜಿಕ ಸಂಸ್ಥೆಗಳ ಸಾಲಿನಲ್ಲಿ, ಸಿರಿ ತನ್ನ ವಿಶಿಷ್ಟ ಸಾಮಾಜಿಕ ದೃಷ್ಟಿಕೋನದಿಂದ ವಿಶೇಷ ಸ್ಥಾನವನ್ನು ಪಡೆದಿದೆ.

ಸಿರಿಸಂಸ್ಥೆಯಪ್ರಮುಖವೈಶಿಷ್ಟ್ಯವೆಂದರೆಇದುಲಾಭಗಳಿಸುವ ಉದ್ದೇಶದಿಂದ ಆರಂಭಿಸಲ್ಪಟ್ಟ ಸಂಸ್ಥೆಯಲ್ಲ. ಬದಲಾಗಿ, ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ ಮುಖ್ಯವಾಗಿ ಸಮಾಜದ ಹಿಂದುಳಿದವರ್ಗಗಳು, ಪರಿಶಿಷ್ಟಜಾತಿ ಸಮುದಾಯಗಳು, ಅಲ್ಪಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ಮಹಿಳೆಯರಿಗೆ ಗೌರವಯುತ ಜೀವನ, ಉದ್ಯೋಗ, ಆತ್ಮವಿಶ್ವಾಸ ಮತ್ತು ಆರ್ಥಿಕ ಸ್ವಾವಲಂಬನೆ ಒದಗಿಸುವ ಮಹತ್ತರವಾದ ಉದ್ದೇಶದಿಂದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹಣಕಾಸಿನ ನೆರವಿನೊಂದಿಗೆ ‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯನ್ನು 2004ರಲ್ಲಿ ಬೆಳ್ತಂಗಡಿಯಲ್ಲಿ ಪ್ರಾರಂಭಿಸಿದರು.

ಹೀಗೆಪ್ರಾರಂಭಗೊಂಡಸಿರಿಸಂಸ್ಥೆಯಲ್ಲಿ, ಯಾವುದೇರೀತಿಯ ವಿಶೇಷ ಅನುಭವ, ಪರಿಣಿತಿ ಇಲ್ಲದ ಗ್ರಾಮೀಣ ಮಹಿಳೆಯರಿಗೆ ವೇತನ ಸಹಿತವಾಗಿ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಿ ಅವರಿಂದ ಉತ್ತಮ ಗುಣಮಟ್ಟದ ಸಿದ್ಧ ಉಡುಪು ಉತ್ಪನ್ನಗಳು, ಫಿನಾಯಿಲ್, ಅಗರಬತ್ತಿ, ಕೋಕಂ ಜ್ಯೂಸ್, ಉಪ್ಪಿನಕಾಯಿ ಉತ್ಪನ್ನಗಳು ಸೇರಿದಂತೆ ಹಲವು ಬಗೆಯ ಗೃಹೋಪಯೋಗಿ ಉತ್ಪನ್ನಗಳನ್ನು ತಯಾರಿಸುವಂತೆ ಮಾಡುವುದು ಸಿರಿಯ ವಿಶೇಷತೆಯಾಗಿದೆ. ಸಿರಿ ಉತ್ಪನ್ನಗಳನ್ನು ತಯಾರಿಸಲು ಪೂರಕ ವಾಗುವಂತೆ ಸುಮಾರು 50–60 ಹಳ್ಳಿಗಳಲ್ಲಿ ಘಟಕಗಳನ್ನು ಸ್ಥಾಪಿಸಿ, ಅಲ್ಲಿರುವ ಬಡಮಹಿಳೆಯರಿಗೆ ಉತ್ಪಾದನೆಗೆ ಬೇಕಾಗುವ ಕಚ್ಚಾಸಾಮಾಗ್ರಿಗಳನ್ನು ಪೂರೈಸಿ, ಅವರಿಂದ ತಯಾರಿಸಲಾದ ಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ತಂದು ಆಯ್ದ ಪ್ರದೇಶಗಳಲ್ಲಿ ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿತ್ತು.

ಬೇರೆ ಬೇರೆ ಕಡೆಗಳಲ್ಲಿರುವ ಘಟಕಗಳಿಂದ ಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ಸಾಗಿಸಲು ಅಧಿಕ ಸಾಗಾಟದ ವೆಚ್ಚ ವ್ಯಯವಾಗುತ್ತಿರುವುದರ ಜೊತೆಗೆ ಉತ್ಪನ್ನಗಳ ಗುಣಮಟ್ಟವನ್ನು ಕಾಪಾಡಲು ಬಹಳಷ್ಟು ಸಮಸ್ಯೆಗಳಾಗುತ್ತಿರುವ ಬಗ್ಗೆ ಸಿರಿಯ ವ್ಯವಸ್ಥಾಪಕ ನಿರ್ದೇಶಕ ಕೆ. ಎನ್. ಜನಾರ್ದನ ಅವರು ಪೂಜ್ಯರು ಹಾಗೂ ಮಾತೃಶ್ರೀ ಅಮ್ಮನವರಲ್ಲಿ ಚರ್ಚಿಸಿದಾಗ, ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಜೊತೆಗೆ ಸಿರಿಯ ವಿವಿಧ ಉತ್ಪಾದನಾ ವಿಭಾಗಗಳು ಒಂದೇ ಸೂರಿನಡಿ ಕಾರ್ಯಾಚರಿಸುವ ನಿಟ್ಟಿನಲ್ಲಿ ಪೂಜ್ಯರು ಹಾಗೂ ಮಾತೃಶ್ರೀ ಅಮ್ಮನವರು ಬೆಳ್ತಂಗಡಿಯ ರೆಂಕೆದಗುತ್ತುವಿನ ಬಳಿ ಸುಮಾರು ಏಳು ಎಕರೆ ನಿವೇಶನವನ್ನು 2023 ಫೆಬ್ರವರಿಯಲ್ಲಿ ಖರೀದಿಸಿ, ಈ ವಿಶಾಲವಾದ ಸೌರಶಕ್ತಿಯಿಂದ ಬೆಳಗುವ ಸಿರಿ ಪರಿಸರದಲ್ಲಿ 71.00 ಕೋಟಿ ರೂ. ವೆಚ್ಚದಲ್ಲಿ ಸುಮಾರು 1.50ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಸಿರಿ ಸಂಸ್ಥೆಗೆ ನೂತನವಾದ ಬೃಹತ್ ಕಟ್ಟಡವನ್ನು ನಿರ್ಮಿಸಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಳವಡಿಸುವಂತಹ ಐತಿಹಾಸಿಕ ಕಾರ್ಯಕ್ಕೆ 2023ನೇ ವರ್ಷದ ಮಾರ್ಚ್ ತಿಂಗಳಲ್ಲಿ ಪೂಜ್ಯರು ಹಾಗೂ ಅಮ್ಮನವರು ಶಿಲಾನ್ಯಾಸವನ್ನು ನೆರವೇರಿಸಿದರು. 20-03-2025ರಂದು ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ತದನಂತರ ಹೊಸ ಕಟ್ಟಡದಲ್ಲಿ ಸಿರಿ ಉತ್ಪನ್ನಗಳ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯು ದಕ್ಷಿಣಕನ್ನಡ ಜಿಲ್ಲೆಯ 2000 ಸ್ವ-ಸಹಾಯ ಗುಂಪುಗಳ ಮಾಲಿಕತ್ವ ಹೊಂದಿರುವ ಕಲಂ 8ರ ಕಂಪೆನಿ ಕಾಯ್ದೆ 2013ರ ಅಡಿಯಲ್ಲಿ ನೋಂದಾವಣೆಗೊಂಡ ಸಂಸ್ಥೆಯಾಗಿದ್ದು, ಸಿರಿ ಸಂಸ್ಥೆಯು ಯಾವುದೇ ಲಾಭದ ಉದ್ದೇಶವಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದರಿಂದ ಆದಾಯ ತೆರಿಗೆ ಕಾಯ್ದೆ–1961ರ ಅಡಿಯಲ್ಲಿ ವಿಶೇಷವಾಗಿ ನೀಡಲ್ಪಡುವ ಕಲಂ 12ಎ ಮತ್ತು ಕಲಂ 80ಜಿಯ ಆದಾಯ ತೆರಿಗೆ ವಿನಾಯಿತಿಯನ್ನು ಪಡೆದುಕೊಂಡಿದೆ. ಸುಮಾರು ಒಂದು ಸಾವಿರಕ್ಕೂ ಮಿಕ್ಕಿ ಇಂತಹ ಮಹಿಳಾ ಸಿಬ್ಬಂದಿಗಳನ್ನು ಹೊಂದಿರುವ ಸಿರಿ ಸಂಸ್ಥೆಯಲ್ಲಿ ಗ್ರಾಮೀಣ ಮಹಿಳೆಯರು ಉತ್ಪಾದಿಸುವ ಉತ್ಕೃಷ್ಟ ಗುಣಮಟ್ಟದ ಗೃಹೋಪಯೋಗಿ ಆಹಾರೋತ್ಪನ್ನಗಳು, ಸಿರಿಧಾನ್ಯಗಳು, ಸಿದ್ಧ ಉಡುಪುಗಳು, ಅಗರಬತ್ತಿ, ರೆಕ್ಸಿನ್, ಶುಚಿಕಾರಕ ಇತ್ಯಾದಿ ಉತ್ಪನ್ನಗಳನ್ನು ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿದ್ದು, ಈ ಮೂಲಕ ಪ್ರತ್ಯಕ್ಷವಾಗಿ/ಪರೋಕ್ಷವಾಗಿ 5000ಕ್ಕೂ ಹೆಚ್ಚು ಬಡ ಕುಟುಂಬಗಳಿಗೆ ಆಶ್ರಯ ನೀಡಿ, ಅವರ ಬಾಳು ಹಸನಾಗಿಸುವಲ್ಲಿ ಶ್ರಮಿಸುತ್ತಿದೆ. ಸಿರಿ ಕೇಂದ್ರ ಕಚೇರಿಗೆ ಧರ್ಮಸ್ಥಳ, ಉಜಿರೆ, ಬೆಳ್ತಂಗಡಿ, ವೇಣೂರು, ಗೇರುಕಟ್ಟೆ, ಉಪ್ಪಿನಂಗಡಿ, ನಾರಾವಿ, ಗುರುವಾಯನಕೆರೆ, ಮಡಂತ್ಯಾರು, ಪುಂಜಾಲಕಟ್ಟೆ ಇತ್ಯಾದಿ ಕಡೆಗಳಿಂದ ಕೆಲಸಕ್ಕಾಗಿ ಬರುವ ಸಿಬ್ಬಂದಿಗಳಿಗೆ ಬೆಳಿಗ್ಗೆ ಮತ್ತು ಸಂಜೆ ತಮ್ಮ ಕರ್ತವ್ಯದ ಸ್ಥಳಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಉಚಿತವಾಗಿ ಎರಡು ಬಸ್ಸುಗಳ ಸೌಕರ್ಯವನ್ನು ಒದಗಿಸಲಾಗಿದೆ.

ಸಿಬ್ಬಂದಿಗಳಿಗೆ ಹಾಸ್ಟೆಲ್ ಸೌಕರ್ಯ: ದೂರದ ಊರುಗಳಿಂದ ಸಿರಿ ಸಂಸ್ಥೆಗೆ ಉದ್ಯೋಗಕ್ಕಾಗಿ ಬರುವಂತಹ ಹೆಣ್ಣುಮಕ್ಕಳಿಗೆ ಸಹಕಾರಿಯಾಗುವ ಉದ್ದೇಶದಿಂದ ಸಿರಿ ಸಂಸ್ಥೆಯಲ್ಲಿಯೇ ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತವಾದ ಹಾಸ್ಟೆಲ್ ವ್ಯವಸ್ಥೆಯನ್ನೂ ಒದಗಿಸಲಾಗಿದೆ.

ವಸತಿ ಗೃಹ (ಬ್ರಾಹ್ಮಣಿ): ಸಿರಿ ಸಂಸ್ಥೆಯ ನೂತನ ಕಟ್ಟಡದ ಆವರಣದಲ್ಲಿ ಸಿರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ವಸತಿಗೃಹದ ಜೊತೆಗೆ ಸಂಸ್ಥೆಗೆ ಆಗಮಿಸುವ ವಿಶೇಷ ಅತಿಥಿಗಳಿಗೆ ಉಳಿದುಕೊಳ್ಳಲು 4 ಸುಸಜ್ಜಿತ ಅತಿಥಿಗೃಹಗಳ ವ್ಯವಸ್ಥೆ ಹಾಗೂ ದೂರದ ಊರಿನಿಂದ ಆಗಾಗ ಬಂದು ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗಾಗಿ 11 ವಸತಿಗೃಹಗಳು, ಜಿಮ್ ಇಕ್ವಿಪ್‌ಮೆಂಟ್ ಕೊಠಡಿ ಮತ್ತು ಮೆಡಿಟೇಶನ್ ಕೊಠಡಿಯ ಸೌಲಭ್ಯವಿದೆ.

ಸಿರಿ ಸಿಬ್ಬಂದಿಗಳ ಪುಟ್ಟ ಮಕ್ಕಳಿಗೆ ಶಿಶು ವಿಹಾರ (ಮಗು): ರಿ ಸಂಸ್ಥೆಯಲ್ಲಿ ಶೇ.90ರಷ್ಟು ಮಹಿಳಾ ಸಿಬ್ಬಂದಿಗಳೇ ಕಾರ್ಯನಿರ್ವಹಿಸುವುದರಿಂದ, ಇವರಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಸಿರಿ ಸಿಬ್ಬಂದಿಗಳ 5 ವರ್ಷ ವಯಸ್ಸಿನೊಳಗಿನ ಪುಟ್ಟ ಮಕ್ಕಳ ಲಾಲನೆ ಪಾಲನೆಗಾಗಿ ಸಿರಿ ಸಂಸ್ಥೆಯಲ್ಲಿಯೇ ಸುಸಜ್ಜಿತವಾದ ಶಿಶುವಿಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. ಇಲ್ಲಿ ಮಕ್ಕಳಿಗೆ ಆಟೋಟ ಚಟುವಟಿಕೆಗಳ ಜೊತೆಗೆ ಸಿರಿ ಪುಷ್ಟಿ ಮೊದಲಾದ ಪೌಷ್ಟಿಕಾಂಶಯುಕ್ತ ಆಹಾರ ನೀಡುವ ಮೂಲಕ ಮಕ್ಕಳ ಆರೋಗ್ಯದ ಕಾಳಜಿ ವಹಿಸಲಾಗುತ್ತಿದೆ.

ನಗರದಲ್ಲಿ ಮುಂದಿನ ಮೂರು ದಿನ ಅಂದರೆ ಜೂನ್ 1 ರ ವರೆಗೂ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಮಾನ ಇಲಾಖೆ ಸೂಚನೆ ನೀಡಿದೆ.

ಮುಖ್ಯ ಆಯುಕ್ತರ ಪರಿಶೀಲನೆ


ಕೆ.ಆರ್. ಸರ್ಕಲ್ ಸೇರಿದಂತೆ ನಗರದ ಹಲವು ಅಂಡರ್ ಪಾಸ್‌ಗಳು ಜಲಾವೃತಗೊಂಡಿದ್ದವು. ಜಲಾವೃತಗೊಂಡ ಅಂಡರ್ ಪಾಸ್‌ಗನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪರಿಶೀಲನೆ ನಡೆಸಿದರು. ಅಂಡರ್ ಪಾಸ್‌ನಲ್ಲಿ ಸಂಗ್ರಹವಾಗುವ ಮಳೆ ನೀರನ್ನು ಶೀಘ್ರ ತೆರವಿಗೆ ಸೂಚಿಸಿದ್ದಾರೆ. ಅಂಡರ್ ಪಾಸ್‌ಗಳಲ್ಲಿ ನೀರು ಸಂಗ್ರಹವಾಗದಂತೆ, ರಸ್ತೆಗಳಲ್ಲಿ ನೀರು ಸಮರ್ಪಕವಾಗಿ ಸಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಕಸದ ವಿಲೇವಾರಿ ಸರಿಯಾದ ಪ್ರಮಾಣದಲ್ಲಿ ಆಗಬೇಕು. ಕಸ ರಸ್ತೆಯಲ್ಲಿ ಸಂಗ್ರಹವಾದರೆ ಮಳೆ ನೀರು ಸರಾಗವಾಗಿ ಹರಿಯುವುದಿಲ್ಲ. ಸಾರ್ವಜನಿಕರು ಸಮರ್ಪಕವಾಗಿ ಕಸ ವಿಲೇವಾರಿ ಮಾಡಬೇಕು. ರಸ್ತೆ ಬದಿ ಒಣಗಿದ ಮರಗಳು, ಕೊಂಬೆಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ ಆಯುಕ್ತರು ಮಾಹಿತಿ ನೀಡಿದ್ದಾರೆ.



ಮಾನವೀಯತೆ ಮೆರೆದ ಟ್ರಾಫಿಕ್ ಪೊಲೀಸ್

ಮಳೆಯಿಂದ ನೀರು ತುಂಬಿದ್ದು ರಸ್ತೆ ದಾಟಲು ಹರಸಾಹಸ ಪಡುತ್ತಿದ್ದ ವಿಶೇಷ ಚೇತನ ವ್ಯಕ್ತಿಯನ್ನು ಹೊತ್ತುಕೊಂಡು ಟ್ರಾಫಿಕ್ ಪೊಲೀಸ್ ಮಾನವೀಯತೆ ಮೆರೆದಿದ್ದಾರೆ. ಮಳೆಯಲ್ಲಿ ರಸ್ತೆದಾಟಲಾಗದೇ ವಿಶೇಷ ಚೇತನ ವ್ಯಕ್ತಿ ಪರದಾಡುತ್ತಿದ್ದರು. ಇದನ್ನು ಕಂಡ ಬ್ಯಾಟರಾಯನಪುರ ಟ್ರಾಫಿಕ್ ಪೊಲೀಸ್ ವಿಶೇಷ ವ್ಯಕ್ತಿಯ ನೆರವಿಗೆ ಧಾವಿಸಿದ್ದಾರೆ. ವಿಜಯನಗರದ ಮಂಜುನಾಥ್ ನಗರದಲ್ಲಿ ರಾಜಕಾಲುವೆ ತುಂಬಿ ಹರಿಯುತ್ತಿದ್ದು, ರಾಜಕಾಲುವೆ ತಡೆಗೋಡೆ ಕುಸಿಯುವ ಆತಂಕ ಶುರುವಾಗಿದೆ. ರಾಜಕಾಲುವೆ ಪಕ್ಕದ ಮಣ್ಣು ಕುಸಿಯುತ್ತಿರುವ ಹಿನ್ನೆಲೆ ರಾಜಕಾಲುವೆ ಅಕ್ಕಪಕ್ಕದ ನಿವಾಸಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಈಗಾಗಲೇ ಎರಡು ಮನೆಗಳು ಕುಸಿಯುವ ಹಂತಕ್ಕೆ ತಲುಪಿದ್ದು, ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

- ಇಟಿ ಕ್ರಾಸ್ ನಿಂದ ಮೇಖ್ರಿ ವೃತ್ತದ, ಜಿಸಿ ನಗರ ಕಡೆಗೆ
- ಬಿಸ್ಮಿಲ್ಲಾ ನಗರದಿಂದ ಡೈರಿ ವೃತ್ತ ಕಡೆಗೆ
- 3. ನಾಯಂಡಹಳ್ಳಿ ಯಿಂದ ಕೆಂಗೇರಿ ಕಡೆಗೆ
- ಉದಯ ಟಿವಿ ಅಂಡರ್ಪಾಸ್ ನಿಂದ ಜಯಮಹಲ್ ರಸ್ತೆ ಕಡೆಗೆ
- ಕುಮಾರ ಕೃಪಾ ರಸ್ತೆ ಯಿಂದ ಶಿವಾನಂದ ಜಂಕ್ಷನ್ ಕಡೆಗೆ
- ರಾಜೀವ್ ಗಾಂಧಿ ವೃತ್ತ ದಿಂದ ಓಊಖ ಜಂಕ್ಷನ್ ಕಡೆಗೆ
- ಕಿಮ್ಕೋ ಜಂಕ್ಷನ್ ನಿಂದ ವಿಜಯನಗರದ ಕಡೆಗೆ
- ಕಲ್ಯಾಣ ನಗರ ಓಂಶಕ್ತಿ ದೇವಸ್ಥಾನ ರಸ್ತೆ
- ಮಡಿವಾಳ ಪಿಎಸ್ ನಿಂದ ಸಿಲ್ಕ್ ಬೋರ್ಡ್ ಕಡೆಗೆ
- ಸಾರಕ್ಕಿ ಯು ಟರ್ನ್
- ಕ್ವೀನ್ಸ್ ಜಂಕ್ಷನ್ ನಿಂದ ಅನಿಲ್ ಕುಂಬ್ಳೆ ಜಂಕ್ಷನ್ ಕಡೆಗೆ
- ಮಾರ್ಕೆಟ್ ಡೌನ್ರಾಂಪ್ ನಿಂದ ಖಒಕ ರಸ್ತೆ ಕಡೆಗೆ
- ಬ್ರಿಯಾಂಡ್ ಸ್ಕ್ವೇರ್ ರಸ್ತೆ
- ಜಿಆರ್‌ಟಿ ಜಂಕ್ಷನ್
- ನೆಕ್ಸಸ್ ಮಾಲ್ ಮುಖ್ಯ ರಸ್ತೆ
- ಬಳೆಗೆರೆ ರಸ್ತೆ
- ಸಿದ್ಧಾಪುರ
- ದೇವಿನಗರ ಕ್ರಾಸ್



ಮಳೆಯಿಂದ ಕೆಪಿ ಅಗ್ರಹಾರ ಲಾಕ್

ಇನ್ನು, ಬೆಂಗಳೂರಿನಲ್ಲಿ ಅರ್ಧ ಗಂಟೆ ಸುರಿದ ಮಳೆಗೆ ಕೆಪಿ ಅಗ್ರಹಾರಕ್ಕೆ ಲಾಕ್ ಆಗಿ ಹೋಗಿದೆ. ಮಳೆ ನೀರಿನಿಂದ ಮುಳುಗಿರುವ ಬಡಾವಣೆಯಲ್ಲಿರುವ ಮನೆಗಳಿಗೆ ಮಳೆ ನೀರು ನುಗ್ಗಿ ಅವಾಂತರ ಸೃಷ್ಟಿಯಚಾಗಿದ್ದು, ಸ್ಥಳೀಯರ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಗರದ ಪ್ರಮುಖ ರಸ್ತೆಗಳು ಮಳೆ ನೀರಿಂದಾಗಿ ಜಲಾವೃತಗೊಂಡಿದ್ದು, ಮನೆಗೆ ಮರಳುತ್ತಿದ್ದ ಉದ್ಯೋಗಿಗಳು ಹಾಗೂ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಧಾರಾಕಾರ ಮಳೆಗೆ ಅಂಡರ್‌ಪಾಸ್‌ಗಳಲ್ಲಿ ಸಂಚಾರವನ್ನು ನಿರ್ಬಂಧಿಸಲಾಗಿದೆ. ಮಳೆ ನೀರು ನಿಂತಿರುವುದರಿಂದ ಹಲವು ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿದೆ.

ಜವಾಬ್ದಾರಿಯುತ ನಾಗರಿಕರಾಗಲು ವಿದ್ಯೆ ಪ್ರೇರಣೆ

ಬೆಂಗಳೂರು: ಅರ್ಹ ಯಶಸ್ಸು ಮತ್ತು ಅಡ್ಡಮಾರ್ಗದಲ್ಲಿ ಗಳಿಸಿದ ಯಶಸ್ಸು ಎರಡರ ನಡುವಿನ ವ್ಯತ್ಯಾಸವನ್ನು ಅರಿತು ಜ್ಞಾನವನ್ನು ಮೌಲ್ಯಯುತವಾಗಿಸಿ ಕೊಳ್ಳಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗ್ಡೆ ಹೇಳಿದರು.

ಎಂ.ಪಿ.ಬಿರ್ಲಾ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಸಮಾಜದ ಬಹುದೊಡ್ಡ ಅಪಾಯವೆಂದರೆ ಅಕ್ಷರಸ್ಥರು ಸಾಮಾಜಿಕ ಹೊಣೆಗಾರಿಕೆಯಿಂದ ವಿಮುಖರಾಗುತ್ತಿರುವುದು. ನಮ್ಮ ಪರಂಪರೆಯಲ್ಲಿ ಮೌಲ್ಯವಿಲ್ಲದ ಜ್ಞಾನಕ್ಕೆ ಬೆಲೆ ಇಲ್ಲ ಎನ್ನುವುದನ್ನು ಖಚಿತವಾಗಿ ಹೇಳಲಾಗಿದೆ. ವಿದ್ಯೆಯು ಜವಾಬ್ದಾರಿಯುತನಾಗರೀಕರಾಗಲು ಪ್ರೇರಣೆನೀಡಬೇಕು.



ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗ್ಡೆ ಅಭಿಮತ

ಆಗ ಮಾತ್ರವೇ ನಮ್ಮ ಪ್ರಜಾಪ್ರಭುತ್ವವು ಸುರಕ್ಷಿತವಾಗಿ ಉಳಿಯಲು ಸಾಧ್ಯ. ಉಳ್ಳವರು ಮತ್ತು ಇಲ್ಲದವರ ನಡುವೆ ಕಂದಕ ವಿಸ್ತಾರವಾಗುತ್ತಾ ಹೋದರೆ ಸಮಾಜದಲ್ಲಿ ಅಶಾಂತಿ ಉಂಟಾಗ ಬಹುದು ಎಂದು ತಿಳಿಸಿದರು.

ಎಂ.ಪಿ.ಬಿರ್ಲಾ ಸಂಸ್ಥೆಯ ಅಧ್ಯಕ್ಷ ಎನ್.ರಾಮಾನುಜ ಮಾತನಾಡಿ, ಎಂಬಿಎ ಎನ್ನುವುದು ಶ್ರೀಮಂತರ ಸೊತ್ತಾಗಿ, ಮಧ್ಯಮ ವರ್ಗದವರ ಪಾಲಿಗೆ ಗಗನ ಕುಸುಮವಾಗಿದ್ದ ಕಾಲದಲ್ಲಿ ಆರಂಭವಾದ ಸಂಸ್ಥೆ ವ್ಯವಹಾರದೊಂದಿಗೆ ನೈತಿಕತೆಯನ್ನೂ ಕಲಿಸುವ ಸಂಸ್ಥೆ ಎನ್ನುವ ಹೆಗ್ಗಳಿಕೆಯನ್ನು ಪಡೆದಿದೆ ಎಂದು ತಿಳಿಸಿದರು. ಡಾ.ಮನಮೋಹನ ಸಿಂಗ್ ವಿಶ್ವವಿದ್ಯಾಲಯದ ಸೆನೆಟ್ ಮೆಂಬರ್ ಎಚ್. ಕೃಷ್ಣರಾವ್, ವಿ.ಮುರಳೀಧರ್ ಉಪಸ್ಥಿತರಿದ್ದರು.

ಭಾರೀ ವಾಹನ ಸಂಚಾರಕ್ಕೆ ತಾತ್ಕಾಲಿಕ ನಿರ್ಬಂಧ

ಬೆಂಗಳೂರು: ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವರ್ತೂರು ಮುಖ್ಯರಸ್ತೆಯ ಮಾರತ್ತಹಳ್ಳಿ ಬ್ರಿಡ್ಜ್ ಮೇಲೆ ಬಿಎಂಆರ್‌ಸಿಎಲ್ ವತಿಯಿಂದ ಮೆಟ್ರೋ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ವಾಹನ ಸವಾರರ ಹಿತದೃಷ್ಟಿಯಿಂದ ಮೇ 30ರ ರಾತ್ರಿ 11 ಗಂಟೆಯಿಂದ ಮರುದಿನ ಬೆಳಗ್ಗೆ 6 ಗಂಟೆಯವರೆಗೆ ಭಾರೀ ಸರಕು ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ, ಪರ್ಯಾಯ ಮಾರ್ಗಗಳನ್ನು ಕಲ್ಪಿಸಲಾಗಿದೆ.

ಮಾರತ್ತಹಳ್ಳಿ ಬ್ರಿಡ್ಜ್ ಮೇಲೆ ಬಿಎಂಆರ್ ಸಿಎಲ್ ಕಾಮಗಾರಿ ಹಿನ್ನೆಲೆ

ವಾಹನ ಸಂಚಾರ ನಿರ್ಬಂಧಿಸಿರುವ ರಸ್ತೆಗಳು: ಎಚ್‌ಎಎಲ್ ಕಡೆಯಿಂದ: ವರ್ತೂರು ಮುಖ್ಯರಸ್ತೆ ಮಾರತ್ತಹಳ್ಳಿ ಬ್ರಿಡ್ಜ್ ಮೂಲಕ ವರ್ತೂರು ಮತ್ತು ವೈಟ್‌ಫೀಲ್ಡ್ ಕಡೆಗೆ ಹೋಗುವ ಭಾರೀ ಸರಕು ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ವರ್ತೂರು/ವೈಟ್‌ಫೀಲ್ಡ್ ಕಡೆಯಿಂದ: ವರ್ತೂರು ಮುಖ್ಯರಸ್ತೆ ಮಾರತ್ತಹಳ್ಳಿ ಬ್ರಿಡ್ಜ್ ಮೂಲಕ ಎಚ್‌ಎಎಲ್ ಕಡೆಗೆ ಹೋಗುವ ಭಾರೀ ಸರಕು ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.

ನಿರ್ಬಂಧಿಸಲಾದ ಸಂಚಾರಕ್ಕೆ ಪರ್ಯಾಯ ಮಾರ್ಗಗಳು: ಎಚ್‌ಎಎಲ್ ಕಡೆಯಿಂದ ವರ್ತೂರು ಮತ್ತು ವೈಟ್‌ಫೀಲ್ಡ್ ಕಡೆಗೆ ಹೋಗುವ ಭಾರೀ ವಾಹನಗಳಿಗೆ ವರ್ತೂರು ಮುಖ್ಯ ರಸ್ತೆಯ ಮುಖಾಂತರ ಸಾಗಿ ಮಾರತ್ತಹಳ್ಳಿ ಬ್ರಿಡ್ಜ್ ಜಂಕ್ಷನ್ ಬಳಿ ಎಡ ತಿರುವು ಪಡೆಯಬೇಕು. ನಂತರ ಅಶ್ವಥನಗರ ಸರ್ವಿಸ್ ರಸ್ತೆಯ ಮೂಲಕ ಹೊರ ವರ್ತುಲ ರಸ್ತೆ ತಲುಪಿ, ಕಾರ್ತಿಕ್‌ನಗರ ಜಂಕ್ಷನ್ ಬಳಿ ಯೂ-ಟರ್ನ್ ಪಡೆದು ಮುಂದೆ ಸಾಗಬೇಕು.

ವಾಹನ ಸವಾರರ ಸಹಕಾರಕ್ಕೆ ಮನವಿ

ವರ್ತೂರು ಮುಖ್ಯ ರಸ್ತೆಯ ಮುಖಾಂತರ ಸಂಚರಿಸಿ ಮಾರತ್ತಹಳ್ಳಿ ಬ್ರಿಡ್ಜ್ ಜಂಕ್ಷನ್ ಬಳಿ ಎಡ ತಿರುವು ಪಡೆದು ಹೊರ ವರ್ತುಲ ರಸ್ತೆಯ ಮೂಲಕ ಸಂಚರಿಸಬೇಕು. ಕಾಡುಬೀಸನಹಳ್ಳಿ ಜಂಕ್ಷನ್ ತಲುಪಿ ಅಲ್ಲಿ ಯೂ-ಟರ್ನ್ ಪಡೆದುಕೊಂಡು ಸರ್ವಿಸ್ ರಸ್ತೆಯ ಮುಖಾಂತರ ಸಾಗಬೇಕು. ಬಳಿಕ ಮಾರತ್ತಹಳ್ಳಿ ಬ್ರಿಡ್ಜ್ ಜಂಕ್ಷನ್ ಬಳಿ ಎಡ ತಿರುವು ಪಡೆದುಕೊಂಡು ವರ್ತೂರು ಮುಖ್ಯ ರಸ್ತೆಯ ಮೂಲಕ ಎಚ್‌ಎಎಲ್ ಕಡೆಗೆ ಸಂಚರಿಸಬಹುದಾಗಿದೆ. ಮೆಟ್ರೋ ಕಾಮಗಾರಿಯು ಸುಗಮವಾಗಿ ನಡೆಯಲು ಸಾರ್ವಜನಿಕರು ಹಾಗೂ ವಾಹನ ಸವಾರರು ಈ ಸಂಚಾರ ಮಾರ್ಪಾಡಿಗೆ ಸಹಕರಿಸಬೇಕಾಗಿ ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಅವರು ಮನವಿ ಮಾಡಿದ್ದಾರೆ.

ವಿದ್ಯಾರ್ಥಿಗೆ ಚಾಕು ಇರಿತ

ಬೆಂಗಳೂರು: ಬೈಕ್‌ನಲ್ಲಿ ಹೋಗುತ್ತಿದ್ದಾಗ ಸೈಡ್ ಬಿಡಲಿಲ್ಲ ಎಂಬ ಕಾರಣಕ್ಕೆ ಮತ್ತೊಂದು ಬೈಕ್ ಸವಾರನು ಪಿಯು ವಿದ್ಯಾರ್ಥಿಯೊಬ್ಬನಿಗೆ ಚಾಕುವಿನಿಂದ ಇರಿದಿರುವ ಘಟನೆ ಆರ್.ಆರ್.ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಸೈಡ್ ಬಿಡಲಿಲ್ಲವೆಂಬ ಕಾರಣಕ್ಕೆ ಬೈಕ್ ಸವಾರನಿಂದ ಕೃತ್ಯ

ಚಾಕು ಇರಿತದಿಂದ ತೀವ್ರವಾಗಿ ಗಾಯಗೊಂಡಿರುವ ಆದಿತ್ಯ ಎಂಬ ವಿದ್ಯಾರ್ಥಿ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಪ್ರಥಮ ಪಿಯುಸಿ ವ್ಯಾಸಂಗಮಾಡುವುದರಜತೆಗೆಪಾರ್ಟ್‌ಟೈಮ್‌ನಲ್ಲಿರ್‍ಯಾಪಿಡೋ ಬೈಕ್ ಟ್ಯಾಕ್ಸಿ ಕೆಲಸ ಮಾಡುತ್ತಿದ್ದನು. ಬುಧವಾರ ರಾತ್ರಿ ಆದಿತ್ಯ ತನ್ನ ಸ್ನೇಹಿತನನ್ನು ಬೈಕ್‌ನಲ್ಲಿ ಕರೆದುಕೊಂಡು ಗ್ಲೋಬಲ್ ವಿಲೇಜ್ ರಸ್ತೆಯ ಬಾರ್ ಒಂದರ ಬಳಿ ಹೋಗುತ್ತಿದ್ದನು. ಈ ವೇಳೆ ಹಿಂದಿನಿಂದ ಬೈಕ್‌ನಲ್ಲಿ ಬಂದ ಸಂತೋಷ್ ಹಾಗೂ ಆತನ ಸ್ನೇಹಿತ, ನಮಗೆ ಸೈಡ್ ಬಿಡಲಿಲ್ಲ ಎಂದು ಹೇಳಿ ಆದಿತ್ಯನ ಜತೆ ಕಿರಿಕ್ ತೆಗೆದು ಜಗಳವಾಡಿದ್ದಾರೆ. ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗಿದಾಗ, ಆರೋಪಿ ಸಂತೋಷ್ ಚಾಕುವಿನಿಂದ ಆದಿತ್ಯನಿಗೆ ಇರಿದು, ತನ್ನ ಸ್ನೇಹಿತನೊಂದಿಗೆ ಸ್ಥಳದಿಂದ ಪರಾರಿಯಾಗಿದ್ದಾನೆ. ಇರಿತದಿಂದ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆದಿತ್ಯನನ್ನು ಆತನ ಸ್ನೇಹಿತ ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದ್ದಾನೆ. ಪ್ರಾಣಾಪಾಯದಿಂದ ಪಾರಾಗಿರುವ ವಿದ್ಯಾರ್ಥಿ ಚಿಕಿತ್ಸೆ ಪಡೆದ ನಂತರ ಪೊಲೀಸರಿಗೆ ಅಧಿಕೃತ ದೂರು ನೀಡಿದ್ದಾನೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಆರ್.ಆರ್. ನಗರ ಪೊಲೀಸರು ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಶೇ.5 ರಿಯಾಯಿತಿ ಪಡೆಯಿರಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಮೇ 31ರೊಳಗೆ ಆಸ್ತಿ ತೆರಿಗೆ ಪಾವತಿಸಿ ಶೇ.5ರಷ್ಟು ರಿಯಾಯಿತಿ ಪಡೆಯುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

- ಮೇ 31ರೊಳಗೆ ಆಸ್ತಿ ತೆರಿಗೆ ಪಾವತಿಸಿ : ಮಹೇಶ್ವರ್ ರಾವ್
- ಮೇ 31 ರೊಳಗೆ ಆಸ್ತಿ ತೆರಿಗೆ ಪಾವತಿಸಿ ಶೇ.5ರಷ್ಟು ರಿಯಾಯಿತಿ ಪಡೆಯಿರಿ
- ಆಸ್ತಿ ತೆರಿಗೆ ಪಾವತಿಯಲ್ಲಿ ಶೇ. 5 ರಷ್ಟು ರಿಯಾಯಿತಿಗೆ ಇನ್ನೆರಡು ದಿನ ಮಾತ್ರ ಅವಕಾಶ

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 2026-27ನೇ ಸಾಲಿನ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತಿದೆ. 2026 ಜೂನ್ ತಿಂಗಳಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ. ಆದ್ದರಿಂದ ನಾಗರಿಕರು ಕೂಡಲೇ ಆಸ್ತಿ ತೆರಿಗೆ ಪಾವತಿಸಿ ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದ್ದಾರೆ. ಆಸ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಪಾವತಿಸಲು ಜಿಬಿಎ ಅಧಿಕೃತ ಜಾಲತಾಣ https://bbmptax.karnataka.gov.in ಗೆ ಭೇಟಿ ನೀಡಿ ತೆರಿಗೆ ಪಾವತಿಸಬಹುದಾಗಿದೆ. ನಾಗರಿಕರು ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಅಥವಾ ಸಮಸ್ಯೆಗಳಿದ್ದಲ್ಲಿ ಜಿಬಿಎ ಸಹಾಯವಾಣಿ ಸಂಖ್ಯೆ 1533 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

₹50 ಕೋಟಿ ಬೆಲೆಬಾಳುವ ಆಸ್ತಿಗೆ ಖದೀಮರ ಕಣ್ಣು

ಕಾರಾಗೃಹ ಇಲಾಖೆ ಭೂಮಿ ಕಬ್ಜ

ಬೆಂಗಳೂರು: ಕಾರಾಗೃಹ ಇಲಾಖೆಗೆ ಸೇರಿದ ಅಂದಾಜು 40 ರಿಂದ 50 ಕೋಟಿ ರೂ. ಮೌಲ್ಯದ ಬೆಲೆಬಾಳುವ ಆಸ್ತಿಯ ಮೇಲೆ ಕಣ್ಣು ಹಾಕಿರುವ ಖದೀಮರು, ಅದನ್ನು ಅಕ್ರಮವಾಗಿ ಕಬ್ಜ ಮಾಡಿಕೊಂಡಿರುವ ಗಂಭೀರ ಪ್ರಕರಣವೊಂದು ಬೆಳಕಿಗೆ ಬಂದಿದೆ.

ಗಾಂಧಿನಗರದ 2ನೇ ಅಡ್ಡರಸ್ತೆಯಲ್ಲಿರುವ, ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಅಧೀನಕ್ಕೆ ಒಳಪಡುವ ಮೈಸೂರು ಡಿಸ್ಚಾರ್ಜ್ ಪ್ರಿಸನರ್ಸ್ ಏಡ್ ಸೊಸೈಟಿಗೆ ಸೇರಿದ ಜಾಗವನ್ನು ಅತಿಕ್ರಮಣ ಮಾಡಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಹಿಂದೆ ಮೈಸೂರು ಮಹಾರಾಜರು ಕಾರಾಗೃಹ ಇಲಾಖೆಗೆ ಸುಮಾರು ಹತ್ತು ಸಾವಿರ ಚದರ ಅಡಿ ಜಾಗವನ್ನು ದಾನವಾಗಿ ನೀಡಿದ್ದರು. ಇಂದಿನ ಮಾರುಕಟ್ಟೆ ದರದ ಪ್ರಕಾರ ಇದರ ಮೌಲ್ಯ ಬರೋಬ್ಬರಿ 40 ರಿಂದ 50 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಸರ್ಕಾರಿ ಸ್ವತ್ತನ್ನು ಖಾಸಗಿ ವ್ಯಕ್ತಿಗಳಾದ ಖಲಿಂ ಹಾಗೂ ಅನಿಲ್ ಎಂಬವರು ಕಳೆದ ಒಂದು ವರ್ಷದಿಂದ ಕಾನೂನುಬಾಹಿರವಾಗಿ ತಮ್ಮ ಸುಪರ್ದಿಗೆ ಪಡೆದು ಬಳಕೆ ಮಾಡುತ್ತಿದ್ದರು ಎನ್ನಲಾಗಿದೆ.

ಅತಿಕ್ರಮಣ ಬೆಳಕಿಗೆ ಬಂದಿದ್ದು ಹೇಗೆ?: ಕಾರಾಗೃಹದ ಕೈದಿಗಳು ಜೈಲಿನಲ್ಲಿ ತಯಾರಿಸುವ ಬೇಕರಿ ತಿನಿಸುಗಳು ಹಾಗೂ ಬಟ್ಟೆಗಳ ವ್ಯಾಪಾರಕ್ಕಾಗಿ ಹೊಸ ಮಾರಾಟ ಮಳಿಗೆಯನ್ನು ತೆರೆಯಲು ಇಲಾಖೆ ಸಜ್ಜಾಗಿತ್ತು. ಗಾಂಧಿನಗರದಲ್ಲಿದ್ದ ಹಳೆಯ ಕಟ್ಟಡವನ್ನು ತೆರವುಗೊಳಿಸಿ, ಹೊಸದಾಗಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲು ಇಲಾಖೆಯ ಅಧಿಕಾರಿಗಳು ಮುಂದಾದಾಗ ಈ ಆಸ್ತಿ ಅತಿಕ್ರಮಣವಾಗಿರುವ ವಿಷಯ ಇಲಾಖೆಯ ಗಮನಕ್ಕೆ ಬಂದಿದೆ.

ಕಟ್ಟಡದ ಮೊದಲ ಮಹಡಿಯನ್ನು ಯಾವುದೇ ಪೂರ್ವಾನುಮತಿ ಇಲ್ಲದೆ ಅನಿಲ್ ಎಂಬಾತ ಅತಿಕ್ರಮಣ ಮಾಡಿಕೊಂಡಿದ್ದರೆ, ಖಲಿಂ ಎಂಬಾತ ಕಾರಾಗೃಹ ಇಲಾಖೆಗೆ ಸೇರಿದ ಖಾಲಿ ಜಾಗದಲ್ಲಿ ಹಳೆಯ ಸಾಮಗ್ರಿಗಳನ್ನು ತಂದು ಹಾಕಿ ಅಕ್ರಮವಾಗಿ ಜಾಗವನ್ನು ಆಕ್ರಮಿಸಿಕೊಂಡಿದ್ದಾನೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಈ ಅಕ್ರಮ ಭೂ ಕಬಳಿಕೆ ಕುರಿತು ಇಲಾಖೆಯ ಪರವಾಗಿ ಶ್ರೀಶೈಲ್ ಎಸ್.ಮೇಟಿ ಎಂಬವರು ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಅಧಿಕೃತ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದು, ಆರೋಪಿಗಳಾದ ಖಲಿಂ ಮತ್ತು ಅನಿಲ್‌ಗೆ ಈಗಾಗಲೇ ನೋಟಿಸ್ ಜಾರಿ ಮಾಡಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಹೇಳಿಕೆ

ಎಂಎಸ್‌ಎಂಇಗಳಿಂದ ಉದ್ಯೋಗ ಸೃಷ್ಟಿ

ಬೆಂಗಳೂರು: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ(ಎಂಎಸ್‌ಎಂಇ)ಗಳು ಕೇವಲ ಆರ್ಥಿಕ ಉತ್ಪಾದನೆ ಮತ್ತು ರಫ್ತುಗಳಿಗೆ ಮಾತ್ರ ಕೊಡುಗೆ ನೀಡುವುದಿಲ್ಲ, ಅದಕ್ಕಿಂತ ಮುಖ್ಯವಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ, ನವೀನತೆಯನ್ನು ಉತ್ತೇಜಿಸುತ್ತವೆ, ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸುತ್ತವೆ ಮತ್ತು ಜನರಿಗೆ ಅವಕಾಶಗಳನ್ನು ಇನ್ನಷ್ಟು ಹತ್ತಿರ ತರುತ್ತವೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಯೋಜಿಸಿದ್ದ ಗ್ಲೋಬಲ್ ಎಂಎಸ್‌ಎಂಇ ಕಾನ್‌ಕ್ಲೇವ್‌ನಲ್ಲಿ ಮಾತನಾಡಿದ ಅವರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸಮಗ್ರ ಮತ್ತು ಒಳಗೊಂಡ ಅಭಿವೃದ್ಧಿಯ ನಿಜವಾದ ಚಾಲಕಶಕ್ತಿಗಳಾಗಿವೆ. ಅವುಗಳು ಸ್ಥೈರ್ಯ, ಆಶಯ ಮತ್ತು ಉದ್ಯಮಶೀಲತೆಯ ಅತ್ಯಂತ ಚುರುಕಾದ ರೂಪವನ್ನು ಪ್ರತಿನಿಧಿಸುತ್ತವೆ ಎಂದು ಹೇಳಿದರು.



ಜಾಗತಿಕ ಆರ್ಥಿಕತೆ ತಂತ್ರಜ್ಞಾನ, ಸ್ಥಿರತೆಯ ಹಾಗೂ ಬದಲಾಗುತ್ತಿರುವ ಸರಬರಾಜು ಸರಪಳಿಗಳ ಪ್ರಭಾವದಿಂದ ವೇಗವಾಗಿ ರೂಪಾಂತರಗೊಳ್ಳುತ್ತಿರುವ ಸಂದರ್ಭದಲ್ಲಿ, ಎಂಎಸ್‌ಎಂಇಗಳು ಚುರುಕಾದ, ಸ್ಪರ್ಧಾತ್ಮಕ ಮತ್ತು ಸ್ಥೈರ್ಯಯುತ ಆರ್ಥಿಕ ವ್ಯವಸ್ಥೆಗಳನ್ನು ನಿರ್ಮಿಸುವಲ್ಲಿ ದಿನೇದಿನೇ ಹೆಚ್ಚು ಮಹತ್ವದ ಪಾತ್ರ ವಹಿಸುತ್ತಿವೆ. ತಂತ್ರಜ್ಞಾನ, ಸ್ಥಿರತೆ ಮತ್ತು ಬದಲಾಗುತ್ತಿರುವ ಜಾಗತಿಕ ಸರಬರಾಜು ಸರಪಳಿಗಳಿಂದ ಆರ್ಥಿಕ ವ್ಯವಸ್ಥೆ ರೂಪಾಂತರಗೊಳ್ಳುತ್ತಿರುವ ಈ ಸಂದರ್ಭದಲ್ಲಿ, ಈ ಸಮಾವೇಶವು ಅತ್ಯಂತ ಮಹತ್ವಪೂರ್ಣ ಹಾಗೂ ಸಮಯೋಚಿತ ವೇದಿಕೆಯಾಗಿದೆ ಎಂದು ತಿಳಿಸಿದರು.

ಎಂಎಸ್‌ಎಂಇಗಳ ಭವಿಷ್ಯದ ಸ್ಪರ್ಧಾತ್ಮಕತೆ ಅವರು ತಂತ್ರಜ್ಞಾನ ಮತ್ತು ನವೀನತೆಯನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಡಿಜಿಟಲ್ ವೇದಿಕೆಗಳು, ಸ್ವಯಂಚಾಲಿತ ವ್ಯವಸ್ಥೆಗಳ, ಕೃತಕ ಬುದ್ಧಿಮತ್ತೆ, ಇಂಡಸ್ಟ್ರಿ 4.0 ಪರಿಹಾರಗಳು ಹಾಗೂ ಇ-ಕಾಮರ್ಸ್ ಪರಿಸರ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಉದ್ಯಮಗಳನ್ನು ಸರ್ಕಾರದಿಂದ ಉತ್ತೇಜಿಸಲಾಗುತ್ತಿದೆ. ಕೃತಕ ಬುದ್ಧಿಮತ್ತೆ ಕೇಂದ್ರಗಳ ಅತ್ಯುನ್ನತೆ ಉದ್ಯಮಿಗಳಿಗೆ ಬಹಳ ಉಪಯುಕ್ತವಾಗಲಿದೆ. ಜೊತೆಗೆ, ಬ್ಯಾಂಕುಗಳೊಂದಿಗೆ ಸಹಯೋಗದ ಮೂಲಕ ಡಿಜಿಟಲ್ ಆಡಳಿತ ಹಾಗೂ ಡಿಜಿಟಲ್ ಸಾಮರ್ಥ್ಯ ನಿರ್ಮಾಣಕ್ಕೆ ಉತ್ತೇಜನಕ್ಕೆ ಒತ್ತು ಕೊಡಲಾಗುತ್ತಿದೆ ಎಂದು ಹೇಳಿದರು.


ಇಂದು ನಗರದಲ್ಲಿ...

- ರಾಷ್ಟ್ರೀಯ ಚಿತ್ರಕಲಾ ಸಮ್ಮೇಳನ ಹಾಗೂ ಪ್ರತಿಭಾ ಪುರಸ್ಕಾರ.
- ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕಸಾಪ
- ಬೆಳಗ್ಗೆ 9.30

- ಎಫ್‌ಕೆಸಿಸಿಐ ಗ್ಲೋಬಲ್ ಸಮಾವೇಶ-2026
- ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ
- ಬೆಳಗ್ಗೆ 10.30

- ಎದೆಯ ಹಾಡು ಕನ್ನಡ ಭಾವಗುಚ್ಛ ಲೋಕಾರ್ಪಣೆ, ಗೀತಗಾಯನ
- ಸ್ಥಳ: ಶಂಕರಕೃಪ ಸಭಾಂಗಣ, ಗಿರಿನಗರ
- ಸಂಜೆ 6

- ನಾಟಕಗಳ ಉತ್ಸವ
- ಸ್ಥಳ: ಚೌಡಯ್ಯ ಸ್ಮಾರಕ ಭವನ
- ಸಂಜೆ 6.30



ಸಾಯಿ ಸುದರ್ಶನ್ 58 ರನ್, ನಾಯಕ ಶುಬ್ಮನ್ 104 ರನ್ | ವೈಭವ್ ಹೋರಾಟ ವ್ಯರ್ಥ

ನಾಳೆ ಆರ್‌ಸಿಬಿ-ಗುಜರಾತ್ ಫೈನಲ್!



ಮತ್ತೊಮ್ಮೆ ವೈಭವ್ ಶತಕವಂಚಿತ

ಶುಬ್ಮನ್ ಗಿಲ್ ಸ್ಫೋಟಕ ಶತಕ!



ದುಬಾರಿ ಕೊನೆಯ ಓವರ್: 4 ಸಿಕ್ಸರ್!

ಕಿರುಸುದ್ದಿ

ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್: ವಿನೇಶ್‌ಗೆ ಸ್ಪರ್ಧಿಸಲು ಅನುಮತಿ

100 ಮೀ. ಓಟ: ಭಾರತಕ್ಕೆ ಕಂಚು



ಫೀಫಾ ವಿಶ್ವಕಪ್: ಅರ್ಜೆಂಟೀನಾ ತಂಡ ಪ್ರಕಟ, ಮೆಸ್ಸಿ ನಾಯಕ

ಐಪಿಎಲ್‌ನಲ್ಲಿ ಸ್ಮಾರ್ಟ್‌ಗ್ಲಾಸ್ ಬಳಕೆ ನಿಷೇಧಿಸಿದ ಬಿಸಿಸಿಐ


ಮಹಿಳಾ ಹಾಕಿ: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ 2-0 ಜಯ

ಮೊದಲ ಟಿ20: ಮಂದನಾ ಪಡೆಗೆ 38 ರನ್ ಗೆಲುವು




ಸಂಕ್ಷಿಪ್ತ ಸ್ಕೋರ್

ಮುಂಬೈ ಇಂಡಿಯನ್ಸ್ ತೊರೆಯಲಿರುವ ಪಾಂಡ್ಯ
ಚೆನ್ನೈಗೆ ಹಾರ್ದಿಕ್ ಸ್ವಾಗತ?




ಸುಳಿವು ನೀಡಿದ ಹಾರ್ದಿಕ್

ಕಳಪೆ ಪ್ರದರ್ಶನ, ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ
ನಾಯಕತ್ವಕ್ಕೆ ರಿಷಬ್ ರಾಜೀನಾಮೆ




ಚಿರಾಗ್-ರಾಂಕಿರೆಡ್ಡಿ ಸೆಮಿಫೈನಲ್ ಎಂಟ್ರಿ


ಏಷ್ಯನ್ ಅಥ್ಲೆಟಿಕ್ಸ್: ಹಲವು ಪದಕಗಳನ್ನು ಗೆದ್ದ ಭಾರತ



ಸಮುದ್ರದ ಅಲೆಯ ನಡುವೆ ರೋಮಾಂಚಕ ಪ್ರದರ್ಶನ



ಪದಬಂಧ 5999



5998 ಉತ್ತರ

ಕಿರುಸುದ್ದಿ

ಇಂದು ಭಾವ ಶಿಕ್ಷಣ ಆಗತ್ಯ : ಜಗದೀಶ ಶರ್ಮ

[illegible]

ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ ಇಂದು

[illegible]

ಹಿರಿಯ ಸಾಹಿತಿ ಡಾ. ಬೈರಮಂಗಲ ರಾಮೇಗೌಡ ಅಭಿಮತ

ಚಳವಳಿ ಹುಟ್ಟುಹಾಕಿದ ಅನಕೃ

[illegible]



ಸಾರ್ವಕಾಲಿಕ ಶ್ರೇಷ್ಠ ಕೃತಿ

[illegible]

ಎಆರ್‌ಒ ಮಂಜುಳಾ ಅಮಾನತಿಗೆ ದೂರು

[illegible]

ಕ್ಷೇತ್ರಾಭಿವೃದ್ಧಿಗೆ ಹೊಸ ಸಿಎಂ ಸಹಕಾರ

[illegible]



[illegible]




[illegible]

ಮಾರ್ನಿಂಗ್ ಶೋ

ಹೊಂಬಾಳೆ ಫಿಲಂಸ್‌ನಿಂದ ಹಿಪ್‌ಹಾಪ್ ಮ್ಯೂಸಿಕಲ್ ಚಿತ್ರ!

[illegible]





[illegible]


ಶತದಿನಗಳ ಸಂಭ್ರಮದಲ್ಲಿ ದೊಡ್ಡಣ್ಣ ಪುಟ್ಟಣ್ಣ

[illegible]



[illegible]

ಅಂಬಿ ನೆನೆದು ಸುಮಲತಾ ಭಾವುಕ ಪೋಸ್ಟ್



[illegible]

Hosadigantha Kannada Daily Printed & Published by P.S.Prakash on behalf of Janaabhasthi Prakashana Limited. Printed at M N S Printers No.345/4, Bhartanahalli, Virgo Nagar Post Old Madras Road, K.R. Puram, Bengaluru 560 049 and Published at No. 1/1, I Floor, 6th cross, 8th Main, Malleshwara, Bengaluru 03 Ph: (080) 23460302, 340, Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಗರಿಷ್ಠ 34° ಕನಿಷ್ಠ 23°

ಹೊಸ ದಿಗಂತ

ಮೈಸೂರು

ಶನಿವಾರ
30 ಮೇ 2026

ತೆಪ್ಪೋತ್ಸವ



ದತ್ತ ವೆಂಕಟೇಶ್ವರ ಕ್ಷೇತ್ರದ 27ನೇ ಬ್ರಹ್ಮೋತ್ಸವ ಅಂಗವಾಗಿ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ಸಪ್ತರ್ಷಿ ಸರೋವರದಲ್ಲಿ ವೆಂಕಟೇಶ್ವರ ಸ್ವಾಮಿಗೆ ತೆಪ್ಪೋತ್ಸವ ನಡೆಯಿತು. ಶ್ರೀಗಣಪತಿ ಸಚ್ಚಿದಾನಂದಸ್ವಾಮಿಯವರು ಭಕ್ತರಿಗೆ ಆಶೀರ್ವಚನ ನೀಡಿದರು.

ಡಿಕೆಶಿ ಹೆಸರಲ್ಲಿ ವಿಶೇಷ ಪೂಜೆ | ೨
ಅಭಿವೃದ್ಧಿಯ ಚರ್ಚೆಗೆ ಸಿದ್ಧ: ಗಂಗಾಧರ | ೩
ಅಭಿವೃದ್ಧಿ ಜನರ ನಿರೀಕ್ಷೆಗೆ ಹುಸಿ: ಶಾಸಕ | ೪

ಕಿರುಸುದ್ದಿ

ಕರ್ತವ್ಯ ಲೋಪ: ಇಬ್ಬರು ಪೊಲೀಸರ ಅಮಾನತು


ಮೈಸೂರು: ಕರ್ತವ್ಯಲೋಪ ಎಸುಗಿದ ಆರೋಪದ ಮೇಲೆ ನಗರದ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಗೊಳಿಸಲಾಗಿದೆ. ಮೈಸೂರಿನ ವಿಜಯನಗರದ ಪೊಲೀಸ್ ಠಾಣೆಯ ಮುಖ್ಯಪೇದೆ ಎಚ್.ಎಸ್.ಲೋಕೇಶ್ ಮತ್ತು ಪೇದೆ ಚಂದ್ರ ಎಂಬವರೇ ಸಸ್ಪೆಂಡ್ ಆದವರು. ರಾತ್ರಿ ಗಸ್ತಿನಲ್ಲಿದ್ದ ಈ ಇಬ್ಬರು ವಿಜಯನಗರದಲ್ಲಿನ ಹೋಟೆಲ್ ಒಂದನ್ನು ಅವಧಿಯೊಳಗೆ ಮುಚ್ಚಿಸದೇ ನಿರ್ಲಕ್ಷ್ಯವಹಿಸಿದ್ದರು. ಅಲ್ಲದೆ ಕರ್ತವ್ಯ ಲೋಪ ಎಸಗಿದ್ದರು. ಈ ಹಿನ್ನಲೆಯಲ್ಲಿ ಈ ಇಬ್ಬರನ್ನು ಅಮಾನತ್ತು ಗೊಳಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಲಾಭದ ಆಸೆಗೆ 14.39 ಲಕ್ಷ ರೂ. ಕಳೆದುಕೊಂಡ ಅಧಿಕಾರಿ

ಮೈಸೂರು: ವಾಟ್ಸಾಪ್ ಮೂಲಕ ಸ್ನೇಹಿತ ಕಳುಹಿಸಿದ್ದ ಹೂಡಿಕೆ ಜಾಹೀರಾತನ್ನು ನಂಬಿದ ನಿವೃತ್ತ ಬ್ಯಾಂಕ್ ಅಧಿಕಾರಿಯೊಬ್ಬರು ಹೆಚ್ಚಿನ ಲಾಭಗಳಿಸುವ ಆಸೆಗೆ ಬಿದ್ದು ನಕಲಿ ಹಣ ಹೂಡಿಕೆ ಮಾಡುವ ಮೂಲಕ 14.39 ಲಕ್ಷ ರೂ. ಕಳೆದುಕೊಂಡಿರುವ ಘಟನೆ ಮೈಸೂರು ನಗರದಲ್ಲಿ ನಡೆದಿದೆ. ಮೈಸೂರಿನ ವಿಜಯನಗರದ ನಿವಾಸಿಯಾದ ನಿವೃತ್ತ ಬ್ಯಾಂಕ್ ಅಧಿಕಾರಿಯೊಬ್ಬರು ಹಣ ವಾಟ್ಸಾ ಪ್ ನಲ್ಲಿ ಹೂಡಿಕೆ ಜಾಹೀರಾತು ನೋಡಿದ್ದಾರೆ. ಬಳಿಕ ಅವರು ಅಲ್ಲಿನ ವ್ಯಕ್ತಿಯ ಸಂಪರ್ಕ ಸಾಧಿಸಿ, ಹಣ ಹೂಡಿಕೆ ಮಾಡಿದ್ದಾರೆ. ನಂತರ ಅವರ ಮಾತುಗಳನ್ನು ನಂಬಿದ ಹಂತ ಹಂತವಾಗಿ 14.39 ಲಕ್ಷ ರೂ. ಹಣವನ್ನು ಹೂಡಿಕೆ ಮಾಡಿದ್ದಾರೆ. ಬಳಿಕ ಇವರ ಖಾತೆಗೆ ಅನಾಮಧೇಯ ವ್ಯಕ್ತಿಯಿಂದ ಹಣ ಬಂದಿದೆ. ಅದನ್ನು ಸೂಕ್ಷ್ಮವಾಗಿ ಗಮನಿಸಿದ ವೇಳೆ ಅದು ಸೈಬರ್ ಅಪರಾಧದ ಮೂಲಕ ಸಂಪಾದಿಸಿದ ಹಣ ಎಂದು ಗೊತ್ತಾಗಿದೆ. ನನ್ನ ಬಳಿ ಹಣ ಹೂಡಿಕೆ ಮಾಡಿಸಿ ವಂಚಿಸಿದ್ದಲ್ಲದೆ, ನನ್ನ ಖಾತೆಗೆ ಸೈಬರ್ ಅಪರಾಧದ ಹಣ ಹಾಕಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಸೈಬರ್ ಠಾಣೆಯ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು

ಮೈಸೂರು: ಮನೆಯೊಂದರ ಬಾಗಿಲು ಮೀಟಿ ಒಳ ನುಗ್ಗಿರುವ ಕಳ್ಳರು, ಅಲ್ಲಿದ್ದ 140 ಗ್ರಾಂ ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಶ್ರೀರಾಂಪುರ ಬಳಿಯ ಮಧುವನ ಬಡಾವಣೆಯ ನಿವಾಸಿ ವಿಷ್ಣುಮೂರ್ತಿ ಎಂಬವರ ಮನೆಯಲ್ಲಿ ನಡೆದಿದೆ. ವಿಷ್ಣುಮೂರ್ತಿ ಅವರು ಕಳೆದ ತಿಂಗಳು ಕುಟುಂಬ ಸಮೇತ ಚೆನ್ನೈನಲ್ಲಿರುವ ಮಗಳ ಮನೆಗೆ ತೆರಳಿದ್ದರು. ವಾಪಸ್ ಬಂದು ನೋಡಿದಾಗ ಮನೆಯಲ್ಲಿ ಕಳ್ಳತನ ನಡೆದಿರುವುದು ಗೊತ್ತಾಗಿದೆ. ಈ ಸಂಬಂಧ ಅವರು ನೀಡಿದ ದೂರಿನ ಮೇಲೆ ಕುವೆಂಪುನಗರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಸಾಲಬಾಧೆಗೆ ರೈತ ಆತ್ಮಹತ್ಯೆ

ಕೆ.ಆರ್.ನಗರ: ರೈತನೋರ್ವ ಸಾಲಭಾದೆ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮಳಲಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಲೇ.ಜವರೇಗೌಡ ಮಗ ವಿರೂಪಾಕ್ಷ(65), ಕಾಳು ಮಾತ್ರೆ ಸೇವಿಸಿ ಸಾವಿಗೀಡಾದ ದುರ್ದೈವಿ. ಮರಣೋತ್ತರ ಪರೀಕ್ಷೆಯ ನಂತರ ಶುಕ್ರವಾರ ಮಧ್ಯಾಹ್ನ ಮಳಲಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಇವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. 2 ಎಕರೆ ಜಮೀನು ಇದ್ದು, ತಾಲೂಕಿನ ಸಿದ್ದಾಪುರ ಸಹಕಾರ ಸಂಘದಲ್ಲಿ ವಿರೂಪಾಕ್ಷ ಪತ್ನಿ ಹೆಸರಿನಲ್ಲಿ ಸಾಲ ಪಡೆದಿರುವುದರ ಜತೆಗೆ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನಲ್ಲಿ ಸಾಲ ಮತ್ತು ಚಿನ್ನ ಅಡ್ಡವಿಟ್ಟು ಸಾಲ ಪಡೆಯಲಾಗಿತ್ತು. ಹಾಗೂ ಕೈಸಾಲ ಸೇರಿದಂತೆ ಒಟ್ಟು 8 ಲಕ್ಷ ರೂ.ಗಳ ಸಾಲ ಇದೆ ಎಂದು ಪುತ್ರ ಕರುಣಾಕುಮಾರ್ ಪಟ್ಟಣ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸಂಸದ ಯದುವೀರ್ ಒಡೆಯರ್ ಅಭಿಪ್ರಾಯ

ವಾಸುದೇವಾಚಾರ್ಯ ಕೊಡುಗೆ ಅಪಾರವಾಗಿದೆ



> ಮೈಸೂರು ವಾಸುದೇವಾರ್ಯರು ಕರ್ನಾಟಕ ಸಂಗೀತ ಕ್ಷೇತ್ರದ ಶ್ರೇಷ್ಠ ವಾಗ್ಗೇಯಕಾರರಲ್ಲಿ ಒಬ್ಬರು. ಅವರ ಕೃತಿಗಳು ಇಂದಿಗೂ ದೇಶ-ವಿದೇಶಗಳ ಸಂಗೀತ ವೇದಿಕೆಗಳಲ್ಲಿ ಗಾಯನಗೊಳ್ಳುತ್ತಿವೆ. ತ್ಯಾಗರಾಜರ ಶಿಷ್ಯ ಪರಂಪರೆಗೆ ಸೇರಿದ ಅವರು, ಭಕ್ತಿ, ಸಾಹಿತ್ಯ ಮತ್ತು ಸಂಗೀತವನ್ನು ಸಮನ್ವಯ ಗೊಳಿಸಿ ಅಮೂಲ್ಯ ಕೃತಿಗಳನ್ನು ರಚಿಸಿದ್ದಾರೆ.
>
> ■ ಯದುವೀರ್ ಕೃಷ್ಣದತ್ತ ಒಡೆಯರ್, ಸಂಸದ

ಮೈಸೂರು: ಮೈಸೂರು ಸಂಸ್ಥಾನದ ಸಂಗೀತ ಪರಂಪರೆಯನ್ನು ಶ್ರೀಮಂತಗೊಳಿಸುವಲ್ಲಿ ವಾಸುದೇವಾ ಚಾರ್ಯರ ಕೊಡುಗೆ ಅಪಾರವಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ನಗರದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಅರಮನೆ ನಗರಿ ಮೈಸೂರಿನ ಸಂಗೀತ ಪರಂಪರೆಯನ್ನು ವಿಶ್ವಕ್ಕೆ ಪರಿಚಯಿಸಿದ ಮಹಾನ್ ವಾಗ್ಗೇಯಕಾರ, ಸಂಗೀತ ಕಲಾನಿಧಿ ಮೈಸೂರು ಕೆ.ವಾಸುದೇವಾಚಾರ್ಯ, ಅವರ 192ನೇ ಜನ್ಮ ದಿನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಅರಮನೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ವಾಸುದೇವಾಚಾರ್ಯರು, ಸಂಸ್ಥಾನದ ಸಂಗೀತ ಪರಂಪರೆಯನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದರು.

ಮೈಸೂರಿನ ಅನೇಕ ಸಂಗೀತ ವಿದ್ವಾಂಸರು ಅವರ ಮಾರ್ಗದರ್ಶನ ಮತ್ತು ಕೃತಿಗಳಿಂದ ಪ್ರೇರಣೆ ಪಡೆದಿದ್ದಾರೆ. ಅವರ ಸಂಗೀತ ಪರಂಪರೆ ಇಂದಿಗೂ ಮುಂದುವರಿಯುತ್ತಿರುವುದು ಹೆಮ್ಮೆಯ ವಿಷಯ ಎಂದರು.

» ಪ್ರಸನ್ನ ಸೀತಾರಾಮ ಮಂದಿರವು ಕೇವಲ ಧಾರ್ಮಿಕ ಕೇಂದ್ರವಲ್ಲ, ಸಾಂಸ್ಕೃತಿಕ ಚಟುವಟಿಕೆಗಳ ಜೀವಂತ ತಾಣ

ಶ್ರೀ ಪ್ರಸನ್ನ ಸೀತಾರಾಮ ಮಂದಿರವು ಕೇವಲ ಧಾರ್ಮಿಕ ಕೇಂದ್ರವಲ್ಲ, ಅದು ಪಾರಂಪರಿಕ ಸಂಗೀತ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಜೀವಂತ ತಾಣವಾಗಿದೆ. ದಸರಾ ಮಹೋತ್ಸವದ ವೇಳೆ ಮಾತ್ರವಲ್ಲದೆ, ವರ್ಷ ಪೂರ್ತಿ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಈ ಮಂದಿರವು ಮೈಸೂರು ಸಂಗೀತ ಪರಂ ಪರೆಯನ್ನು ಉಳಿಸಿ ಬೆಳೆಸುವ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಕರ್ನಾಟಕ ಶಾಸ್ತ್ರೀಯ ಸಂಗೀತದ ಹಿರಿಯ ಕಲಾ ವಿದೆ ಟಿ.ಎಸ್.ಸತ್ಯವತಿ, ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದ ಕಾರ್ಯದರ್ಶಿ ಲಕ್ಷ್ಮೀ ನಾರಾಯಣ ಬಾಬು ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಗೀತಾಸಕ್ತರು, ಕಲಾವಿದರು ಭಾಗವಹಿಸಿ ವಾಸುದೇವಾಚಾರ್ಯರ ಸಾಧನೆಯನ್ನು ಸ್ಮರಿಸಿದರು.

ಪಿಎಂ ಸೂರ್ಯ ಘರ್ ಪ್ರಚಾರ ವಾಹನಕ್ಕೆ ಚಾಲನೆ



ಮೈಸೂರು: ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಗೃಹಬಳಕೆದಾರರ ಮನೆಯ ಛಾವಣಿಯಲ್ಲಿ ಸೌರಫಲಕಗಳನ್ನು ಸ್ಥಾಪಿಸುವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಪ್ರಚಾರ ವಾಹನಕ್ಕೆ ಶುಕ್ರವಾರ ನಗರದಲ್ಲಿ ಚಾಲನೆ ನೀಡಲಾಯಿತು.

ಇಲ್ಲಿನ ವಿಜಯನಗರ 2ನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಚಾವಿಸನಿನಿ) ಪ್ರದಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಲ್‌ಇಡಿ ಪರದೆ ಅಳವಡಿಸಿರುವ ವಾಹನದ ಮೂಲಕ ಪ್ರಚಾರ ಕಾರ್ಯಕ್ಕೆ ಚಾವಿಸನಿನಿ ತಾಂತ್ರಿಕ ನಿರ್ದೇಶಕರಾದ ಶರಣಮ್ಮ ಎಸ್. ಜಂಗಿನ ಹಾಗೂ ಚಾವಿಸನಿನಿ ಮೈಸೂರು ವೃತ್ತದ ಮುಖ್ಯ ಇಂಜಿನಿಯರ್ ಎಲ್. ಲೋಕೇಶ್ ಹಸಿರು ನಿಶಾನೆ ತೋರಿಸಿದರು.

ನಗರದ ಹಲವೆಡೆಗಳಲ್ಲಿ ಸಂಚಾರ: ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಚಾಲನೆ ನೀಡಲಾಗಿರುವ ಈ ಪ್ರಚಾರ ವಾಹನ ಮೂರು ದಿನಗಳು ಬೆಳಗ್ಗಿನಿಂದ ರಾತ್ರಿಯವರೆಗೂ ನಗರದೆಲ್ಲೆಡೆ ಸಂಚರಿಸಲಿದೆ. ಮೇ 30ರಂದು ಕುವೆಂಪುನಗರ, ವಿವೇಕಾನಂದನಗರ, ಆಂದೋಲನ ವೃತ್ತ, ದಟ್ಟಗಳ್ಳಿ ವೃತ್ತ, ಆರ್ .ಆರ್ ನಗರ, ಶಾರದಾದೇವಿನಗರ, ಬೋಗಾದಿ, ವಿಜಯನಗರ, ಅರಮನೆ ಸುತ್ತಮುತ್ತ, ಅಗ್ರಹಾರ ವೃತ್ತ, ಪಾಠಶಾಲಾ ವೃತ್ತ, ಕೆ.ಆರ್ ವೃತ್ತ, ಆಯುರ್ವೇದ ಆಸ್ಪತ್ರೆ ವೃತ್ತ, ಮಂಡಿ ಮೊಹಲ್ಲಾ, ಬನ್ನಿಮಂಟಪ, ಎಲ್.ಐ.ಸಿ ವೃತ್ತ, ಫೌಂಟೆನ್ ವೃತ್ತ, ಸೆಂಟ್ ಫಿಲೋಮಿನಾ ಚರ್ಚ್ ಸುತ್ತಲಿನ ಪ್ರದೇಶಗಳಲ್ಲಿ ಸಂಚರಿಸಲಿದೆ.

> **ಯೋಜನೆಯು ಆದಾಯ, ಉಳಿತಾಯದ ಮೂಲ**
>
> ಪಿಎಂ ಸೂರ್ಯ ಘರ್ ಯೋಜನೆಯು ಆದಾಯ ಮತ್ತು ಉಳಿತಾಯದ ಮೂಲವಾಗಿದೆ. ಗ್ರಾಹಕರು ತಮ್ಮ ಮನೆಯ ಮೇಲೆ ಸೌರಘಟಕ ಸ್ಥಾಪಿಸಲು, ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಮೂಲಕ ಆಕರ್ಷಕ ಸಬ್ಸಿಡಿ ಸೌಲಭ್ಯ ಪಡೆಯಬಹುದಾಗಿದೆ. ಇದರಿಂದ ವಿದ್ಯುತ್ ಬಿಲ್ ಉಳಿತಾಯವಾಗಲಿದ್ದು, ಇದು ಪರಿಸರ ಸ್ನೇಹಿ ಯೋಜನೆಯು ಆಗಿದೆ. ಸೌರಶಕ್ತಿಯಿಂದ ಉತ್ಪಾದನೆಯಾಗುವ ಹೆಚ್ಚುವರಿ ವಿದ್ಯುತ್ ಅನ್ನು ಸೆಸ್ಕ್ ಗೆ ಮಾರಾಟ ಮಾಡುವ ಮೂಲಕ ಆದಾಯವನ್ನೂ ಪಡೆಯಬಹುದು.

ಮೇ 31ರಂದು ನಗರ ಬಸ್ ನಿಲ್ದಾಣ, ಮೆಟ್ರೋಪೋಲ್ ವೃತ್ತ, ಕಲಾಮಂದಿರ, ಮಹಾರಾಣಿ ಕಾಲೇಜ್ ಜಂಕ್ಷನ್, ಪಡುವರಳ್ಳಿ ವೃತ್ತ, ಐಶ್ವರ್ಯ ಪೆಟ್ರೋಲ್ ಬಂಕ್ ಜಂಕ್ಷನ್, ಹಿನಕಲ್ ವೃತ್ತ, ಹೂಟಗಳ್ಳಿ, ಬೆಳವಾಡಿ, ಇಲವಾಲ, ಮೈಸೂರು ಅರಮನೆ ಸುತ್ತಮುತ್ತ, ಗ್ರಾಮಾಂತರ ಬಸ್ ನಿಲ್ದಾಣ, ಹಾರ್ಡಿಂಗ್ ವೃತ್ತ, ಗೋಪಾಲಗೌಡ ಆಸ್ಪತ್ರೆ ವೃತ್ತ, ಮಿಲ್ಕ್ ಡೈರಿ ವೃತ್ತ, ಸಿದ್ದಾರ್ಥ ಬಡಾವಣೆ, ಟೆರಿಷಿಯನ್ ಕಾಲೇಜ್ ವೃತ್ತ, ದೇವೇಗೌಡ ವೃತ್ತ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಸಂಚರಿಸಲಿದೆ.

ಹೊಸಬರಿಗೆ ಸಚಿವ ಸ್ಥಾನ ಸಿಗಲಿ

ಮೈಸೂರು: ರಾಜ್ಯ ಸರ್ಕಾರದಲ್ಲಿ ಅನುಭವ ಇರುವವರು ಹಾಗೂ ಹೊಸತನದಲ್ಲಿ ಆಡಳಿತ ನಡೆಸುವವರಿಗೆ ಸಚಿವರಾಗುವ ಅವಕಾಶ ಸಿಗಬೇಕು ಎಂದು ಮೈಸೂರಿನ ಎನ್.ಆರ್. ಕ್ಷೇತ್ರದ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಹೇಳಿದರು.

ಶುಕ್ರವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರಿಷ್ಠರ ತೀರ್ಮಾನ ದಂತೆ ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದಾರೆ. ಹೊಸ ಸರ್ಕಾರ ನಾಯಕರನ್ನು ಆಯ್ಕೆ ಮಾಡಬೇಕಿದೆ. ಡಿಕೆ ಶಿವಕುಮಾರ್ ಬೆಂಬಲಕ್ಕೆ ವರಿಷ್ಠರು ಹಾಗೂ ಶಾಸಕರು ಇದ್ದಾರೆ ಎನ್ನುವ ನಂಬಿಕೆ ಇದೆ. ಹಾಲಿ ಸಚಿವರುಗಳು ತ್ಯಾಗ ಮಾಡಿದ್ದಲ್ಲಿ ಹೊಸಬರಿಗೆ ಅವಕಾಶ ಸಿಗಲಿದೆ. ಹೊಸ ನಾಯಕರನ್ನು ಆಯ್ಕೆ ಮಾಡಬೇಕು ಎನ್ನುವ ಅಪೇಕ್ಷೆ ನನ್ನಲ್ಲಿದೆ. ನಾನು ಸಹ ಹೊಸ ಸಚಿವ ಸಂಪುಟದಲ್ಲಿ ಸೇರುವ ಬಯಕೆ ಇದೆ. ಪಕ್ಷ ನನ್ನನ್ನು ಗುರುತಿಸಲಿದೆ ಎನ್ನುವ ನಂಬಿಕೆ ಇದೆ. ಈ ಬಗ್ಗೆ ವರಿಷ್ಠರ ಜೊತೆ ಮಾತುಕತೆ ನಡೆಸಿಲ್ಲ ಎಂದರು. ಕಳೆದ ಬಾರಿ ನಮ್ಮ ಜಿಲ್ಲೆಯವರೇ ಸಿಎಂ ಆದ್ದರಿಂದ, ಜಿಲ್ಲೆಯಿಂದ ನನಗೆ ಸಚಿವ ಸ್ಥಾನದ ಅವಕಾಶ ಸಿಗಲಿಲ್ಲ. ಈ ಬಾರೀ ಅನ್ಯ ಜಿಲ್ಲೆಯವರು ಸಿಎಂ ಆಗುವುದರಿಂದ ನನಗೆ ಅವಕಾಶ ಸಿಗಲಿದೆ. ಎಲ್ಲವೂ ಸುಗಮವಾಗಿ ಆಗಬೇಕು. ನಾನು ಪಕ್ಷ ಹಾಗೂ ಪಕ್ಷದ ಸಿದ್ಧಾಂತ ನಂಬಿದ್ದೇನೆ. ಡಿಕೆ ಶಿವಕುಮಾರ್ ಅಥವಾ ಯಾರೇ ಮುಖ್ಯಮಂತ್ರಿ ಆದರೂ ನನ್ನನ್ನು ಗುರುತಿಸಲಿದ್ದಾರೆ ಎನ್ನುವ ನಂಬಿಕೆ ಇದೆ ಎಂದರು.

ಹೊಸಬರಿಗೆ ಹೊಸ ನಾಯಕತ್ವ ಸೃಷ್ಟಿಸುವ ಜೊತೆಗೆ ಸಂಪುಟದಲ್ಲಿ ಅನುಭವ, ಹಿರಿತನ ಹಾಗೂ ಹೊಸಬರನ್ನು ಗುರುತಿಸಿ ಸರ್ಕಾರ ರಚಿಸಬೇಕಿದೆ. ಖಂಡಿತ ಈ ಬಾರೀ ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವನಾಗುವ ಅವಕಾಶ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಕ್ಕಳ ಅಭಿವೃದ್ಧಿಗೆ ಶಿಕ್ಷಕರ ಪಾತ್ರ ಮಹತ್ವ

ಮೈಸೂರು: ವಿಶಿಷ್ಟಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೋಷಕರು ಮತ್ತು ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಮೈಸೂರು ಜಿಲ್ಲಾ ವಿಶೇಷ ಚೇತನರ ಕಲ್ಯಾಣಾಧಿಕಾರಿ ರಾಘವೇಂದ್ರ ಕೆ. ಎಸ್ ಹೇಳಿದರು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸಮರ್ಥನಂ ಟ್ರಸ್ಟ್ ಫಾರ್ ದ ಡಿಸೇಬಲ್ಡ್ ವತಿಯಿಂದ ನಡೆಯುತ್ತಿರುವ ಬುದ್ಧಿವಿಶಿಷ್ಟಚೇತನ ಮಕ್ಕಳ ಶಾಲೆಯಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಅವರು, ಶಾಲೆಗೆ ಆಗಮಿಸಿದ ಪ್ರೀತಿಯ ವಿಶೇಷ ಮಕ್ಕಳಿಗೆ ಗುಲಾಬಿ ಹೂವು, ಸಿಹಿ ತಿಂಡಿ ಹಾಗೂ ಹೊಸ ಶೈಕ್ಷಣಿಕ ವರ್ಷದ 'ವೆಲ್ಕಮ್ ಕಿಟ್' ವಿತರಿಸುವ ಮೂಲಕ ಹಾರ್ದಿಕ ಸ್ವಾಗತ ಕೋರಿದರು.

ನಂತರ ಮಾತನಾಡಿದ ಅವರು, ಪ್ರೀತಿ, ಸಹನೆ ಮತ್ತು ನಿರಂತರ ಪ್ರೋತ್ಸಾಹದ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಬಹುದು ಎಂದು ತಿಳಿಸಿದರು. ಪ್ರತಿಯೊಬ್ಬ ಮಗುವಿನಲ್ಲಿಯೂ ವಿಶೇಷ ಪ್ರತಿಭೆ ಅಡಗಿದ್ದು, ಅದನ್ನು ಗುರುತಿಸಿ ಬೆಳೆಸುವ ಜವಾಬ್ದಾರಿ ಸಮಾಜದ ಮೇಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು ಮಾತನಾಡಿ, ವಿಶೇಷ ಮಕ್ಕಳ ಶಿಕ್ಷಣ ಮತ್ತು



ಪುನರ್ವಸತಿಗೆ ಸಮರ್ಥನಂ ಸಂಸ್ಥೆ ಸದಾ ಬದ್ಧವಾಗಿದ್ದು, ಮಕ್ಕಳ ಭವಿಷ್ಯ ಉಜ್ವಲವಾಗಿಸಲು ವಿವಿಧ ಶೈಕ್ಷಣಿಕ ಹಾಗೂ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಭ್ರಮಾರಂಭ, ಮಹಾಂತೇಶ್, ಚೈತ್ರಕುಮಾರಿ, ವಿಶೇಷ ಶಿಕ್ಷಕರಾದ ಪದ್ಮ, ಬೃಂದಾಬಾಯಿ, ವಿದ್ಯಾವತಿ, ಮಹಾದೇವ, ಮಂಜುಳ್, ಪೋಷಕರಾದ ರಂಗಸ್ವಾಮಿ ಸೇರಿದಂತೆ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜೂ.4ಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ

ಸರಗೂರು: ತಾಲೂಕು ಆಡಳಿತದ ವತಿಯಿಂದ ಜೂ.4ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ತಾಲೂಕು ಕಚೇರಿ ಆವರಣದಲ್ಲಿ ಆಚರಿಸಲಾಗುವುದು ಎಂದು ಪ್ರಭಾರ ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಪ್ರಭಾರ ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿದರು. ನಾಲ್ವಡಿ ಅವರು ನಾಡು ಕಂಡ ಅಪ್ರತಿಮವಾದ ಚೇತನ. ನೂರು ವರ್ಷಗಳ ಹಿಂದೆಯೇ ಕೈಗಾರಿಕೆ, ಶಿಕ್ಷಣ, ನೀರಾವರಿ, ಕೃಷಿಗೆ ಅವರು ನೀಡಿದ ಕೊಡುಗೆ ಅಪಾರ. ಅವರು ನೀಡಿದ ಕೊಡುಗೆ ಪ್ರತಿಯೊಬ್ಬರಿಗೂ ತಲುಪಬೇಕು. ಈ ನಿಟ್ಟಿನಲ್ಲಿ ಅರ್ಥಪೂರ್ಣವಾಗಿ ಜಯಂತಿ ಆಚರಿಸಲಾಗುವುದು. ನಾಲ್ವಡಿ ರವರ ಜೀವನ ಮತ್ತು ಸಾಧನೆ ಕುರಿತಂತೆ ಉಪನ್ಯಾಸ ನಡೆಸಲು ಸಹಠಿಳಿಸಿದ ಅವರು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಮನವಿ ಮಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಎಸ್‌ಎಸ್‌ಎಲ್ ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುಸ್ಕಾರ ನಡೆಸಲಾಗುವುದು ಎಂದು ಕಸಪಾ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ತಿಳಿಸಿದರು.

ಸಾ.ರಾ.ಮಹೇಶ್ ಹುಟ್ಟುಹಬ್ಬ ಆಚರಣೆಗೆ ಸಿದ್ಧತೆ

ಕೆ.ಆರ್.ನಗರ: ಮಾಜಿ ಸಚಿವ ಸಾ.ರಾ.ಮಹೇಶ್ ಅವರ 60ನೇ ವರ್ಷದ ಹುಟ್ಟುಹಬ್ಬವನ್ನು ಸಮಾಜಮುಖಿ ಕಾರ್ಯಕ್ರಮ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಕರೆಯಲಾಗ ಪೂರ್ವಭಾವಿ ಸಭೆಯಲ್ಲಿ ಹಾಜರಿದ್ದ ಹಲವು ಮುಖಂಡರು ಮಾತನಾಡಿ ಜೆಡಿಎಸ್ ಪಕ್ಷದ ವತಿಯಿಂದ ಆ.10ರಂದು ಮಾಜಿ ಸಚಿವರ ಹುಟ್ಟುವನ್ನು ವಿಜೃಂಭಣೆಯಿಂದ ಆಚರಿಸಬೇಕೆಂದು ಸಲಹೆ ನೀಡಿದರು.

ಇಲ್ಲಿನ ಪುರಸಭೆ ಬಯಲು ರಂಗ ಮಂದಿರದಲ್ಲಿ ಕಾರ್ಯಕ್ರಮ ನಡೆಸಬೇಕು ಬಡಜನರಿಗೆ ಉಪಯೋಗವಾಗುವಂತಹ ಸಮಾಜಮುಖಿ ಕೆಲಸಗಳಾದ ಆರೋಗ್ಯ ತಪಾಸಣೆ, ಉದ್ಯೋಗಮೇಳದ ಜತೆಗೆ ರಸ್ತೆ ಬದಿ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸಲು ತಳ್ಳುಗಾಡಿ ವಿತರಣೆ ಸೇರಿದಂತೆ 60 ಯೋಜನೆಗಳನ್ನು ರೂಪಿಸಬೇಕು ಅದಕ್ಕಾಗಿ ಹುಟ್ಟುಹಬ್ಬ ಸಮಿತಿ ರಚನೆ ಮಾಡುವಂತೆ ತಿಳಿಸಿದರು. ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲೂ ಹುಟ್ಟು ಹಬ್ಬಕ್ಕೆ ಶುಭಾಶಯ ಕೋರುವ ಫ್ಲೆಕ್ಸ್ ಗಳನ್ನು ಹಾಕಬೇಕು ಜತೆಗೆ ಸ್ಥಳೀಯ ಮುಖಂಡರು ಸಿಹಿ ವಿತರಿಸುವ ಮೂಲಕ ಹುಟ್ಟು ಹಬ್ಬವನ್ನು ಆಚರಿಸಬೇಕೆಂದು ತಿಳಿಸಿದಲ್ಲದೆ ಪುರಸಭೆಯ ಬಯಲು ರಂಗ ಮಂದಿರಲ್ಲಿ ನಡೆಯುವ ಕಾರ್ಯಕ್ರಮಕ್ಕೆ 60 ಸಾವಿರ ಜನರನ್ನು ಕರೆತರಬೇಕೆಂದು ಮನವಿ ಮಾಡಿದರು. ಜೆಡಿಎಸ್ ರಾಜ್ಯ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಅಧ್ಯಕ್ಷರಾದ ಹೆಚ್.ಸಿ.ಕುಮಾರ್, ಮೆಡಿಕಲ್ ರಾಜಣ್ಣ, ಯುವ ಘಟಕದ ಅಧ್ಯಕ್ಷರಾದ ಡಿ.ಎಸ್.ಯೋಗೇಶ್, ಕರ್ತಾಳು ಮಧು, ಮಹಿಳಾ ಘಟಕದ ಅಧ್ಯಕ್ಷೆ ರಾಜಲಕ್ಷ್ಮೀ, ಪುರಸಭೆ ಮಾಜಿ ಅಧ್ಯಕ್ಷರಾದ ಡಿ.ಕಾಂತರಾಜು, ಗೀತಾಮಹೇಶ್ ಮತ್ತಿತರರಿದ್ದರು.

ಮೈಸೂರು ಜಿಲ್ಲಾ ಭಗೀರಥ ಉಪ್ಪಾರರ ಸಂಘ ಒತ್ತಾಯ

ಪುಟ್ಟರಂಗಶೆಟ್ಟಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿ

ಮೈಸೂರು; ಹಿಂದುಳಿದ ವರ್ಗಗಳ ಕೋಟಾದಲ್ಲಿ ಚಾಮರಾಜನಗರ ಕ್ಷೇತ್ರದಿಂದ ಸತತವಾಗಿ 4ನೇ ಭಾರಿಗೆ ಕಾಂಗ್ರೆಸ್ ಪಕ್ಷದ ಶಾಸಕರಾಗಿ ಕೆಲಸ ಮಾಡುತ್ತಿರುವ ಮಾಜಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿಗೆ ರವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘ ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಒತ್ತಾಯಿಸಿದೆ.

ಗುರುವಾರ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಎಸ್. ಯೋಗಿಶ ಉಪ್ಪಾರ, ಇಡೀ ರಾಜ್ಯದಲ್ಲಿ 224 ಕ್ಷೇತ್ರಗಳಲ್ಲಿ ಉಪ್ಪಾರ ಸಮಾಜವು 25 ರಿಂದ 30 ಲಕ್ಷ ಮತದಾರರಿದ್ದು, ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯಾದ್ಯಂತ ಉಪ್ಪಾರ ಸಮಾಜವು ಅತಿ ಹೆಚ್ಚಿನ ಬೆಂಬಲವನ್ನು ನೀಡುವ ಮೂಲಕ, 136 ಕ್ಷೇತ್ರಗಳಲ್ಲಿ ಜಯಗಳಿಸಿ, ಸರಕಾರ ರಚನೆಗೆ ಪ್ರಮುಖ ಪಾತ್ರ ವಹಿಸಿದೆ. ಹಾಗಾಗಿ ಚಾಮರಾಜನಗರ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ



ಸತತವಾಗಿ ನಾಲ್ಕನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಪಕ್ಷವು ಪ್ರಬಲ ಅಭ್ಯರ್ಥಿಗೆ ಟಿಕೆಟ್ ನೀಡಿ, ಹಿಂದುಳಿದ ವರ್ಗಕ್ಕೆ ಸೇರಿರುವ, ಉಪ್ಪಾರ ಸಮಾಜದ ಏಕೈಕ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರನ್ನು ಮುಗಿಸುವ ಹುನ್ನಾರ ನಡೆಸಿತು. ಆದರೆ ಕ್ಷೇತ್ರದ ಮತದಾರರು ಸ್ಥಳೀಯ ಅಭ್ಯರ್ಥಿಗೆ ಮತವನ್ನು ನೀಡಿ, ಅವರನ್ನು ಜಯಗಳಿಸುವಲ್ಲಿ ಸಫಲರಾಗಿದ್ದಾರೆ. ಸುಮಾರು 35 ರಿಂದ 40 ಕ್ಷೇತ್ರಗಳಲ್ಲಿ ನಿರ್ಣಾಯಕ ಮತಗಳಿದ್ದು, ಬಿಜೆಪಿ ಹಾಗೂ ಜೆಡಿಎಸ್ ಪಕ್ಷವು ಉಪ್ಪಾರ ಸಮಾಜಕ್ಕೆ ಟಿಕೆಟ್ ನೀಡದ ಕಾರಣ, ಒಕ್ಕೊರೊಲಿನಿಂದ ಸಿದ್ದರಾಮಯ್ಯರವರ ನೇತೃತ್ವದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವನ್ನು ನೀಡಿ ಬಹುಮತ ಪಡೆಯಲು ಸಹಕರಿಸಿದ್ದೇವೆ.

ಅಲ್ಲದೆ, ಹಿಂದೆ ಸಮಿಶ್ರ ಸರ್ಕಾರದಲ್ಲಿ ಸಿ. ಪುಟ್ಟರಂಗಶೆಟ್ಟಿ ಅವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. ಹೀಗಾಗಿ ಈ ಬಾರಿ ಉತ್ತಮ ಖಾತೆಯ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು. ಕಾಂಗ್ರೆಸ್ ಪಕ್ಷವೂ ಈ ಬಾರಿ ಉಪ್ಪಾರ ಸಮಾಜದ ಮೂಂಚೂಣಿ ನಾಯಕರನ್ನು ಗುರುತಿಸಿ, ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಗೌರವ ಸಲಹೆಗಾರ ಮರಿಸ್ವಾಮಿ, ಖಜಾಂಚಿ ಗೋವಿಂದಶೆಟ್ಟಿ, ಉಪಾಧ್ಯಕ್ಷ ರಾಜು, ನಿರ್ದೇಶಕ ಬಸವರಾಜು ಉಪಸ್ಥಿತರಿದ್ದರು.

ಕ್ರಮಕ್ಕೆ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಒತ್ತಾಯ

ಸರ್ವರ್ ಸಮಸ್ಯೆ ಪಡಿತರ ವಿತರಣೆಗೆ ಅಡ್ಡಿ

ಮೈಸೂರು: ಆಹಾರ, ನಾಗರಿಕ ಸರಬರಾಜು ಇಲಾಖಾ ವತಿಯಿಂದ ನ್ಯಾಯಬೆಲೆ ಅಂಗಡಿ ಗಳ ಮೂಲಕ ವಿತರಣೆ ಮಾಡಲಾಗುತ್ತಿರುವ ಪಡಿತರ ಅಕ್ಕಿಯ ಸರ್ವರ್ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕ ಒತ್ತಾಯಿಸಿದೆ.

ಈ ಕುರಿತು ಮೈಸೂರಿನ ಸಿದ್ದಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಕರ್ನಾಟಕ ಸರಕಾರದ ಆಹಾರ, ನಾಗರಿಕ ಸರಬುರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ ಡಾ. ಮಂಟೇಸ್ವಾಮಿ ರವರಿಗೆ ಲಿಖಿತ ಮನವಿ ಸಲ್ಲಿಸಿರುವ ಘಟಕದ ಮುಖಂಡರುಗಳು, ಸರ್ವರ್ ಸಮಸ್ಯೆಯಿಂದಾಗಿ ಗ್ರಾಹಕರು ತಮ್ಮ ಪಡಿತರ ಅಕ್ಕಿ ಪಡೆಯಲು ಸಂಬಂಧ ಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ದಿನ ಪೂರ್ತಿ ಕಾಯುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಗ್ರಾಮೀಣ ಭಾಗದ ಕೆಲ ನ್ಯಾಯಬೆಲೆ ಅಂಗಡಿಯಲ್ಲಿ ದಿನ ಪೂರ್ತಿ ಕಾದು ನಿಂತರೂ ಸರ್ವರ್ ಸಮಸ್ಯೆಯಿಂದ ಅಕ್ಕಿ ಲಭಿಸದೆ ಬರಿಗೈಯಲ್ಲಿ ವಾಪಸ್ ಹೋಗುವಂತಾಗಿದೆ ಎಂದು ದೂರಿದ್ದಾರೆ.

ಸರಕಾರದ ಮಟ್ಟದಲ್ಲಿನ ಈ ರೀತಿಯ ತಾಂತ್ರಿಕ ಅಡಚಣೆಯಿಂದಾಗಿ ಕೂಲಿ ಕೆಲಸ ಮಾಡುತ್ತಿರುವ ಬಿಪಿಎಲ್ ಪಡಿತರ ಚೀಟಿದಾರ ಗ್ರಾಹಕರು ಸಕಾಲದಲ್ಲಿ ಅಕ್ಕಿ ಸಿಗದೆ ನ್ಯಾಯಬೆಲೆ ಅಂಗಡಿ ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಸಂಬಂಧ ಪಟ್ಟ ಆಹಾರ ಅಧಿಕಾರಿಗಳಲ್ಲಿ ವಿಚಾರಿಸಿದರೆ ಎರಡು ತಿಂಗಳ ಅಕ್ಕಿಯನ್ನು ಒಂದೇ ತಿಂಗಳಿನಲ್ಲಿ ನೀಡುತ್ತಿರುವುದರಿಂದ ಸರ್ವರ್ ಸಮಸ್ಯೆ ಉದ್ಭವಿಸಿದೆ ಎಂದು ಸಬೂಬು ನೀಡುತ್ತಿದ್ದಾರೆ. ಈ ವಿಚಾರದಲ್ಲಿ ಸಮರ್ಪಕ



ಕಾರಣ ತಿಳಿಯದಿದ್ದ, ಸರ್ವರ್ ಸಮಸ್ಯೆ ತಿಂಗಳ ಅಂತ್ಯದವರೆಗೂ ಹೀಗೆಯೇ ಮುಂದುವರಿದರೆ, ಕೆಲವರು ಪಡಿತರ ಅಕ್ಕಿ ಪಡೆಯುವಲ್ಲಿ ವಂಚಿತರಾಗಬಹುದು ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಈ ನಡುವೆ ಮೇ ತಿಂಗಳ ಅಕ್ಕಿಯನ್ನು ರಾಜ್ಯ ಸರಕಾರ ವಿತರಿಸಿಲ್ಲ, ಕೇಂದ್ರ ಸರಕಾರವು ಮುಂಗಡವಾಗಿ 2 ತಿಂಗಳಿಗೆ ಬಿಡುಗಡೆ ಮಾಡಿದ ಅಕ್ಕಿಯನ್ನು ಹೊಂದಾಣಿಕೆ ಮಾಡಿಕೊಂಡು ಎರಡೆರಡು ಬಾರಿ ಗ್ರಾಹಕರಿಂದ ಬೆರಳ ಅಚ್ಚು (ತಂಬ್) ತೆಗೆದುಕೊಳ್ಳುವುದರಿಂದ ಸರ್ವರ್ ಸಮಸ್ಯೆಗೆ ಇನ್ನೊಂದು ಕಾರಣ ಎಂದು ಹೇಳಲಾಗುತ್ತಿದೆ.ಈ ಹಿನ್ನೆಲೆಯಲ್ಲಿ ಮೇ ತಿಂಗಳ ಅಕ್ಕಿಯನ್ನು ಜೂನ್ ಮೊದಲ ವಾರದವರೆಗೂ ನೀಡಲು ಸೂಕ್ತ ಆದೇಶ ನೀಡಬೇಕೆಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ರಾಜ್ಯ ಸಂಚಾಲಕ ಡಾ.ಜಿ ವಿ ರವಿಶಂಕರ್,ಕಾರ್ಯದರ್ಶಿ ಶ್ರೀಕಂಠೇಶ್, ಆನಂದ್, ಸಂದೇಶ್, ದುರ್ಗಾ ಪ್ರಸಾದ್ ,ಹರೀಶ್,ದಯಾನಂದ ನಾಯಕ್ ಇತರರಿದ್ದರು.

ಕಿರುಸುದ್ದಿ

ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಮನವಿ



• **ಚಾಮರಾಜನಗರ:** ಉಪ್ಪಾರ ಸಮುದಾಯ ಏಕೈಕ ಶಾಸಕರಾಗಿರುವ ಹಿಂದುಳಿದ ವರ್ಗಗಳ ನಾಯಕರಾದ ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಚಾ.ನಗರ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಹಾಗೂ ಬಗರ್ ಹುಕುಂ ಸಾಗುವಳಿ ಸಮಿತಿಯ ಸದಸ್ಯ ಬಿಸಲವಾಡಿ ರವಿ ಒತ್ತಾಯಿಸಿದರು. ಸರಳ ಸಜ್ಜನಿಕೆಯ ನಾಯಕರಾಗಿರುವ ಸಿ.ಪುಟ್ಟರಂಗಶೆಟ್ಟರು ಎಲ್ಲಾ ವರ್ಗದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿದ್ದಾರೆ. ಶಾಸಕರಾಗಿ ಕ್ಷೇತ್ರದ ಅಭಿವೃದ್ಧಿಗೆ ತಮ್ಮದೇ ಆದ ಮುಂದಾಲೋಚನೆಯೊಂದಿಗೆ ಬಹಳಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ನಡೆದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ 24 ಮಂದಿಗೆ ಸರ್ಕಾರಿ ಉದ್ಯೋಗ ಕೊಡಿಸುವಲ್ಲಿ ಅವರ ಪ್ರಯತ್ನ ಅಪಾರವಾಗಿದೆ. ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದ ಕ್ಷೇತ್ರದ ಬಡ ಜನರಿಗೆ ಆಹಾರ ಕಿಟ್ ವಿತರಣೆ ಸೇರಿದಂತೆ ಅವರಿಗೆ ವೈಯಕ್ತಿಕವಾಗಿ ಬಹಳಷ್ಟು ನೆರವು ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳಿಗೆ ಬದ್ಧರಾಗಿರುವ ಪುಟ್ಟರಂಗಶೆಟ್ಟರು ಪಕ್ಷ ನಿಷ್ಠರು. ಹಿರಿತನದ ಆಧಾರದ ಮೇಲೆ ಸಿ.ಪುಟ್ಟರಂಗಶೆಟ್ಟರಿಗೆ ಸಚಿವ ಸ್ಥಾನ ಹಾಗೂ ಜಿಲ್ಲಾ ಉಸ್ತುವಾರಿಯನ್ನು ವಹಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲಿಯೇ ಪುಟ್ಟರಂಗಶೆಟ್ಟರು ಸಚಿವರಾಗಬೇಕಾಗಿತ್ತು. ಕೊನೆಯ ಕ್ಷಣದಲ್ಲಿ ಕೈತಪ್ಪಿತ್ತು. ಹೀಗಾಗಿ ಕಾಂಗ್ರೆಸ್ ವರಿಷ್ಠರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರು ಮುಂದಿನ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಪುಟ್ಟರಂಗಶೆಟ್ಟರನ್ನು ಸಚಿವ ಸಂಪುಟದಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಕ್ಷೇತ್ರದ ಜನರ ಪರವಾಗಿ ಅಭಿಮಾನದಿಂದ ಚಾ.ನಗರ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಹಾಗೂ ಬಗರ್‌ಹುಕುಂ ಸಾಗುವಳಿ ಸಮಿತಿಯ ಸದಸ್ಯ ಬಿಸಲವಾಡಿ ರವಿ ಪತ್ರಿಕಾ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

ಅರ್ಜಿ ಆಹ್ವಾನ

• **ಕೆ.ಆರ್.ನಗರ:** ತಾಲೂಕು ಒಕ್ಕಲಿಗರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. 2025-26ನೇ ಸಾಲಿನಲ್ಲಿ ಎಸ್ ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90% ರಷ್ಟು ಅಂಕಗಳಿಸಿದ ಮಕ್ಕಳಿಗೆ ಪುರಸ್ಕಾರ ನೀಡಲು ನಿರ್ಧರಿಸಲಾಗಿದ್ದು ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನ ಸಮಾಜದ ವಿದ್ಯಾರ್ಥಿಗಳು ಆಧಾರ ಕಾರ್ಡ್, ಅಂಕಪಟ್ಟಿ ನಕಲು ಪ್ರತಿ ,ಜಾತಿಪ್ರಮಾಣ ಪತ್ರ ಹಾಗೂ ಒಂದು ಭಾವಚಿತ್ರದೊಂದಿಗೆ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿರುವ ಸಂಘದ ಕಛೇರಿಗೆ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ ಹೆಚ್ಚಿನ ಮಾಹಿತಿಗಾಗಿ 94498246539 ಸಂಪರ್ಕಿಸಬಹುದು.

ಕೃಷ್ಣಮೂರ್ತಿಗೆ ಸಚಿವ ಸ್ಥಾನ ನೀಡಲು ಒತ್ತಾಯ



• **ಕೊಳ್ಳೇಗಾಲ:** ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿಗೆ ಸಚಿವ ಸ್ಥಾನ ನೀಡಬೇಕೆಂದು ತಾಲೂಕು ಕ್ರೈಸ್ತ ಸಮುದಾಯ ಕ್ಷೇಮಾಭಿವೃದ್ಧಿ ಒಕ್ಕೂಟದ ವತಿಯಿಂದ ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷರು ಜಿ.ಸೆಲ್ವರಾಜು ಮಾತನಾಡಿ, ದಲಿತ ಧೀಮಂತ ನಾಯಕರಾದ ರಾಚಯ್ಯರವರ ಪುತ್ರರಾದ ಎ.ಆರ್. ಕೃಷ್ಣಮೂರ್ತಿ ನಮ್ಮ ಕ್ಷೇತ್ರದ ಶಾಸಕರಾದ ಮೇಲೆ ಸಾಕಷ್ಟು ಅಭಿವೃದ್ಧಿ ಮಾಡುವ ಮೂಲಕ ಸುಮಾರು 500 ಕೋಟಿ ಅನುದಾನ ತರುವುದರ ಜೊತೆಗೆ ಸರ್ವ ಧರ್ಮ, ಸರ್ವ ಜನಾಂಗದ ಅಭಿವೃದ್ಧಿ ಮಾಡಿದ್ದಾರೆ. ಆದ್ದರಿಂದ ಅವರಿಗೆ ಸಚಿವ ಸ್ಥಾನ ನೀಡುವುದರ ಮೂಲಕ ರಾಜ್ಯದ ಅಭಿವೃದ್ಧಿಗೊಳಿಸಿದ್ದಾರೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಲೂಥರನ್ ಚರ್ಚ್ ಫಾಸ್ಟರ್ ಜೋಶುವಾ ಪ್ರಸನ್ನಕುಮಾರ್, ಎಸ್.ಡಿ.ಎ ಚರ್ಚ್ ಫಾಸ್ಟರ್ ಹೆಚ್.ಕೆ.ಅಂತೋಣಿ,ಫಾಸ್ಟರ್ ಜೋಯಲ್ ನಾರಾಯಣ್, ಫಾಸ್ಟರ್ ಜಾಕುಬ್, ಅರುಣೋದಯ ಚರ್ಚ್ ಫಾಸ್ಟರ್ ಜರೂ ಬ್ಯಾಬೆಲ್, ಎಬಿನೆಜರ್ ಬ್ರದರನ್ ಚರ್ಚ್ ಹಿರಿಯರು ಕರುಣಾಕಾರ್, ನಗರಸಭೆ ನಾಮನಿರ್ದೇಶಿತ ಸದಸ್ಯರು ಆನಂದ್ ಜೋಶಿ, ಕ್ಷೇಮಾಭಿವೃದ್ಧಿ ಒಕ್ಕೂಟದ ಅಧ್ಯಕ್ಷರು ಜಿ.ಸೆಲ್ವರಾಜು, ಗೌರವಾಧ್ಯಕ್ಷರು ಎ.ವಿನ್ಸೆಂಟ್, ಹಿರಿಯ ಉಪಾಧ್ಯಕ್ಷರು ಟಿ.ಜಾನ್ ಪೀಟರ್, ಖಜಾಂಚಿ ಸಾಮುವೇಲ್, ಜಂಟಿ ಕಾರ್ಯದರ್ಶಿಗಳು ಭಕ್ತರಾಜ್ ಸಾಮುವೇಲ್.ಡಿ, ನಿರ್ದೇಶಕರು ಕಾಂತರಾಜ್.ಆರ್., ಎಲಿಸ್ ಬಾಬು, ಮನೋಜ್, ಸುದರ್ಶನ್ ಇದ್ದರು.



ಕೊಳ್ಳೇಗಾಲ ಪಟ್ಟಣದ ಅಭಿವೃದ್ಧಿ ಹಾಗೂ ಸಾರ್ವಜನಿಕರ ಮೂಲ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಬಹುಜನ ಸಮಾಜ ಪಕ್ಷದ ವತಿಯಿಂದ ನಗರಸಭೆ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ಆರೋಗ್ಯ ಜಾಗೃತಿ ಕಾರ್ಯಕ್ರಮ

• **ಗುಂಡ್ಲುಪೇಟೆ:** ತಾಲೂಕಿನ ಚಿಕ್ಕಾಟಿ ಗ್ರಾಮದಲ್ಲಿ ಗ್ರಾಮ ಪಂಚಾಯತ್, ಸಂಜೀವಿನಿ ಇಲಾಖೆ ಹಾಗೂ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಮಹಿಳೆಯರ ಆರೋಗ್ಯ ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ವೈದ್ಯೆ ಡಾ. ಪುಷ್ಪ ಅವರು ಮಹಿಳೆಯರು ಹಾಗೂ ಯುವತಿಯರಿಗೆ ಮುಟ್ಟು ವೃತು ಚಕ್ರದ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಮಾಸಿಕ ಚಕ್ರವು ಮಹಿಳೆಯರ ಸಹಜ ದೈಹಿಕ ಪ್ರಕ್ರಿಯೆಯಾಗಿದ್ದು, ಇದರ ಬಗ್ಗೆ ಯಾವುದೇ ಮುಜುಗರ ಅಥವಾ ತಪ್ಪು ಕಲ್ಪನೆ ಇರಬಾರದು ಎಂದು ತಿಳಿಸಿದರು. ಮುಟ್ಟಿನ ಸಮಯದಲ್ಲಿ ವೈಯಕ್ತಿಕ ಸ್ವಚ್ಛತೆ ಕಾಪಾಡುವುದು, ಸ್ವಚ್ಛ ನ್ಯಾಪ್ಕಿನ್‌ಗಳ ಬಳಕೆ, ಪೌಷ್ಟಿಕ ಆಹಾರ ಸೇವನೆ ಹಾಗೂ ಆರೋಗ್ಯ ಸಮಸ್ಯೆಗಳು ಕಂಡುಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸುವ ಅಗತ್ಯವಿದೆ ಎಂದು ಸಲಹೆ ನೀಡಿದರು.ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಮುಟ್ಟು ಕುರಿತು ಅರಿವಿನ ಕೊರತೆ ಇರುವುದರಿಂದ ಮಹಿಳೆಯರಲ್ಲಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಜಾಗೃತಿ ಕಾರ್ಯಕ್ರಮಗಳು ಅಗತ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳೆಯರು ಮತ್ತು ಯುವತಿಯರು ಆರೋಗ್ಯ ಸಂಬಂಧಿತ ಹಲವು ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯರು, ಆಶಾ ಕಾರ್ಯಕರ್ತೆಯರು, ಸಂಜೀವಿನಿ ಸಂಘದ ಸದಸ್ಯೆಯರು ಹಾಗೂ ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.



ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮದಲ್ಲಿ ಗ್ರಾಮ ಪಂಚಾಯತ್, ಸಂಜೀವಿನಿ ಇಲಾಖೆ ಹಾಗೂ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಮಹಿಳೆಯರಿಗೆ ಆರೋಗ್ಯ ಜಾಗೃತಿ ಕಾರ್ಯಕ್ರಮ ನಡೆಯಿತು.

ಡಿಕೆಶಿ ಅಭಿಮಾನಿಗಳ ಬಳಗದ ವತಿಯಿಂದ ಚಾಮರಾಜೇಶ್ವರ ದೇಗುಲದಲ್ಲಿ ಪ್ರಾರ್ಥನೆ

ಡಿಕೆಶಿ ಹೆಸರಲ್ಲಿ ವಿಶೇಷ ಪೂಜೆ

• **ಚಾಮರಾಜನಗರ:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುತ್ತಿರುವ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳ ಬಳಗದ ವತಿಯಿಂದನಗರದಚಾಮರಾಜೇಶ್ವರದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಜಿಲ್ಲಾ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಬಳಗದ ಅಧ್ಯಕ್ಷ ಪುಟ್ಟಸ್ವಾಮಿಗೌಡ ಅವರ ನೇತೃತ್ವದಲ್ಲಿ

ಚಾಮರಾಜೇಶ್ವರ ದೇವಾಲಯದಲ್ಲಿ ವಿಶೇಷ ಕುಂಕುಮ ಅರ್ಚನೆ ನೆರವೇರಿಸಿದರು. ವಿಶೇಷಪೂಜೆ ಸಲ್ಲಿಸಿದ ಅಭಿಮಾನಿಗಳು ಕೈಯಲ್ಲಿ ಡಿಕೆ ಶಿವಕುಮಾರ್ ಫೋಟೊ ಹಿಡಿದು, ಈಡುಗಾಯಿ ಒಡೆದು, ನೂತನ ಮುಖ್ಯಮಂತ್ರಿ ಡಿಕೆ ಶಿವಕುಮಾರ್‌ಗೆ ಜಯವಾಗಲಿ ಎಂದು ಘೋಷಣೆ ಕೂಗಿ ಸಂಭ್ರಮಾಚರಣೆ ಮಾಡಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಪುಟ್ಟಸ್ವಾಮಿ ಗೌಡ ಮಾತನಾಡಿ, ನಮ್ಮ ನೆಚ್ಚಿನ ನಾಯಕ ಕನಕಪುರ ಬಂಡೆ, ಒಕ್ಕಲಿಗರ ಸಮುದಾಯದ ಹುಲಿ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಿರುವ ಹಿನ್ನೆಲೆಯಲ್ಲಿ ಚಾಮರಾಜೇಶ್ವರಸ್ವಾಮಿಗೆ ವಿಶೇಷಪೂಜೆ ಸಲ್ಲಿಸಲಾಗಿದೆ. ಈ ಹಿಂದೆ ಚುನಾವಣಾ ಪೂರ್ವ ಸಂದರ್ಭದಲ್ಲಿ ಚಾಮರಾಜೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಪ್ರಾರ್ಥಿಸಲಾಗಿತ್ತು. ಈಗ ಅವರು ಯಶಸ್ವಿಯಾಗಿ ಮುಖ್ಯಮಂತ್ರಿ ಸ್ಥಾನ ಅಲಂಕರಿಸುವಂತೆ ಪ್ರಾರ್ಥಿಸಲಾಯಿತು ಎಂದರು.

ಡಿ.ಕೆ.ಶಿವಕುಮಾರ್ ಅವರು ರಾಜ್ಯದಲ್ಲಿ ಎಲ್ಲ ಜಾತಿ, ಧರ್ಮಗಳೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದಾರೆ. ಹಿಂದುತ್ವ ಪ್ರತಿಪಾದನೆ ಮಾಡುವವರು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಚಿನ್ನುಮುತ್ತು, ರಘು, ಸೋಮಶೇಖರ, ಮಾದೇಶ್, ಕೇಬಲ್ ರಘು, ಪಣ್ಯದಹುಂಡಿ ರಾಜು, ಶ್ರೀನಿವಾಸಗೌಡ, ರವಿಚಂದ್ರಪ್ರಸಾದ್, ನಿಜಧ್ವನಿ ಗೋವಿಂದರಾಜು, ಗಂಗವಾಡಿ ಮರಿಸ್ವಾಮಿ, ಮನೋಜ್, ಸಿದ್ದಲಿಂಗೇಗೌಡ, ಸುಬ್ಬಯ್ಯ, ಚಿಕ್ಕನಾಯಕ, ಲೋಕೇಶ್, ನಾಗರಾಜು , ಸಿ.ಕೆ. ರವಿಕುಮಾರ್ , ಸುರೇಶ್, ಈರಣ್ಣ, ಗೋವಿಂದ ಗೌಡ, ಚಿನ್ನಸ್ವಾಮಿ, ಮಹೇಶ್‌ಗೌಡ, ಪ್ರಕಾಶ್, ರಾಜಪ್ಪ ,ನಾಗೇಂದ್ರ ಗೌಡ, ಸೋಮಣ್ಣ, ರವಿಗೌಡ, ಮಹೇಶ್, ಅರುಣಕುಮಾರ್ ಗೌಡ, ನಾಗರಾಜು ಹಾಜರಿದ್ದರು.



- ಡಿಕೆ ಶಿವಕುಮಾರ್ ಫೋಟೊ ಹಿಡಿದು, ಈಡುಗಾಯಿ ಒಡೆದು ಸಂಭ್ರಮ
- ಯಶಸ್ವಿಯಾಗಿ ಮುಖ್ಯಮಂತ್ರಿ ಸ್ಥಾನ ಅಲಂಕರಿಸುವಂತೆ ಪ್ರಾರ್ಥನೆ
- ಒಕ್ಕಲಿಗರ ಸಮುದಾಯದ ಹುಲಿ ಡಿಕೆ ಶಿವಕುಮಾರ್: ಪುಟ್ಟಸ್ವಾಮಿ ಗೌಡ

ಹರಾಜು ಪ್ರಕ್ರಿಯೆ ತಾತ್ಕಾಲಿಕ ತಡೆಗೆ ಸರ್ಕಾರಕ್ಕೆ ಮನವಿ

• **ಪಿರಿಯಾಪಟ್ಟಣ:** ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ಮಸಣಿಕಮ್ಮ ದೇವಾಲಯದ ಜೀರ್ಣೋದ್ಧಾರದ ಕಾರ್ಯ ಪೂರ್ಣಗೊಳ್ಳುವ ಹಾಗೂ ಭಕ್ತರಿಗೆ ಮೂಲಭೂತ ಸೌಕರ್ಯಗಳು ಸಿಗುವವರೆಗೂ ತಹಸೀಲ್ದಾರ್ ಕರೆದಿರುವ ವಿವಿಧ ಬಾಬ್ತುಗಳ ಬಹಿರಂಗ ಹರಾಜು ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ರದ್ದು ಪಡಿಸುವಂತೆ ಕೋರಿ, ದೇವಾಲಯದ ಭಕ್ತರು ಹಾಗೂ ಉಪ್ಪಾರ ಬೀದಿ, ಒಳಕೋಟೆ, ದೇವೇಗೌಡನ ಕೊಪ್ಪಲು ಹಾಗೂ ಕರಿಬಸಪ್ಪ ಬಡಾವಣೆ ನಿವಾಸಿಗಳು ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಹರೀಶ್ ಮುಖಾಂತರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ದೇವಾಲಯದ ಭಕ್ತರು ಮಾತನಾಡಿ, ನಮ್ಮ ಪೂರ್ವಿಕರ ಕಾಲದಿಂದಲೂ ಶ್ರೀ ಮಸಣಿಕಮ್ಮ ದೇವಾಲಯದ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಈಗ ದೇವಾಲಯದ ಜೀರ್ಣೋದ್ಧಾರ ಕಾರ್ಯ ಕೈಗೊಳ್ಳಲು ಸರ್ಕಾರ ಅನುದಾನ ಸಹ ಬಿಡುಗಡೆ ಮಾಡಿ ಟೆಂಡರ್ ಪ್ರಕ್ರಿಯೆ ನಡೆಸಿದ್ದು, ಇನ್ನೇನು ಕೆಲವೇ ದಿನಗಳಲ್ಲಿ ದೇವಾಲಯದ ಜೀರ್ಣೋದ್ಧಾರ ಕಾರ್ಯ ಆರಂಭವಾಗಲಿದೆ ಹೀಗಿರುವಾಗ ಜಿಲ್ಲಾಧಿಕಾರಿಗಳು/ತಹಸೀಲ್ದಾರ್ ರವರ ನೇತೃತ್ವದಲ್ಲಿ ಲಡ್ಡು ಪ್ರಸಾದ, ಕಲ್ಲುಸಕ್ಕರೆ, ತೀರ್ಥ ಪ್ರಸಾದ ಹಾಗೂ ಮುಡಿ ಸೇವೆ ಸೇರಿದಂತೆ ಇನ್ನಿತರ ಸೇವೆ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ನಡೆಸುವುದಾಗಿ ಪ್ರಕಟಣೆ ಹೊರಡಿಸಿದ್ದಾರೆ ಎಂದರು.

ಪುರಸಭಾ ಮಾಜಿ ಅಧ್ಯಕ್ಷ ಪಿ.ಡಿ. ತ್ರಿನೇಶ್ , ಮಾಜಿ ಉಪಾಧ್ಯಕ್ಷ ಪಿ.ಕೆ. ಸುರೇಶ್, ಮಾಜಿ ಸದಸ್ಯ ಎಂ.ಮಂಜು, ಕಸಬಾ ಕೃಷಿ ಪತ್ತಿನ ಸಹ ಕಾರ ಸಂಘದ ಅಧ್ಯಕ್ಷಪಿ.ಕೆ.ಕುಮಾರ್,ಯಜಮಾನರಾದ ರಾಮು, ಶಿವಣ್ಣ, ಕರಿಯಪ್ಪ, ತಮ್ಮಯ್ಯ, ಚಂದ್ರು, ವಿನಯ್ ಶೇಖರ್ ಇದ್ದರು.



ಆರೋಗ್ಯ ಉಚಿತ ತಪಾಸಣೆ ನಾಳೆ

• **ಮೈಸೂರು:** ನಗರದ ಖಿಲ್ಲೆ ಮೊಹಲ್ಲಾದಲ್ಲಿರುವ ಉತ್ತರಾಧಿಮಠದಲ್ಲಿ ಮೇ 31ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಮೈಸೂರಿನ ರಾಜಮಾತೆ ಪ್ರಮೋದಾದೇವಿ ಒಡೆಯರ್ ತಿಳಿಸಿದರು.

ಶುಕ್ರವಾರ ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರಾದಿ ಮಠ ರೋಗ ಮೋಚನ ಶ್ರೀಧನ್ವಂತರಿ ಸನ್ನಿಧಾನ ಮತ್ತು ಹೆಚ್.ಹೆಚ್. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್ ಮತ್ತು ಆರೋಗ್ಯ ವರ್ಲ್ಡ್ ಇಂಡಿಯಾ ಟ್ರಸ್ಟ್ ಉಪಕ್ರಮ ಸ್ವಸ್ಥ ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಸತ್ಯಾತ್ಮ ತೀರ್ಥಸ್ವಾಮೀಜಿಯವರ ಮೈಸೂರು ದಿಗ್ವಿಜಯ-2026 ಅಧಿಕ ಮಾಸದ ನಿಮಿತ್ತ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆ 9 ಕ್ಕೆ ಶಿಬಿರದ ಉದ್ಘಾಟನೆಯನ್ನು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ನೆರವೇರಿಸಲಿದ್ದು, ಶ್ರೀ ಸತ್ಯಾತ್ಮತೀರ್ಥಸ್ವಾಮೀಜಿಯವರ ದಿವ್ಯ ಉಪಸ್ಥಿತವಿರಲಿದೆ. ಸ್ವಸ್ಥ ಮೈಸೂರು ಟ್ರಸ್ಟಿ ಡಾ.ಪ್ರತಿಭಾ ಪಿರೇರ, ಜೆಎಸ್‌ಆರ್‌ಸಿ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿ ನಾರಾಯಣ ಶೆಣೈ ಹಾಗೂ ನಾನು ಕೂಡ ಉಪಸ್ಥಿತರಿರುತ್ತೇನೆ. ಶಿಬಿರದಲ್ಲಿ 150ಕ್ಕೂ ವೈದ್ಯರು, ತಜ್ಞರು ಹಾಜರಿದ್ದು, ಶಿಬಿರಕ್ಕೆ ಆಗಮಿಸುವವರ ಆರೋಗ್ಯ ತಪಾಸಣೆ ನಡೆಸಿ, ಚಿಕಿತ್ಸೆ , ಸಲಹೆಗಳನ್ನು ನೀಡಲಿದ್ದಾರೆ. ಸುಮಾರು 1500 ಮಂದಿ ಸಾರ್ವಜನಿಕರು ಶಿಬಿರದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಉತ್ತರಾದಿ ಮಠದ ಅನಿರುದ್ಧ ಪಾಂಡುರಂಗ, ಪ್ರತಿಮಾ, ಡಾ.ತೇಜಸ್ವಿನಿ, ಡಾ.ಪ್ರತಿಭಾ ಪಿರೇರ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲೆ ಮೊಹಲ್ಲಾದಲ್ಲಿರುವ ಉತ್ತರಾಧಿಮಠದಲ್ಲಿ ಮೇ 31ರಂದು (ನಾಳೆ) ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಮೈಸೂರಿನ ರಾಜಮಾತೆ ಪ್ರಮೋದಾದೇವಿ ಒಡೆಯರ್ ಮಾಹಿತಿ ನೀಡಿದರು.

ವೈದ್ಯರ ನಿರ್ಲಕ್ಷ್ಯ: ರೈತರಿಂದ ಕ್ರಮಕ್ಕೆ ಒತ್ತಾಯ

• **ಹನೂರು:** ವೈದ್ಯರು ಸಮಯ ಪಾಲನೆ ಮಾಡಿದ್ದರೆ ಹಸುವಿನ ಜೀವ ಉಳಿಸಬಹುದಿತ್ತು. ಆದರೆ ನಿರ್ಲಕ್ಷ ವಹಿಸಿದ್ದರಿಂದ ಹಸುವಿನ ಸಾವಿಗೆ ವೈದ್ಯರೇ ಕಾರಣರಾಗಿದ್ದಾರೆ. ಇಂತಹ ನಿರ್ಲಕ್ಷ್ಯ ವೈದ್ಯರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮಾರ್ಟಳ್ಳಿಯ ಪಶು ಚಿಕಿತ್ಸಾಲಯದ ಮುಂದೆ ರೈತರು ಪ್ರತಿಭಟನೆ ನಡೆಸಿದ್ದಾರೆ.

ತಾಲೂಕಿನ ರಾಮಾಪುರ ಹೋಬಳಿ ಮಾಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಂದನ ಪಾಳ್ಯ ಗ್ರಾಮದ ಕೊಳಂದೈಸ್ವಾಮಿ ಎಂಬ ರೈತನ ಹೆಚ್ ಎಫ್ ಹಸುವಿನ ಆರೋಗ್ಯ ಸರಿ ಇಲ್ಲದ ಕಾರಣ ದಿ. ಮೇ 27ರಂದು ಸಾಯಂಕಾಲ 5:30ರ ಸಮಯಕ್ಕೆ ಪಶು ವೈದ್ಯಕೀಯ ಪರಿವೀಕ್ಷಕರಾದ ಕ್ರಿಸ್ಟಿ ಎಂಬುವರಿಗೆ ದೂರವಾಣಿ ಕರೆ ಮೂಲಕ ಹಸುವಿನ ಆರೋಗ್ಯ ಸರಿಯಿಲ್ಲದಿರುವ ಬಗ್ಗೆ ಮಾಹಿತಿ ನೀಡಿ ಸ್ಥಳಕ್ಕೆ ಬರಲು ತಿಳಿಸಿದ್ದಾರೆ, ಆದರೆ ವೈದ್ಯರು ಕೊಳ್ಳೇಗಾಲದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಮಾರನೇ ದಿನ ಮೇ 28ರಂದು ಅನೇಕ ಬಾರಿ ದೂರವಾಣಿ ಮಾಡಿದರು ಪಶು ವೈದ್ಯಕೀಯ ಪರೀಕ್ಷಕರಾದ ಕ್ರಿಸ್ಟಿ ರವರು ಕರೆ ಸ್ವೀಕರಿಸಲಿಲ್ಲ, ಮತ್ತೊಬ್ಬ ಪಶುವೈದ್ಯಕೀಯ ಪರಿವೀಕ್ಷಕ ಬಸವರಾಜು ಎಂಬ ಎಂಬುವರಿಗೆ ಅನೇಕ ಬಾರಿ ದೂರವಾಣಿ ಕರೆ ಮಾಡಿದರು ಅವರು ಕೂಡ ಕರೆಯನ್ನು ಸ್ವೀಕರಿಸಲಿಲ್ಲ, ಬಳಿಕ ದಿ. ಮೇ 28ರ ಮಧ್ಯಾಹ್ನದ ವೇಳೆ ಹಸು ವಿಲವಿಲ ಒದ್ದಾಡಿ ಪ್ರಾಣ ಬಿಟ್ಟಿತು ಎಂದು ಆರೋಪಿಸಿದ್ದಾರೆ. ಪಶು ಇಲಾಖೆಯವರು ಸಕಾಲಕ್ಕೆ ಬಂದು ಹಸುವಿಗೆ ಔಷಧೋಪಚಾರ ನೀಡಿದ್ದರೆ ಹಸುವಿನ ಪ್ರಾಣ ಉಳಿಯುತ್ತಿತ್ತು, ಇಂತಹ ಅಮಾನವೀಯ ವೈದ್ಯರ ಮೇಲೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.



ಧರಣಿ ಸ್ಥಳಕ್ಕೆ ಆಗಮಿಸಿದ ಚಾಮರಾಜನಗರ ಜಿಲ್ಲೆ ಪಶು ಸಂಗೋಪನೆ ಇಲಾಖೆಯ ಡಿಡಿ ಮಂಜುನಾಥ್, ಹನೂರು ಪಶುಸಂಗೋಪನೆ ಇಲಾಖೆಯ ಎಡಿ ಶಿವರಾಜ್ ರೈತರ ಎಲ್ಲಾ ಮಾಹಿತಿಯನ್ನು ಪಡೆದುಕೊಂಡು ತುರ್ತಾಗಿ ಅನ್ಯಾಯ ಆಗಿರುವ ರೈತರಿಗೆ ನ್ಯಾಯ ಕೊಡಿಸುವುದಾಗಿ ಭರವಸೆ ನೀಡಿ ಮನವಿ ಸ್ವೀಕರಿಸಿದರು.

ರೈತರು ಶೈಲೇಂದ್ರ,ಅಮೃತರಾಜ್, ದೊಡ್ಡಿಂದುವಾಡಿ ರವಿ,ಪುಟ್ಟಸ್ವಾಮಿ,ಡೇವಿಡ್,ಫ್ರಾನ್ಸಿಸ್, ಪೀಟರ್, ಅಂಥೋನಿ, ಜಪಮಾಲೆ ಮುತ್ತು, ಕೊಳಂದೈಸ್ವಾಮಿ,ಲೂರ್ದುಸ್ವಾಮಿ, ಭಾರತಿ ರಾಜ್, ಬಸವರಾಜು,ಜೋಸೆಫ್, ಸೂಸೈಮಾಣಿಕ್ಯಂ, ರೋಜಾಲಿ, ಸ್ಟೆಲ್ಲಾ ಮೇರಿ,ಸೆಲ್ವ,ಕವಿತಾ ಇದ್ದರು.

ಭಾರತೀಯ ಜೈನ್ ಮಿಲನ್‌ನ ವಲಯರ ಸಮ್ಮೇಳನ

• **ಮೈಸೂರು:** ಭಾರತೀಯಜೈನ್ ಮಿಲನ್‌ನ ವಲಯ-8ರ 20ನೇ ವಲಯ ಸಮ್ಮೇಳನವು ಮೈಸೂರಿನ ಮಾನಸಗಂಗೋತ್ರಿಯ ಸನಟ್ ಹಾಲ್ ನಲ್ಲಿ ಜರುಗಿತು.

ಕಾರ್ಯಕ್ರಮವನ್ನು ರಾಷ್ಟ್ರೀಯ ಕಾರ್ಯಾಧ್ಯಕ್ಷ ವೀರ್ ಧರ್ಮಸ್ಥಳ ಸುರೇಂದ್ರಕುಮಾರ್,ರಾಷ್ಟ್ರೀಯ ಉಪಾಧ್ಯಕ್ಷ ವೀರಾಂಗನಾ ಅನಿತಾ ಸುರೇಂದ್ರ ಕುಮಾರ್, ವಲಯಾಧ್ಯಕ್ಷ ವೀರ್ ಕೆ. ಯುವರಾಜ್ ಭಂಡಾರಿ, ಗೌರವಾಧ್ಯಕ್ಷ ವೀರಾಂಗನಾ ಶೀಲಾ ಅನಂತರಾಜ್, ಪ್ರಧಾನ ಕಾರ್ಯದರ್ಶಿ ವೀರ್‌ರತ್ನರಾಜ್ ಎಂ., ಮಾಜಿ ವಲಯಾಧ್ಯಕ್ಷರಾದ ವೀರ್‌ಎಂ.ಎಸ್. ಮೃತ್ಯುಂಜಯ, ವೀರ್ ಇ.ವಿ. ಅಜ್ಜಪ್ಪ, ವೀರ್ ಜಿ. ಉಮೇಶ್ ಮತ್ತು ವೀರ್ ಪುಷ್ಪರಾಜ್‌ಜೈನ್‌ಅವರ ಉಪಸ್ಥಿತಿಯಲ್ಲಿ ಉದ್ಘಾಟಿಸಲಾಯಿತು. ರಾಷ್ಟ್ರೀಯಕಾರ್ಯಾಧ್ಯಕ್ಷ ವೀರ್ ಧರ್ಮಸ್ಥಳ ಸುರೇಂದ್ರಕುಮಾರ್‌ಅವರು ಸಮಾಜದ ಅಭಿವೃದ್ಧಿಗಾಗಿ ದೃಷ್ಟಿಕೋನಗಳನ್ನು ಮಂಡಿಸಿದರು. ಸಮ್ಮೇಳನದಲ್ಲಿ ಐದು ಮಹತ್ವದ ಉಪನ್ಯಾಸಗಳು ನಡೆದವು. ಸಂಘಟನೆಯಲ್ಲಿ ಯುವಕರ ಪಾತ್ರ ಕುರಿತು ವೀರ್‌ಚಿತ್ತಜಿನೇಂದ್ರ, ಸಮಾಜದ ರಕ್ಷಣೆ ಮತ್ತು ಪರಸ್ಪರ ಸಹಾಯಕ್ಕಾಗಿ ಸಂಘಟನೆಯ ಅಗತ್ಯತೆ ಕುರಿತು ಮಾಳಹರ್ಷೇಂದ್ರ, ಜಿನಭಜನೆಯ ಸಾಮಾಜಿಕ ಪರಿಣಾಮ ಕುರಿತು ವೀರಾಂಗನಾಶ್ವೇತಾಜೈನ್,ಸಂಘಟನೆಯಲ್ಲಿ ರಾಜಕೀಯದ ಪಾತ್ರ ಕುರಿತು ವೀರ್ ಸುದರ್ಶನ ಜೈನ್,ಅಂತಾರಾಷ್ಟ್ರೀಯಮಟ್ಟದಲ್ಲಿಜೈನ್ ಮಿಲನ್' ಕುರಿತು ವೀರ್‌ಎನ್. ಪ್ರಸನ್ನಕುಮಾರ್ ಉಪನ್ಯಾಸ ನೀಡಿದರು. ಈ ಎಲ್ಲಾ ಉಪನ್ಯಾಸಗಳಿಗೆ ವೀರ್ ವಿಲಾಸ್ ಪಾಸಣ್ಣವರ್ ಅವರು ನಿರೂಪಕರಾಗಿ ಕಾರ್ಯನಿರ್ವಹಿಸಿದರು. ಪ್ರತಿ ಉಪನ್ಯಾಸದ ನಂತರ ಪ್ರಶ್ನೋತ್ತರ ಕಾರ್ಯಕ್ರಮಜರುಗಿತು.

ವಲಯಕಾರ್ಯಾಧ್ಯಕ್ಷ ವೀರ್ ಕೆ.ಪ್ರಸನ್ನ ಕುಮಾರ್ ಮಿಲನ್ ನಡೆದು ಬಂದ ದಾರಿ ಬಗ್ಗೆ ಮಾತನಾಡಿದರು. ರಾಷ್ಟ್ರೀಯ ಉಪಾಧ್ಯಕ್ಷರಾದ ವೀರಾಂಗನಅನಿತಾ ಸುರೇಂದ್ರಕುಮಾರ್ ಅವರು ಸಮಾರೋಪ ಭಾಷಣ ಮಾಡಿದರು. ಕೊನೆಯಲ್ಲಿ ವಿಭಾಗವಾರು ಮತ್ತು ವಲಯ ಮಟ್ಟದಲ್ಲಿ ವಿಶೇಷ ಸೇವೆ ಮಾಡಿದ ಜೈನ ಮಿಲನ್‌ಗಳಿಗೆ ಪ್ರಶಸ್ತಿಗಳನ್ನು ವಿತರಿಸಲಾಯಿತು.

ಪೋಷಕರಿಗೆ ಸರ್ಕಾರಿ ಶಾಲೆಯ ಮಹತ್ವ ಮನವರಿಕೆ ಮಾಡುತ್ತಿರುವ ಶಿಕ್ಷಣ ಇಲಾಖೆ

ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ

• **ಎಚ್ ಡಿ ಕೋಟೆ:** ಇದೇ ಜೂನ್ 1ರಿಂದ ಶಾಲೆಗಳು ಆರಂಭವಾಗಲಿದ್ದು, ಕಳೆದ ಒಂದು ವಾರದಿಂದ 2026-27ನೇ ಸಾಲಿನ ಹೊಸ ವಿದ್ಯಾರ್ಥಿಗಳ ದಾಖಲಾತಿ ಆಂದೋಲನವನ್ನು ಶಾಲಾ ಶಿಕ್ಷಕರು ಭರದಿಂದ ನಡೆಸುತ್ತಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ, ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಿಬ್ಬಂದಿ, ಶಾಲೆಯ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಿದರು.

ಗ್ರಾಮಗಳ ಪ್ರಮುಖ ರಸ್ತೆ, ವೃತ್ತಗಳಲ್ಲಿ ಶಾಲಾ ಶಿಕ್ಷಕರು ಆಟೋಗಳಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಿ ಆಂದೋಲನ ನಡೆಸಿದರು. ಸಾರ್ವಜನಿಕರಿಗೆ ಹಾಗೂ ಪೋಷಕರಿಗೆ ಕರಪತ್ರ ಹಂಚುವ ಮೂಲಕ ಸರ್ಕಾರಿ ಶಾಲೆಯ ಮಹತ್ವವನ್ನು ಮನವರಿಕೆ ಮಾಡಿಕೊಡಲಾಯಿತು.

ಗ್ರಾಮೀಣ ಭಾಗದ ಪ್ರತಿಯೊಂದು ಮನೆಗೂ ಮಾಹಿತಿ ತಲುಪಿಸುವ ನಿಟ್ಟಿನಲ್ಲಿ ಆಟೋ ಮೂಲಕ ಧ್ವನಿವರ್ಧಕ (ಮೈಕ್) ಬಳಸಿ ಪ್ರಚಾರ ಕೈಗೊಳ್ಳಲಾಯಿತು. ಈ ವೇಳೆ ಶಾಲೆಯ ಸವಲತ್ತು ಮತ್ತು ವಿಶೇಷತೆಗಳನ್ನು ಒಳಗೊಂಡ ಆಕರ್ಷಕ ಪೋಸ್ಟರ್ ಬಿಡುಗಡೆ ಮಾಡಿ, ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಿದರು.



ಮೂಲ ಸೌಕರ್ಯಕ್ಕೆ ಕಲ್ಪಿಸಿ: ಇಲಾಖೆಯ ಸೂಚನೆಯಂತೆ 2026-27ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ತಿಳಿಸಿದ್ದಾರೆ. ಬೇಸಿಗೆಯಾಗಿರುವುದರಿಂದ ಶಾಲಾ ಕೇಂದ್ರಗಳಲ್ಲಿ ವಿದ್ಯುತ್ ಮತ್ತು ಫ್ಯಾನ್‌ಗಳ ಕೆಟ್ಟಿದ್ದರೆ ಕೂಡಲೇ ದುರಸ್ತಿ ಮಾಡಿಕೊಳ್ಳುವಂತೆ ಶಿಕ್ಷಕರಿಗೆ ತಿಳಿಸಿದ್ದು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗೆ ಮೊದಲ ಆದ್ಯತೆ ನೀಡುವಂತೆ ಸೂಚಿಸಿದ್ದಾರೆ. ಶೌಚಾಲಯಗಳನ್ನು ಸ್ವಚ್ಛಗೊಳಿಸಿ ನೀರಿನ ವ್ಯವಸ್ಥೆಯೂ ಮಾಡಬೇಕು ಎಂದು ತಿಳಿಸಿದ್ದಾರೆ.

ಈಗಾಗಲೇ ಎಲ್ಲಾ ಶಾಲೆಗಳಿಗೆ ಸರ್ಕಾರದಿಂದ ನೀಡಿರುವ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರವನ್ನು ಎಲ್ಲಾ ಶಾಲೆಗಳಿಗೂ ತಲುಪಿಸಲಾಗಿದ್ದು ಜೂನ್ 1ರಂದು ಎಲ್ಲರೂ ಪೋಷಕರ ಸಭೆಯನ್ನು ಕರೆದು, ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಮತ್ತು ಎಸ್.ಡಿ.ಎಂ.ಸಿಯವರ ಮೂಲಕ ವಿತರಿಸಬೇಕು ಎಂದು ತಿಳಿಸಿದ್ದಾರೆ.

ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ. ನರಹರಿ ಬಾಬು ಅಭಿಪ್ರಾಯ

ವಚನ ಸಾಹಿತ್ಯ ಆಧ್ಯಾತ್ಮಿಕ, ಸಾಮಾಜಿಕ ಪರಂಪರೆ

• **ಮೈಸೂರು:** ವಚನಸಾಹಿತ್ಯವು ಕನ್ನಡದ ಅಮೂಲ್ಯ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಪರಂಪರೆಯಾಗಿದ್ದು, ಸಮಾಜದ ನೈತಿಕ ಮೌಲ್ಯಗಳನ್ನು ಬಲಪಡಿಸುವ ಶಕ್ತಿಯನ್ನು ಹೊಂದಿದೆ ಎಂದು ಸದ್ವಿದ್ಯಾ ಸಂಸ್ಥೆಯ ಗೌರವ ಅಧ್ಯಕ್ಷ ಪ್ರೊ. ಎಂ.ಎಸ್.ಕೆ. ನರಹರಿ ಬಾಬು ಹೇಳಿದರು.

ಶುಕ್ರವಾರ ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಕನ್ನಡ ವಿಭಾಗದ ವತಿಯಿಂದ ''ವಚನ ಸಾಹಿತ್ಯ-ಪ್ರಸ್ತುತತೆ'' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾತನಾಡಿ, 12ನೇ ಶತಮಾನದಲ್ಲಿ ಉದ್ಭವಿಸಿದ ವಚನ ಚಳವಳಿಯು ಸಮಾಜದಲ್ಲಿ ಸಮಾನತೆ, ಶ್ರಮದ ಗೌರವ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸಾರಿದ ಕ್ರಾಂತಿಕಾರಿ ಚಳವಳಿಯಾಗಿತ್ತು ಎಂದು ತಿಳಿಸಿದರು. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮೇಶ್ವರ ಮೊದಲಾದ ವಚನಕಾರರ ಚಿಂತನೆಗಳು ಇಂದಿನ ಯುವಜನತೆಗೆ ಮಾರ್ಗದರ್ಶಕವಾಗಿದ್ದು, ಬದುಕಿನ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ ಎಂದರು.




ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪನಿರ್ದೇಶಕ ಮ.ಗು. ಸದಾನಂದಯ್ಯ ಮಾತನಾಡಿ, ವಚನ ಸಾಹಿತ್ಯವು ಕೇವಲ ಭಕ್ತಿಯ ಅಭಿವ್ಯಕ್ತಿ ಮಾತ್ರವಲ್ಲದೆ, ಸಮಾನತೆ, ಮಾನವೀಯತೆ, ಮಹಿಳಾ ಸಬಲೀಕರಣ ಹಾಗೂ ಸಾಮಾಜಿಕ ಜಾಗೃತಿಯ ಸಂದೇಶವನ್ನು ಸಾರಿದ ಮಹತ್ವದ ಸಾಹಿತ್ಯ ಚಳವಳಿಯಾಗಿದೆ ಎಂದು ಹೇಳಿದರು. ಇಂದಿನ ಯಾಂತ್ರಿಕ ಜೀವನದಲ್ಲಿ ಮಾನವೀಯ ಮೌಲ್ಯಗಳು ಕುಗ್ಗುತ್ತಿರುವ ಸಂದರ್ಭದಲ್ಲಿ ವಚನಗಳ ಅಧ್ಯಯನ ಮತ್ತು ಅನುಸರಣೆ ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.

ಸಂಸ್ಥೆಯಗೌರವಉಪಾಧ್ಯಕ್ಷರಾದಎಸ್.ಬಾಲಾಜಿ, ಡಾ. ಮಂಜುನಾಥ್ ಭಟ್ ಹಾಗೂ ಬಿ.ವಿ.ಕೃಷ್ಣ, ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀವಿದ್ಯಾ ಟಿ.ಎನ್, ಕನ್ನಡ ವಿಭಾಗದ ಉಪನ್ಯಾಸಕರಾದ ಶೈಲಜಾ ಎಂ, ಉಪ ಪ್ರಾಂಶುಪಾಲರಾದ ಜಿ. ಕೆ. ಇಂದುಮತಿ ಉಪಸ್ಥಿತರಿದ್ದರು.

ಕಿರುಸುದ್ದಿ

ಕೃಷ್ಣರಾಜ ಒಡೆಯರ್ ಜಯಂತಿ ಅದ್ದೂರಿ ಆಚರಣೆಗೆ ಮನವಿ



ಮಂಡ್ಯ: ಮೈಸೂರು ಸಂಸ್ಥಾನದ ಆಡಳಿತಾವಧಿಯಲ್ಲಿ ಹೆಚ್ಚು ಜನಾನುರಾಗಿಯಾಗಿ ಜನಪರ ಆಡಳಿತ ನೀಡಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನವನ್ನು ಸಾರ್ವತ್ರಿಕವಾಗಿ ವಿಜೃಂಭಣೆಯಿಂದ ಆಚರಿಸುವಂತೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಮನವಿ ಮಾಡಿದರು. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕರುನಾಡು ಕಂಡ ಅತ್ಯುತ್ತಮ ಆಡಳಿತಗಾರ ರಾಜರ್ಷಿ ಬಿರುದಾಂಕಿತರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಶಿಕ್ಷಣ, ಆರೋಗ್ಯ, ನೀರಾವರಿ, ಕೃಷಿ, ಕೈಗಾರಿಕೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ಅಗಣಿತ ಸೇವೆ ಸಲ್ಲಿಸಿ, ಹಿಂದುಳಿದ ವರ್ಗಕ್ಕೆ ಸಾಮಾಜಿಕ ನ್ಯಾಯ ನೀಡುವ ಮೂಲಕ ಗೆಜ್ಜೆಪೂಜೆಯಂತಹ ಅನಿಷ್ಟ ಪದ್ಧತಿಗಳನ್ನು ರದ್ದುಗೊಳಿಸಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದ ಮೇರು ಆಡಳಿತಗಾರ ಎಂದು ಬಣ್ಣಿಸಿದರು. ನಾಲ್ವಡಿ ಅವರ ದೂರದೃಷ್ಟಿಯಿಂದ ಕನ್ನಂಬಾಡಿ ಜಲಾಶಯ, ಮೈಷುಗರ್ ಕಾರ್ಖಾನೆ, ಶಿಂಷಾ ಜಲವಿದ್ಯುದಾಗಾರ ಸೇರಿದಂತೆ ಸಾವಿರಾರು ಸಾರ್ವಜನಿಕ ಸೇವಾ ಕ್ಷೇತ್ರಗಳು ಸ್ಥಾಪಸಲ್ಪಟ್ಟಿವೆ. ಇಂತಹ ಮೇರು ಆಡಳಿತಗಾರನ ಜನ್ಮ ದಿನವನ್ನು ಮಂಡ್ಯ ಜಿಲ್ಲಾಡಳಿತ, ಶಾಲಾ-ಕಾಲೇಜು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಕನಿಷ್ಠ ಒಂದು ಗಂಟೆಗಳ ಕಾಲ ಉಪನ್ಯಾಸ ನಡೆಸುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದು ಒತ್ತಾಯಿಸಿದರು. ಟ್ರಸ್ಟ್‌ನ ಪದಾಧಿಕಾರಿಗಳಾದ ಜಗದೀಶ್ ಕೆ.ಬಿ., ದೇವೇಗೌಡ ಬಿ.ಎಂ., ನಾಗರಾಜು, ದ.ಕೋ. ಹಳ್ಳಿಚಂದ್ರಶೇಖರ್, ಶಕುಂತಲಾ ಗೋಷ್ಠಿಯಲ್ಲಿದ್ದರು.

ಮನೆಗೆ ಬೆಂಕಿ



ಪಾಂಡವಪುರ: ಬೆಂಕಿ ಅವಘಡ ಉಂಟಾಗಿ ಮನೆಯೊಂದರಲ್ಲಿನ ವಸ್ತುಗಳು ಬೆಂಕಿಗಾಹುತಿಯಾಗಿರುವ ಘಟನೆ ತಾಲೂಕಿನ ಹರವು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಮಹದೇವ ಬಿನ್ ಕಜ್ಜಿ ಜವರಯ್ಯರ ಮನೆಯಲ್ಲಿ ಈ ದುರ್ಘಟನೆ ನಡೆದಿದ್ದು, ಘಟನೆಯಿಂದಾಗಿ ಮನೆಯ ಒಳಭಾಗದಲ್ಲಿ ಭಾಗಶಃ ಹಾನಿಯಾಗಿದೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದವರು ಆಗಮಿಸಿ ಬೆಂಕಿ ನಂದಿಸಲು ಯತ್ನಿಸಿದ್ದಾರೆ. ಬೆಂಕಿ ವ್ಯಾಪಿಸಿದ್ದರಿಂದ ಮನೆಯಲ್ಲಿನ ಬಾಗಿಲು, ತೆಂಗಿನ ಕಾಯಿಗಳು, ಬಟ್ಟೆ ಬರೆಗಳು ಸೇರಿದಂತೆ ಇತರೆ ದಿನನಿತ್ಯ ಬಳಸುವ ವಸ್ತುಗಳು ನಷ್ಟಕ್ಕೊಳಗಾಗಿವೆ ಎಂದು ತಿಳಿದುಬಂದಿದೆ.

ಶಾಲಾ ಪ್ರಾರಂಭೋತ್ಸವ: ಹೂ ನೀಡಿ ವಿದ್ಯಾರ್ಥಿಗಳಿಗೆ ಸ್ವಾಗತ

ಮಳವಳ್ಳಿ: ತಾಲೂಕಿನ ಗುಳಘಟ್ಟ ಸರ್ಕಾರಿ ಶಾಲೆಗೆ ಆಗಮಿಸುವ ವಿದ್ಯಾರ್ಥಿಗಳನ್ನು ಗ್ರಾಮದ ಮುಖಂಡರು ಮತ್ತು ಯುವಕರು ಮಂಗಳ ವಾದ್ಯದೊಂದಿಗೆ ಗ್ರಾಮದಲ್ಲಿ ಮೆರವಣಿಗೆ ನಡೆಸಿ ದಾರಿ ಉದ್ದಕ್ಕೂ ಹೂ ಮಳೆ ಸುರಿಸಿ ಖಾಸಗಿ ಶಾಲೆ ಬಿಟ್ಟು ಸರ್ಕಾರಿ ಶಾಲೆಗೆ ಆಗಮಿಸುವ ವಿದ್ಯಾರ್ಥಿಗಳಿಗೆ ಸ್ವಾಗತ ಎಂಬ ಘೋಷಣೆಯೊಂದಿಗೆ ಗೌರವ ಪೂರ್ವಕವಾಗಿ ಶಾಲೆಗೆ ಬರಮಾಡಿಕೊಂಡರು. ಸರ್ಕಾರಿ ಶಾಲೆ ಮಕ್ಕಳ ಕೊರತೆಯಿಂದ ಮುಚ್ಚುವ ಸ್ಥಿತಿಗೆ ತಲುಪುತ್ತಿರುವುದನ್ನು ಅರಿತ ಗುಳಘಟ್ಟ ಗ್ರಾಮದ ಯುವಕರು ಶಾಲಾ ಅಭಿವೃದ್ಧಿ ಸಮಿತಿಯನ್ನು ರಚಿಸಿ ಸ್ವಂತ ಹಣದಲ್ಲಿಯೇ ಎಲ್‌ಕೆಜಿ ಯುಕೆಜಿ ಪ್ರಾರಂಭಿಸಿ ಶಾಲಾ ಪ್ರಾರಂಭೋತ್ಸವವನ್ನು ವಿದ್ಯಾರ್ಥಿಗಳಿಗೆ ಹೂಗುಚ್ಚ ನೀಡುವಿಕೆ ಮೆರವಣಿಗೆ ಹಾಗೂ ಸಿಹಿ ಹಂಚಿ ವಿಭಿನ್ನರೀತಿಯಲ್ಲಿ ಕಾರ್ಯಕ್ರಮ ರೂಪಿಸುವುದರ ಮೂಲಕ ಪೋಷಕರ ಗಮನ ಸರ್ಕಾರಿ ಶಾಲೆಯತ್ತ ಬರುವಂತೆ ಮಾಡಿದರು. ನಿವೃತ್ತ ಪ್ರಾಂಶುಪಾಲ ಎಂ.ಎನ್ ಕೃಷ್ಣ ಮಾತನಾಡಿ, ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಲು ಸರ್ಕಾರಿ ಶಾಲೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಮಾಜದ ಭವಿಷ್ಯದ ದೃಷ್ಟಿಯಿಂದ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವುದು ಅನಿವಾರ್ಯವಾಗಿದೆ ಎಂದರು.



ಮಂಡ್ಯ ತಾಲೂಕಿನ ಪಣಕನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಟಿ.ಪಿ. ರೇವಣ್ಣ ಅವರು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷರಾಗಿ ರೇವಣ್ಣ ಆಯ್ಕೆ

ಮಂಡ್ಯ: ತಾಲೂಕಿನ ಪಣಕನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಟಿ.ಪಿ. ರೇವಣ್ಣ ಅವರು ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಅಧ್ಯಕ್ಷರಾಗಿದ್ದ ನಾಗರಾಜು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಒಟ್ಟು 11 ಮಂದಿ ಸದಸ್ಯರನ್ನೊಳಗೊಂಡ ಸಂಘದಲ್ಲಿ ಟಿ.ಪಿ. ರೇವಣ್ಣ ಅವರನ್ನೊರತುಪಡಿಸಿದಂತೆ ಉಳಿದ ಯಾವುದೇ ನಿರ್ದೇಶಕರು ನಾಮಪತ್ರ ಸಲ್ಲಿಸದ ಕಾರಣ ಟಿ.ಪಿ. ರೇವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹಾಗೂ ಸಂಘದ ಸಿಇಒ ತಿಲಕೇಶ್ ಘೋಷಿಸಿದರು.

ನೂತನ ಅಧ್ಯಕ್ಷ ಟಿ.ಪಿ ರೇವಣ್ಣ ಮಾತನಾಡಿ, ಸಂಘದ ಎಲ್ಲಾ ನಿರ್ದೇಶಕರು ಸೊಸೈಟಿಯ ಅಧ್ಯಕ್ಷರಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ನಿರ್ದೇಶಕರ ಸಹಕಾರ ಮತ್ತು ಬೆಂಬಲದೊಂದಿಗೆ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸೊಸೈಟಿ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು. ಸಂಘದ ಉಪಾಧ್ಯಕ್ಷೆ ಲತಾ, ನಿರ್ದೇಶಕರುಗಳಾದ ವರದೇಗೌಡ, ಕೆ.ಕೆ. ರಾಜು, ಪುಟ್ಟಮ್ಮ, ಬಸವರಾಜು, ನವೀನ್ ಕುಮಾರ್, ರವಿ, ಸಿಂಗ್ರಯ್ಯ, ವೆಂಕಟರಾಮ, ಗ್ರಾಮದ ಮುಖಂಡರುಗಳಾದ ಟಿ. ಶಂಕರೇಗೌಡ, ರಾಜು, ರೇವಣ್ಣ, ಟಿ.ಆರ್. ನವೀನ್‌ಕುಮಾರ್, ಗೋಪಾಲ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರುಗಳಾದ ಲೋಕೇಶ್, ಮಂಜು, ಕುಮಾರ ಅಭಿನಂದಿಸಿದರು.



ಶ್ರೀರಂಗಪಟ್ಟಣದಲ್ಲಿ ದಿ.ನಟ ಅಂಬರೀಶ್ ಅವರ 74 ನೇ ವರ್ಷದ ಹುಟ್ಟುಹಬ್ಬವನ್ನು ಅಭಿಮಾನಿಗಳ ಸಂಘದ ವತಿಯಿಂದ ಸಂಭ್ರಮದಿಂದ ಆಚರಣೆ ಮಾಡಲಾಯಿತು.


ಖಾಸಗಿ ಕಾರ್ಖಾನೆಯೊಂದಿಗೆ ಶಾಮೀಲಾಗಿ ಮೈಷುಗರ್ ಬಗ್ಗೆ ಅಪಪ್ರಚಾರ: ಅಧ್ಯಕ್ಷ ಗಂಗಾಧರ ಹೇಳಿಕೆ

ಅಭಿವೃದ್ಧಿಯ ಬಗ್ಗೆ ಮುಕ್ತ ಚರ್ಚೆಗೆ ಸಿದ್ಧ

ಮಂಡ್ಯ: ಖಾಸಗಿ ಸಕ್ಕರೆ ಕಾರ್ಖಾನೆಗಳ ಜತೆ ಶಾಮೀಲಾಗಿರುವ ಕಿಡಿಗೇಡಿಗಳು ಮೈಷುಗರ್ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಮೈಷುಗರ್ ಕಾರ್ಖಾನೆ ಸುಸ್ಥಿತಿಯಲ್ಲಿದ್ದು, ಅಭಿವೃದ್ಧಿಯ ಬಗ್ಗೆ ಮುಕ್ತ ಚರ್ಚೆಗೆ ಸಿದ್ಧವಾಗಿದ್ದೇನೆ ಎಂದು ಅಧ್ಯಕ್ಷ ಸಿ.ಡಿ.ಗಂಗಾಧರ ಹೇಳಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ ಮೇ 7 ಮತ್ತು 23ರಂದು ರೈತ ಪ್ರತಿನಿಧಿಗಳ ಸಭೆ ನಡೆಸಿ ಕಾರ್ಖಾನೆಯ ಯಶಸ್ಸಿನ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಈ ಸಭೆಗಳಲ್ಲಿ ರೈತ ಹಿತರಕ್ಷಣಾ ಸಮಿತಿಯ ಮುಖಂಡರು, ಕಬ್ಬು ಒಪ್ಪಿಗೆದಾರರ ಸಂಘದ ಅಧ್ಯಕ್ಷರು, ಮುಖಂಡರು, ಅಲ್ಲದೆ ಹಲವಾರು ಪ್ರಗತಿಪರ ಮುಖಂಡರು ಸಹ ಸಭೆಯಲ್ಲಿ ಭಾಗವಹಿಸಿ ಅಗತ್ಯ ಸಲಹೆಗಳನ್ನು ನೀಡಿರುತ್ತಾರೆ. ಜತೆಗೆ ಕಂಪನಿಯು ಈ ಎರಡು ವರ್ಷಗಳಲ್ಲಿನ ಆಗು-ಹೋಗುಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿದೆ. ಸಭೆಯಲ್ಲಿ ಭಾಗವಹಿಸಿದ್ದ ಕೆಲ ಸಂಘಟನೆಗಳ ಕಿಡಿಗೇಡಿಗಳು ಮೈಷುಗರ್ ಅಭಿವೃದ್ಧಿಯನ್ನು ಸಹಿಸದೆ ಖಾಸಗಿ ಕಾರ್ಖಾನೆಯೊಂದಿಗೆ ಶಾಮೀಲಾಗಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ತಿಳಿಸಿದರು.

5.90 ಲಕ್ಷ ಮೆಟ್ರಿಕ್ ಟನ್ ಕಬ್ಬು ಒಪ್ಪಿಗೆ: 2026-27ನೇ ಸಾಲಿನಲ್ಲಿ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ನಂಬಿ ಮಂಡ್ಯ ತಾಲ್ಲೂಕಿನಾದ್ಯಂತ ಸುಮಾರು 5.90 ಲಕ್ಷ ಮೆ.ಟನ್ ಕಬ್ಬು ಒಪ್ಪಿಗೆಯನ್ನು ರೈತರು ಕರಾರು ಮಾಡಿಕೊಂಡಿರುತ್ತಾರೆ. ಎಲ್ಲರಿಗೂ ಒಪ್ಪಿಗೆ ರಟ್ಟುಗಳನ್ನು ಕೂಡ ಪ್ರಥಮವಾಗಿ ಈ ಎರಡು ವರ್ಷಗಳಿಂದ ನೀಡುತ್ತಿರುತ್ತೇವೆ. ಇಲ್ಲಿಯವರೆಗೂ ಚಾಂಷುಗರ್ ಮತ್ತು ಎನ್.ಎಸ್.ಎಲ್. ಕಾರ್ಖಾನೆಯವರ ಕಬ್ಬು ಒಪ್ಪಿಗೆಯು ಮೈಷುಗರ್ ಕಾರ್ಖಾನೆಗಿಂತ ಹೆಚ್ಚಿರುತ್ತಿತ್ತು. ಆದರೆ, ಈ ಬಾರಿ ಚಾಂಷುಗರ್ ಮತ್ತು ಎನ್.ಎಸ್.ಎಲ್. ಷುಗರ್‌ರವರ ಕಬ್ಬು ಒಪ್ಪಿಗೆಯು ತಲಾ 4 ಲಕ್ಷ ಆಜುಬಾಜಿನಲ್ಲಿದೆ. ಈ ಕಾರ್ಖಾನೆಗಳ ಮೇಲೆ ರೈತರು ಇಟ್ಟಿರುವ ನಂಬಿಕೆಗಿಂತ ರೈತರು ನಮ್ಮ ಕಾರ್ಖಾನೆಯ ಮೇಲೆ ಹೆಚ್ಚಿನ ನಂಬಿಕೆಯನ್ನು ಇಟ್ಟಿರುವುದನ್ನು ಮೈಷುಗರ್ ಕಾರ್ಖಾನೆಯು ಉಳಿಸಿಕೊಂಡಿದೆ ಎಂದರು.



ಇ-ಟೆಂಡರ್ ಕರೆದೇ ಅನುಪಯುಕ್ತ ವಸ್ತುಗಳ ಮಾರಾಟ

ಮೇ 7 ಮತ್ತು 23 ರಂದು ನಡೆದ ಸಭೆಗಳಲ್ಲಿ ಅನುಪಯುಕ್ತ ವಸ್ತುಗಳ ಮಾರಾಟದ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗಿದೆ. ಸಭೆಯಲ್ಲಿ ಹಾಜರಿದ್ದ ರೈತ ಮುಖಂಡರು ಹಾಗೂ ರೈತ ಹಿತಾರಕ್ಷಣಾ ಸಮಿತಿಯ ಮುಖಂಡರು ಸಹ ಕಾರ್ಖಾನೆಯ ಎಲ್ಲ ಬೆಳವಣಿಗೆಯ ಬಗ್ಗೆ ಸಹಮತವನ್ನು ನೀಡಿ ಒಪ್ಪಿರುತ್ತಾರೆ. ಆದರೂ ಕೆಲ ಕಿಡಿಗೇಡಿಗಳು ಗುಜರಿ ಲೆಕ್ಕದಲ್ಲಿ ಅನುಪಯುಕ್ತ ವಸ್ತಗಳನ್ನು ಹಾಗೂ ಮಿಲ್ಲನ್ನು ಮಾರಾಟ ಮಾಡಲಾಗುತ್ತಿದೆ ಎಂದು ಅಪಪ್ರಚಾರ ಮಾಡಿರುತ್ತಾರೆ. ಆದರೆ, ಗುಜರಿ ಲೆಕ್ಕದಲ್ಲಿ ಮಾರಾಟ ಮಾಡಿದ್ದರೆ ಪ್ರಸ್ತುತ ನಿಗದಿಪಡಿಸಿರುವ ದರದಲ್ಲಿ ಅರ್ಧದಷ್ಟು ಹಣ ಕೂಡ ಕಂಪನಿಗೆ ಬರುವುದಿಲ್ಲ.ಕೆ.ಪಿ.ಟಿ.ಟಿ. ಕಾಯ್ದೆಯನುಸಾರ ಟೆಂಡರ್ ನಿಯಮಾವಳಿಯನ್ನು ಮಾಡಿ ಹಾಗೂ ಪ್ರಚಲಿತ ದಿನಪತ್ರಿಕೆಗಳಲ್ಲಿ ಪ್ರಚುರ ಮಾಡಿಸಿ ದೇಶಾದ್ಯಂತ ಟೆಂಡರ್‌ನಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟು ಪಾರದರ್ಶಕ ನಿಯಮಾನುಸಾರ ಉತ್ತಮ ದರಕ್ಕೆ ಇ-ಟೆಂಡರ್ ಕರೆದೇ ಅನುಪಯುಕ್ತ ವಸ್ತುಗಳನ್ನು ಮಿಲ್ ಲೆಕ್ಕದಲ್ಲಿಯೇ ಮಾರಾಟ ಮಾಡಲಾಗಿದೆ. ಒಟ್ಟು 4.10 ಕೋಟಿ ರೂ. ಕಾರ್ಖಾನೆಗೆ ಬಂದಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಅಜ್ಜಹಳ್ಳಿ ರಾಮಕೃಷ್ಣ, ದೇಶಹಳ್ಳಿ ಮೋಹನ್ ಕುಮಾರ್, ಉದಯ್ ಕುಮಾರ್ ಹಾಜರಿದ್ದರು.

50 ರೂ. ಪ್ರೋತ್ಸಾಹ ಧನ ವಿತರಣೆ

ಕಬ್ಬು ಸಾಗಣೆದಾರರಿಗೆ ಸರ್ಕಾರ ಘೋಷಿಸಿರುವ 50 ರೂ. ಪ್ರೋತ್ಸಾಹ ಧನವನ್ನು ಮುಂದಿನ ವಾರ ರೈತರ ಖಾತೆಗಳಿಗೆ ಜಮೆ ಮಾಡಲಾಗುವುದು. ಕಾರ್ಖಾನೆ ವತಿಯಿಂದ ನೀಡಬೇಕಾಗಿರುವ ಇನ್ನುಳಿದ 50 ರೂ.ಗಳನ್ನು ಪ್ರಸಕ್ತ ಹಂಗಾಮಿನಲ್ಲಿ ನೀಡಲಾಗುವುದು ಎಂದು ಸಿ.ಡಿ.ಗಂಗಾಧರ್ ಭರವಸೆ ನೀಡಿದರು. ಖಾಸಗಿ ಸಕ್ಕರೆ ಕಾರ್ಖಾನೆಯವರು ಬಾಕಿ ಹಣವನ್ನು ಇನ್ನೂ ನೀಡಿಲ್ಲ. ಕಾರ್ಖಾನೆ ವತಿಯಿಂದ ನೀಡಬೇಕಾಗಿರುವ 50 ರೂ.ಗಳ ನೀಡುವುದಿಲ್ಲ ಎಂದು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಆದರೆ, ನಮ್ಮ ಕಾರ್ಖಾನೆ ನುಡಿದಂತೆ ನಡೆದುಕೊಂಡಿದ್ದೇವೆ.



ಜುಲೈ ಮೊದಲ ವಾರದಿಂದ ಆರಂಭ

2026-27ನೇ ಸಾಲಿನ ಕಬ್ಬು ನುರಿಸುವ ಕಾರ್ಯವನ್ನು ಜುಲೈ ಮೊದಲ ವಾರದಿಂದ ಆರಂಭಿಸಲಾಗುವುದು. ಬರುವ ಜೂ.25ರಂದು ಕಾರ್ಖಾನೆಯ ಬಾಯ್ಲರ್‌ಗೆ ಅಗ್ನಿ ಸ್ಪರ್ಶ ಮಾಡಲಾಗುವುದು. ಮೈಷುಗರ್ ಕಾರ್ಖಾನೆಯು ಸರ್ಕಾರಿ ಸ್ವಾಮ್ಯದ ಏಕೈಕ ಕಾರ್ಖಾನೆಯಾಗಿದ್ದು, ರೈತರು ಕಿಡಿಗೇಡಿಗಳ ಅಪಪ್ರಚಾರಕ್ಕೆ ಕಿವಿಗೊಡದೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ಮೂಲಕ ಕಾರ್ಖಾನೆಯನ್ನು ಉಳಿಸುವಂತೆ ಸಿ.ಡಿ.ಗಂಗಾಧರ್ ಮನವಿ ಮಾಡಿದರು.

ಲ್ಯಾಪ್‌ಟಾಪ್ ವಿತರಣೆ

ಪಾಂಡವಪುರ: ಸಮಾಜ ಸೇವಕ, ವಕೀಲ, ಕಾಲಭೈರವೇಶ್ವರ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಅರವಿಂದ ರಾಘವನ್ ಅವರಿಂದ ಬೀರಶೆಟ್ಟಹಳ್ಳಿ ಡೇರಿಗೆ 20 ಮ್ಯಾಟ್‌ಗಳನ್ನು ಖರೀದಿಸಲು ಧನಸಹಾಯ ಹಾಗೂ ಉನ್ನತ ವಿದ್ಯಾಭ್ಯಾಸ ಕೈಗೊಳ್ಳಲು ವಿದ್ಯಾರ್ಥಿ ಎಚ್. ಭಾರ್ಗವ್‌ಗೆ ಬಿಜೆಪಿ ಮುಖಂಡ ಎಚ್.ಎನ್. ಮಂಜುನಾಥ್ ಹಾಗೂ ಬೀರಶೆಟ್ಟ ಹಳ್ಳಿ ಡೇರಿ ಮಾಜಿ ಅಧ್ಯಕ್ಷ ಮಧು.ಬಿ.ಗೌಡ ನೇತೃತ್ವದಲ್ಲಿ ಲ್ಯಾಪ್‌ಟಾಪ್ ವಿತರಿಸಲಾಯಿತು.

ಕಳೆದ ಹಲವಾರು ದಿನಗಳ ಹಿಂದೆ ಬೀರಶೆಟ್ಟಹಳ್ಳಿ ಗ್ರಾಮದಲ್ಲಿನ ಅಂಗನವಾಡಿ ಕೇಂದ್ರ ನವೀಕರಣದ ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವೇಳೆ ಸಮಾಜ ಸೇವಕ ಅರವಿಂದ ರಾಘವನ್ ಅವರಿಗೆಬೀರಶೆಟ್ಟಹಳ್ಳಿಡೇರಿಅಧ್ಯಕ್ಷಪಿ.ದಿವಾಕರ ಹಾಗೂ ಎಲ್ಲಾ ನಿರ್ದೇಶಕರು ಮನವಿ ಪತ್ರ ಸಲ್ಲಿಸಿ ಡೇರಿಗೆ ಅಗತ್ಯವಾಗಿ ಬೇಕಾಗಿರುವ ಮ್ಯಾಟ್ ಗಳನ್ನು ಖರೀದಿಸಲು ಸಹಾಯಧನ ಒದಗಿಸುವಂತೆ ಕೋರಿಕೊಂಡಿದ್ದರು. ಇದಕ್ಕೆ ಸ್ಪಂದನೆ ವ್ಯಕ್ತಪಡಿಸಿದ ಅರವಿಂದ ರಾಘವನ್ ಅವರು ಡೇರಿಗೆ ಧನ ಸಹಾಯ ನೀಡಲು ಒಪ್ಪಿಗೆ ಸೂಚಿಸಿ ಬಿಜೆಪಿ ಮುಖಂಡ ಎಚ್.ಎನ್. ಮಂಜುನಾಥ್ ಹಾಗೂ ಬೀರಶೆಟ್ಟಹಳ್ಳಿ ಡೇರಿ ಮಾಜಿ ಅಧ್ಯಕ್ಷ ಮಧು ಬಿ.ಗೌಡ ಅವರ ಮೂಲಕ ಕೊಡಮಾಡಲಾದ ಧನಸಹಾಯವನ್ನು ಡೇರಿ ಅಧ್ಯಕ್ಷರಿಗೆ ಹಸ್ತಾಂತರ ಮಾಡಲಾಯಿತು. ಇದೇ ವೇಳೆ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ಎಚ್.ಭಾರ್ಗವ್ ಅವರಿಗೂ ಲ್ಯಾಪ್ ಟಾಪ್‌ನ್ನು ಕೂಡ ಹಸ್ತಾಂತರಿಸಲಾಯಿತು.

ಯಜಮಾನ್ ಸಿದ್ದೇಗೌಡ, ಬಿಜೆಪಿ ಟೌನ್ ಅಧ್ಯಕ್ಷ ಎನ್.ಸೋಮಶೇಖರ್, ಮುಖಂಡ ಆರ್.ಚನ್ನಕೇಶವ, ಖರಡ್ಯಾ ಶಿವಣ್ಣ, ಡೇರಿ ಅಧ್ಯಕ್ಷ ಪಿ.ದಿವಾಕರ, ಉಪಾಧ್ಯಕ್ಷ ಪಿ.ಜಿ.ರಮೇಶ, ನಿರ್ದೇಶಕ ಸಿ.ಮಧುಸೂದನ್, ವಿ.ಸುರೇಶ್, ಪಿ.ವಿಶ್ವನಾಥ್, ಆನಂದ, ಸುಜಾತಾ, ಪ್ರತಿಭಾ, ಸುನಂದಾ, ಲಕ್ಷ್ಮಮ್ಮ, ನಿರ್ದೇಶಕ ಎಂ.ಶಿವಣ್ಣ, ಪ್ರಭಾರ ಕಾರ್ಯದರ್ಶಿ ಎಸ್.ಗುರುಪ್ರಸಾದ್, ಹಾಲು ಪರೀಕ್ಷಕ ಬಿ.ಕೆ.ಅಖಿಲೇಶ್, ಎನ್.ಆರ್. ಪ್ರಶಾಂತ್, ಎಂ.ಹರ್ಷ ಇದ್ದರು.



ಪಾಂಡವಪುರ ಕಾಲಭೈರವೇಶ್ವರ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಅರವಿಂದ ರಾಘವನ್ ಅವರಿಂದ ಬೀರಶೆಟ್ಟಹಳ್ಳಿ ಡೇರಿಗೆ ಮ್ಯಾಟ್‌ಗಳನ್ನು ಖರೀದಿಸಲು ಧನಸಹಾಯ ಮಾಡಲಾಯಿತು.

ವಿಪ ಸದಸ್ಯರಾಗಿ ತಿಪ್ಪಣ್ಣ ಕಮಕನೂರ ಮುಂದುವರಿಸಿ

ಮಂಡ್ಯ: ಕಲ್ಯಾಣ ಕರ್ನಾಟಕ ಭಾಗದ ಏಕೈಕ ಗಂಗಾಮತಸ್ಥ ಸಮಾಜದ ಮುಖಂಡರಾದ ತಿಪ್ಪಣ್ಣ ಕಮಕನೂರ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರ ಮುಂದುವರಿಸಬೇಕೆಂದು ಜಿಲ್ಲಾ ಗಂಗಾಮತಸ್ಥರ (ಬೆಸ್ತರ್) ಸಂಘದ ಜಿಲ್ಲಾ ಅಧ್ಯಕ್ಷ ಎಸ್.ರಮೇಶ್ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯದಲ್ಲಿ ಬೆಸ್ತರ್, ಕಬ್ಬಲಿಗ (ಗಂಗಾಮತ) ಕೂಲಿ, ತಳವಾರ ಹೀಗೆ 39 ಪರ್ಯಾಯ ಪದಗಳಿಂದ ವಾಸಿಸುತ್ತಿದ್ದು, ತಿಪ್ಪಣ್ಣ ಕಮಕನೂರ ಅವರು ತಮ್ಮ ಅನುದಾನದಲ್ಲಿ ಎಲ್ಲರಿಗೂ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ವಿಧಾನಪರಿಷತ್ ಸದಸ್ಯರಾಗಿ ಸಿಕ್ಕ ಅಲ್ಪ ಅವಧಿಯಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಕಾಂಗ್ರೆಸ್ ಪಕ್ಷಕ್ಕೆ ಮತ ಕೊಡಿಸಿ



ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ತಿಪ್ಪಣ್ಣ ಕಮಕನೂರ ಅವರು ಕಲ್ಯಾಣ ಕರ್ನಾಟಕ ಭಾಗದ ಏಕೈಕ ಸಮಾಜದ ಧುರೀಣರಾಗಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅನುಯಾಗಿದ್ದಾರೆ. ಅವರ ಸೇವೆಯನ್ನು ಪರಿಗಣಿಸಿ ಮುಂದಿನ ಅವಧಿಗೂ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಬೇಕೆಂದು ಕೋರಿದರು.

ಜಿಪಂ ಮಾಜಿ ಅಧ್ಯಕ್ಷ ಹಾಗೂ ಸಂಘದ ನಿರ್ದೇಶಕ ಈರಯ್ಯ ಮಾತನಾಡಿ, ರಾಜ್ಯದಲ್ಲಿ 60 ರಿಂದ 70 ಲಕ್ಷ ಗಂಗಾಮತಸ್ಥರ (ಬೆಸ್ತರ್) ಜನಾಂಗ ಇದೆ. ಮಂಡ್ಯ ಜಿಲ್ಲೆಯಲ್ಲೂ 2.50 ಲಕ್ಷ ಮಂದಿ ಇದ್ದಾರೆ. ಇದುವರೆಗೂ ರಾಜಕೀಯವಾಗಿ ನಮ್ಮ ಜನಾಂಗವನ್ನು ಗುರುತಿಸಿ ಒಳ್ಳೆಯ ಸ್ಥಾನಮಾನ ನೀಡಿಲ್ಲ. ಮುಂದಿನ ದಿನಗಳಲ್ಲಿ ನಮ್ಮ ಸಮಾಜದವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಹೊನ್ನಪ್ಪ, ಉಪಾಧ್ಯಕ್ಷ ಎ.ಬಿ.ಸಿದ್ದಪ್ಪ, ಬಿ.ಲಿಂಗಯ್ಯ, ಚಂದ್ರು ಹಾಜರಿದ್ದರು.

ಡಾ. ಜಿ. ಪರಮೇಶ್ವರ್, ಸತೀಶ್ ಜಾರಕಿಹೊಳಿಗೆ ಸಿಎಂ ಸ್ಥಾನ ನೀಡಿ

ಮಂಡ್ಯ: ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಹಿಂದುಳಿದ ಸಮುದಾಯಗಳ ರಾಜಕೀಯ ಪ್ರಾತಿನಿಧ್ಯವನ್ನು ಬಲಪಡಿಸುವ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಹಿರಿಯ ಮುಖಂಡ ಡಾ. ಜಿ. ಪರಮೇಶ್ವರ್ ಅಥವಾ ಸತೀಶ್ ಜಾರಕಿಹೊಳಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬೇಕು ಎಂದು ಭೀಮಸೇನೆ ಕರ್ನಾಟಕ ರಾಜ್ಯಾಧ್ಯಕ್ಷ ಜೆ. ಪ್ರಸನ್ನ ಒತ್ತಾಯಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಉಭಯ ನಾಯಕರ ಆಡಳಿತ ಅನುಭವ, ಸಂಘಟನಾ ಸಾಮರ್ಥ್ಯ, ಮೃಧು ಸ್ವಭಾವ, ಸಾಮಾಜಿಕ ಬದ್ಧತೆಯನ್ನು ಗಮನಿಸಿ ಮುಖ್ಯಮಂತ್ರಿ ಹುದ್ದೆ ನೀಡಿದರೆ ಸಮರ್ಥ ನಾಯಕತ್ವದಿಂದ ರಾಜ್ಯದ ಅಭಿವೃದ್ಧಿ ಹಾಗೂ ಪಕ್ಷದ ಬಲವರ್ಧನೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಪಕ್ಷದ ಹೈಕಮಾಂಡ್ ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಉಭಯ ನಾಯಕರಲ್ಲಿ ಒಬ್ಬರಿಗೆ ಮುಖ್ಯಮಂತ್ರಿ ಪದವಿ ನೀಡಬೇಕು ಎಂದು ಅವರು ಒತ್ತಾಯಿಸಿದರು. ಸಂಘಟನೆಯ ಪದಾಧಿಕಾರಿಗಳಾದ ನೂರ್‌ಅಹಮದ್, ಡಿ. ಉಮಾಪತಿ, ಕೆ.ಜೆ. ರವಿಕುಮಾರ್, ರಜಿನಿ ಬಿ.ಕೆ. ಈಲಾಯಿ ಗೋಷ್ಠಿಯಲ್ಲಿದ್ದರು.

ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಮಂಡ್ಯ: ಚಾಮರಾಜನಗರ ವಿಧಾನ ಸಭಾ ಕ್ಷೇತದ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಮುಂಬರುವ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಶ್ರೀ ಭಗೀರಥ ಉಪ್ಪಾರರ ಬಳಗದ ಮುಖಂಡರಾದ ಕುಮಾರ್ ಹಾಗೂ ಆನಂದ್ ಆಗ್ರಹಿಸಿದ್ದಾರೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅತ್ಯಂತ ಹಿಂದುಳಿದ ವಿಧಾನ ಸಭಾ ಕ್ಷೇತ್ರವಾಗಿರುವ ಚಾಮರಾಜನಗರ ವಿಧಾನ ಸಭಾ ಕ್ಷೇತ್ರದಿಂದ ಸತತವಾಗಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ರಾಜ್ಯದಲ್ಲಿರುವ 45 ಲಕ್ಷ ಉಪ್ಪಾರ ಜನಾಂಗಕ್ಕೆ ಶಕ್ತಿ ತುಂಬಬೇಕು ಹಾಗೂ ಸಮುದಾಯದ ವ್ಯಕ್ತಿಯೊಬ್ಬರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಿಸಬೇಕು ಎಂದು ಒತ್ತಾಯಿಸಿದರು. ಸುಧೀರ್ಘ ಕಾಲದ ಜನಸೇವೆ, ಪಕ್ಷ ಸಂಘಟನೆ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ನಿಸ್ವಾರ್ಥವಾಗಿ ದುಡಿಯುತ್ತಿರುವ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಹಿಂದುಳಿದ ವರ್ಗದ ಜನಾಂಗಕ್ಕೆ ಶಕ್ತಿ ತುಂಬುವ ಸದುದ್ದೇಶದಿಂದ ಸಚಿವ ಸ್ಥಾನ ನೀಡಬೇಕು. ಎಂದು ಆಗ್ರಹಿಸಿದರು.

ಮಹಾಸಭೆ ಕಾರ್ಯಕ್ರಮದಲ್ಲಿ ಗೋಪಾಲಕೃಷ್ಣ ಅವಧಾನಿ ಸಲಹೆ

ಶಿಕ್ಷಕರು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿ

ಕೃಷ್ಣರಾಜಪೇಟೆ: ಸರ್ಕಾರಿ ಶಾಲೆಗಳಲ್ಲಿ ಉತ್ತಮವಾದ ಶಿಕ್ಷಣ ಸಿಗುತ್ತಿದ್ದು, ಶಿಕ್ಷಕರು ಜವಾಬ್ದಾರಿಯಿಂದ ಕೆಲಸ ಮಾಡುವ ಮೂಲಕ ಸರ್ಕಾರಿ ಶಾಲೆಗಳ ಉಳಿವಿಗೆ ಪ್ರಯತ್ನಿಸಬೇಕು ಎಂದು ತಾಲೂಕಿನ ಆಧ್ಯಾತ್ಮಿಕ ಚಿಂತಕ ಗೋಪಾಲಕೃಷ್ಣ ಅವಧಾನಿ ಹೇಳಿದರು.

ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಬೆಡದಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪೋಷಕರು ಮತ್ತು ಶಿಕ್ಷಕರ ಮಹಾಸಭೆ ಕಾರ್ಯಕ್ರಮದಲ್ಲಿ ಶಾಲೆಗೆ ದಾಖಲಾದ 15ಮಕ್ಕಳಿಗೂ ಸರಸ್ವತಿ ದೇವಿ ಮತ್ತು ಹಯಗ್ರೀವ ಮಂತ್ರವನ್ನು ಹೇಳಿಕೊಡುವ ಮೂಲಕ ಅಕ್ಷರ ಕಲಿಕಾ ಕಾರ್ಯಕ್ರಮಕ್ಕೆ ಶಾರದಾ ದೇವಿಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಉಚಿತ ಶಿಕ್ಷಣ ಪಡೆದುಕೊಳ್ಳಲು ಸರ್ಕಾರವು ಕೋಟ್ಯಂತರ ರೂಪಾಯಿಗಳನ್ನು ಶಿಕ್ಷಣಕ್ಕೆ ಖರ್ಚು ಮಾಡುತ್ತಿದೆ. ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಬೋಧನೆ, ಬಿಸಿಯೂಟ, ಸಮವಸ್ತ್ರ, ಪಠ್ಯಪುಸ್ತಕ ಸೇರಿದಂತೆ



ಹಲವು ಸೌಲಭ್ಯಗಳನ್ನು ಉಚಿತವಾಗಿ ಸರ್ಕಾರವು ನೀಡುತ್ತಿದೆ. ಇಷ್ಟೆಲ್ಲಾ ಸೌಲಭ್ಯಗಳನ್ನು ಒದಗಿಸಿದ್ದರೂ ದಾಖಲಾತಿ ಪ್ರಮಾಣ ಕಡಿಮೆಯಾಗುತ್ತಿರುವುದಕ್ಕೆ ಪೋಷಕರ ಇಂಗ್ಲೀಷ್ ಮತ್ತು ಕಾನ್ವೆಂಟ್ ವ್ಯಾಮೋಹವೇ ಕಾರಣವಾಗಿದೆ. ಪೋಷಕರು ತಮ್ಮ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ತಮ್ಮ ಗ್ರಾಮದ ಸರ್ಕಾರಿ ಶಾಲೆಗಳಲ್ಲಿಯೇ ವಿದ್ಯಾಭ್ಯಾಸ ಕೊಡಿಸಬೇಕು ಎಂದು ಸಲಹೆ ನೀಡಿದರು.

ಶಾಲೆಯ ಮುಖ್ಯ ಶಿಕ್ಷಕರು ಹಾಗೂ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರಾದ ಜಿ.ಎಸ್.ಮಂಜು, ರಾಗಿಮುದ್ದನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಕಾಂತರಾಜು, ಗ್ರಾ.ಪಂ.ಮಾಜಿ ಉಪಾಧ್ಯಕ್ಷ ಸುನಿಲ್, ಶಿಕ್ಷಣ ಸಂಯೋಜಕ ಕೃಷ್ಣನಾಯಕ್, ಬಿ.ಆರ್.ಪಿ. ಶ್ರೀಧರ್, ಮಾರ್ಗೋನಹಳ್ಳಿ ಮೊರಾರ್ಜಿ ಶಾಲೆಯ ಶಿಕ್ಷಕ ಕೆ.ಎಸ್.ಚಂದ್ರು, ಕೊರಟೀಕೆರೆ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಮಹೇಶ್, ಗ್ರಾ.ಪಂ.ಸದಸ್ಯ ಶ್ರೀನಿವಾಸ್, ಶಾಲೆಯ ಶಿಕ್ಷಕರಾದ ಕೆ.ಆರ್.ವಸಂತಕುಮಾರ್ , ಶಿಕ್ಷಣ ಸಂಯೋಜಕ ಕೃಷ್ಣನಾಯಕ್, ಬಿ.ಆರ್.ಪಿ. ಶ್ರೀಧರ್ ಉಪಸ್ಥಿತರಿದ್ದರು.

ರೈತರ ಹಿತಕಾಯುವ ಕೆಲಸ ಮಾಡಲು ಮುಂದಾಗಿ: ಮೋಹನ್

ಮೇಕೆದಾಟು ಯೋಜನೆಗೆ ಅನುಮತಿ ಕೊಡಿ

ಮಂಡ್ಯ: ಮೇಕೆದಾಟು ಯೋಜನೆಗೆ ತಮಿಳುನಾಡು ರಾಜ್ಯದ ಮುಖ್ಯಮಂತ್ರಿ ಯಾವುದೇ ಒತ್ತಡಕ್ಕೆ ಮಣಿಯದೆ, ಕಾವೇರಿ ನೀರು ಅನಗತ್ಯವಾಗಿ ವ್ಯರ್ಥವಾಗಿ ಸುಮಾರು ಟಿಎಂಸಿಗಳು ಸಮುದ್ರ ಪಾಲಾಗುವುದನ್ನು ತಡೆಗಟ್ಟಿ, ಕುಡಿಯುವ ನೀರಿನ ಹಾಹಾಕಾರವಾಗುವ ಸಂದರ್ಭದಲ್ಲಿ ಜನರಿಗೆ ಕುಡಿಯುವ ನೀರಿನ ಸಂರಕ್ಷಣೆ ಮಾಡಿ, ಜೀವಜಲ ಉಳಿಸಲು ಮಾನ್ಯ ಪ್ರಧಾನಮಂತ್ರಿ ಮೋದಿಯವರು ರಾಜ್ಯದ ಜನರ, ರೈತರ ಹಿತಕಾಯುವ ಕೆಲಸ ಮಾಡಲು ಮುಂದಾಗಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಬೇಕೆಂದು ಕರ್ನಾಟಕ ರಾಜ್ಯ ರೈತಸಂಘದ ಮುಖಂಡರಾದ ಮೋಹನ್‌ಕುಮಾರ್ ಕಿರಂಗೂರು ಪಾಪು ಮನವಿ ಮಾಡಿದ್ದಾರೆ.



ತಮಿಳುನಾಡಿನ ನೂತನ ಮುಖ್ಯಮಂತ್ರಿ ವಿಜಯ್‌ರವರು ಕ್ಯಾತೆ ತೆಗೆಯುವುದು ಶೋಭೆ ತರುವುದಿಲ್ಲ. ಅದನ್ನು ಬಿಟ್ಟು ಮೇಕೆದಾಟು ಯೋಜನೆಯ ಬಗ್ಗೆ ಸಾಧಕ-ಬಾಧಕಗಳನ್ನು ಚರ್ಚಿಸಿ ಕಾವೇರಿ ನದಿಯಿಂದ ಹಾಗೂ ಮಳೆನೀರು ಇನ್ನಿತರೆ ನೀರಿನ ಪ್ರಮಾಣ ಹೆಚ್ಚಾದಾಗ ಅನಗತ್ಯವಾಗಿ ವ್ಯರ್ಥವಾಗುವುದನ್ನು, ಸಮುದ್ರಪಾಲಾಗುವುದನ್ನು ತಡೆಗಟ್ಟುವ ಸಲುವಾಗಿ ಮೇಕೆದಾಟು ನಿರ್ಮಾಣ ಮಾಡಿ ಅದರಲ್ಲಿ ಸ್ಟೋರೇಜ್ ಮಾಡಿಕೊಂಡು, ದನಕರುಗಳಿಗೆ, ನಗರ- ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿಗೆ ಹಾಹಾಕಾರವಾದಾಗ, ಪಕ್ಷಿ ಪ್ರಾಣಿಗಳಿಗೆ ಸದುಪಯೋಗಮಾಡಿಕೊಳ್ಳಬಹುದು. ಇದರಿಂದ ಅಂತರ್ಜಲ ವೃದ್ಧಿಯಾಗುತ್ತದೆ.

ತಮಿಳುನಾಡು ಮುಖ್ಯಮಂತ್ರಿ ವಿಜಯ್ ಮೇಕೆದಾಟು ಯೋಜನೆಗೆ ಯಾವುದೇ ಅಡ್ಡಿಪಡಿಸದೆ ಜನರ, ರೈತರ ಹಿತದೃಷ್ಟಿಯಿಂದ ಸಾಧಕ ಬಾಧಕಗಳು ಚರ್ಚೆಯಾಗಿ ಅಮೂಲ್ಯವಾದ ಜಲಜೀವವನ್ನು ವ್ಯರ್ಥವಾಗುವುದನ್ನು ತಪ್ಪಿಸಲು ಮೇಕೆದಾಟು ಯೋಜನೆ ಅನಿವಾರ್ಯವಾಗಿದೆ. ಈ ಯೋಜನೆ ನಿರ್ಮಾಣವಾದರೆ ಸಮುದ್ರಪಾಲಾಗುವ ನೀರು ರಾಜ್ಯದ ಜನತೆಗೆ ಬಳಕೆಗೆ ಬರುತ್ತದೆ. ಆದ್ದರಿಂದ ದಯಮಾಡಿ ವಿಜಯ್ ಅವರು ಮೇಕೆದಾಟು ಯೋಜನೆಗೆ ಅಡ್ಡಿಪಡಿಸಬಾರದು ಎಂದು ಮನವಿ ಮಾಡಿಕೊಳ್ಳುತ್ತೇವೆ.

ರಾಜ್ಯದ ಸಂಸತ್ ಸದಸ್ಯರು, ಶಾಸಕರು, ಮುಖ್ಯಮಂತ್ರಿಗಳು, ರಾಜ್ಯಸಭಾ ಸದಸ್ಯರು, ನೀರಾವರಿ ತಜ್ಞರು, ರೈತಹೋರಾಟಗಾರರು, ನೀರಾವರಿ ತಜ್ಞರು ಒಳಗೊಂಡಂತೆ ನಿಯೋಗ ಮಾನ್ಯ ಪ್ರಧಾನಮಂತ್ರಿಗಳಾದ ಮೋದಿಯವರ ಬಳಿ ತೆರಳಿ ಸಾಧಕ ಬಾಧಕ ಚರ್ಚೆ ಮಾಡಿ ರಾಜ್ಯಕ್ಕೆ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲು ಮುಂದಾಗಬೇಕೆಂದು ಹಾಗೂ ಮಂಡ್ಯ ಜಿಲ್ಲೆಯವರಾದ ಕೇಂದ್ರ ಸಚಿವರಾದ ಕುಮಾರಸ್ವಾಮಿಯವರು ಇದರ ಬಗ್ಗೆ ಅತಿಹೆಚ್ಚು ಗಮನಹರಿಸುವ ಮೂಲಕ ರಾಜ್ಯದ ರೈತರ, ಜನಸಾಮಾನ್ಯರ ಹಿತ ಕಾಯುವ ನಿಟ್ಟಿನಲ್ಲಿ ಮಾನ್ಯ ಪ್ರಧಾನಿ ಮೋದಿಯವರಿಗೆ ಮನವರಿಕೆ ಮಾಡಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಿಕೊಡಬೇಕೆಂದು ಪಾಪು ಅವರು ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

• **ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕೆ.ಪಿ.ಟಿ.ಸಿ.ಎಲ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಮೇ.31 ರಂದು ಬೆಳಗ್ಗೆ 10 ಗಂಟೆಯಿಂದ 6 ಗಂಟೆಯವರೆಗೆ ಕೆ.ಐ.ಎ.ಡಿ.ಬಿ ಎ.ಎ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಜಯಂತಿ ಕಾಫಿ ವರ್ಕ್ಸ್, ಎಸ್. ಎಸ್ ಗ್ರಾನೈಟ್ಸ್, ಹೆಚ್.ಪಿ.ಸಿ.ಎಲ್, ಫ್ರೆಶ್ ಪ್ಯಾಕ್ಸ್, ಮತ್ತಿತರ ಕೈಗಾರಿಕಾ ಪ್ರದೇಶಗಳು, ಕೌಶಿಕ ಮಾರ್ಗದ ಪ್ರದೇಶಗಳು, ದೊಡ್ಡಬಸವನಹಳ್ಳಿ, ಕಾಚನಾಯಕನಹಳ್ಳಿ, ಸಮುದ್ರವಳ್ಳಿ, ನಾಗತಿಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ

• **ಹಾಸನ:** ಹಾಸನ ಶಿಶು ಅಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ 32 ಅಂಗನವಾಡಿ ಕಾರ್ಯಕರ್ತೆ ಹಾಗೂ 104 ಅಂಗನವಾಡಿ ಸಹಾಯಕಿಯರ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ, ಶಿಶು ಅಭಿವೃದ್ಧಿ ಯೋಜನಾ ಕಚೇರಿಯಲ್ಲಿ ಅರ್ಜಿಯನ್ನು ಪಡೆದು ಅವಶ್ಯಕ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ, ಅರ್ಜಿ ಸಲ್ಲಿಸಲು ಜೂ.29 ರಂದು ಕೊನೆಯ ದಿನಾಂಕವಾಗಿರುತ್ತದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

ಜನರ ಬದುಕಿಗೆ ಆಶಾಕಿರಣ ಸಿದ್ದರಾಮಯ್ಯ

• **ಚನ್ನರಾಯಪಟ್ಟಣ:** ಜನಪರ ಆಡಳಿತ, ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿಯ ಸಮನ್ವಯದ ಮೂಲಕ ಕರ್ನಾಟಕದ ರಾಜಕೀಯಕ್ಕೆ ಹೊಸ ದಿಕ್ಕು ನೀಡಿದ ನಿರ್ಗಮಿತ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ ಅವರು ತಮ್ಮ ದೂರದೃಷ್ಟಿಯ ನಾಯಕತ್ವದಿಂದ ರಾಜ್ಯದ ಲಕ್ಷಾಂತರ ಜನರ ಬದುಕಿಗೆ ಆಶಾಕಿರಣವಾಗಿದ್ದಾರೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಎಂ. ಎ. ಗೋಪಾಲಸ್ವಾಮಿ ತಿಳಿಸಿದರು. ಅವರು ಸುದ್ದಿಗಾರರೊಂದಿಗೆ ಮಾತನಾಡಿ



ಅನ್ನಭಾಗ್ಯ, ಕ್ಷೀರಭಾಗ್ಯ, ಗೃಹಲಕ್ಷ್ಮೀ ಸೇರಿದಂತೆ ಜನಪರ ಯೋಜನೆಗಳ ಮೂಲಕ ಬಡವರು, ಮಹಿಳೆಯರು ಮತ್ತು ಸಾಮಾನ್ಯ ಕುಟುಂಬಗಳ ಜೀವನದಲ್ಲಿ ಹೊಸ ಭರವಸೆ ಮೂಡಿಸಿದ ಅವರ ಸೇವೆ ಸದಾ ಸ್ಮರಣೀಯ. ಜಾತಿಜನಗಣತಿ ನೀಡುವ ಮೂಲಕ ಕಟ್ಟಕಡೇಯ ವ್ಯಕ್ತಿಗೂ ಕೂಡ ಸರ್ಕಾರದ ಸೌಲಭ್ಯ ಪಡೆಯಬೇಕೆಂಬ ಆಶಯ ಇಟ್ಟುಕೊಂಡ ಮಹಾನ್ ನಾಯಕ. ಅಭಿವೃದ್ಧಿಯ ಪಥದಲ್ಲಿ ಕರ್ನಾಟಕವನ್ನು ದೃಢವಾಗಿ ಮುನ್ನಡೆಸಿದ ಅಹಿಂದ ನಾಯಕ ಸಿದ್ದರಾಮಯ್ಯ ಅವರ ಸುದೀರ್ಘ ರಾಜಕೀಯ ಜೀವನ ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಜನಸೇವೆಯನ್ನೇ ಧ್ಯೇಯವನ್ನಾಗಿಸಿಕೊಂಡ ಅವರ ನಾಯಕತ್ವ ರಾಜ್ಯದ ಪ್ರಗತಿಗೆ ಬಲವಾದ ಅಡಿಪಾಯವಾಗಿದ್ದು, ಅವರ ಸೇವೆ ನಮ್ಮೆಲ್ಲರ ಹೆಮ್ಮೆಯಾಗಿದ್ದು ಅವರ ನಾಯಕತ್ವದ ಗುಣ ನಮ್ಮೆಲ್ಲರಿಗೆ ಮಾರ್ಗದರ್ಶನವಾಗಿದೆ. ಸಂವಿಧಾನವೇ ನನ್ನ ಧರ್ಮ, ಮತದಾರ ಪ್ರಭುಗಳೇ ನನ್ನ ದೇವರು ಎಂಬ ಹೇಳಿಕೆಯ ಮುಖಾಂತರ ರಾಜ್ಯದ 6ಕೋಟಿ ಕನ್ನಡಿಗರ ಹೃದಯ ಗೆದ್ದ ಸಿದ್ದರಾಮಯ್ಯ ನವರಿಗೆ ಸಿದ್ದರಾಮಯ್ಯನವರೇ ಸಾಟಿ ಎಂದರು.

ಸ್ವಾತಂತ್ರ್ಯದ ಓಟ ನಾಟಕ ಪ್ರದರ್ಶನ ನಾಳೆ

• **ಹಾಸನ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಂಗಾಯಣ ಶಿವಮೊಗ್ಗ ವತಿಯಿಂದ ಖ್ಯಾತ ಸಾಹಿತಿ ಬೊಳುವಾರು ಮಹಮ್ಮದ್ ಅವರ ಪ್ರಸಿದ್ಧ ಕಾದಂಬರಿ ಆಧಾರಿತ "ಸ್ವಾತಂತ್ರ್ಯದ ಓಟ" ನಾಟಕವನ್ನು ಮೇ 31ರಂದು ಭಾನುವಾರ ಸಂಜೆ 5.30ಕ್ಕೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲಾಗುತ್ತಿದೆ ಎಂದು ಚಲಂ ಹಾಡ್ಲಹಳ್ಳಿ ಮತ್ತು ಸಾಹಿತಿ ಚನ್ನೇನಹಳ್ಳಿ ಸ್ವಾಮಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಸಾಮಾಜಿಕ ಮೌಲ್ಯಗಳು, ಸ್ವಾತಂತ್ರ್ಯದ ಅರ್ಥ, ವ್ಯಕ್ತಿಯ ಅಂತರಂಗದ ಸಂಘರ್ಷಗಳು ಹಾಗೂ ಸಮಕಾಲೀನ ಬದುಕಿನ ವೈವಿಧ್ಯಮಯ ಆಯಾಮಗಳನ್ನು ಒಳಗೊಂಡಿರುವ ಈ ನಾಟಕವು ಪ್ರೇಕ್ಷಕರ ಮನಸಿಗೆ ಹತ್ತಿರವಾಗುವಂತಿದೆ. ಸಾಹಿತ್ಯ ಮತ್ತು ರಂಗಭೂಮಿಯ ಸೊಗಸಾದ ಸಂಯೋಜನೆಯಾಗಿ ಮೂಡಿಬಂದಿರುವ ಈ ನಾಟಕ ಈಗಾಗಲೇ ಶಿವಮೊಗ್ಗದಲ್ಲಿ ನಡೆದ ಪ್ರಾಯೋಗಿಕ ಪ್ರದರ್ಶನಗಳ ಮೂಲಕ ಜನಮನ್ನಣೆಗೆ ಪಾತ್ರವಾಗಿದೆ. ನಾಟಕಕ್ಕೆ ಹಿರಿಯ ರಂಗಕರ್ಮಿ ನಟರಾಜ್ ಹೊನ್ನವಳ್ಳಿ ರಂಗಪಠ್ಯ ವಿನ್ಯಾಸ ಹಾಗೂ ನಿರ್ದೇಶನ ನೀಡಿದ್ದು, ಮಂಜುನಾಥ್ ಗೋಮಾರದಹಳ್ಳಿ ಕಾದಂಬರಿಯನ್ನು ರಂಗರೂಪಕ್ಕೆ ತಂದಿದ್ದಾರೆ. ಸಲ್ಮಾ ದಂಡಿನ್ ಸಹ ನಿರ್ದೇಶನ ವಹಿಸಿಕೊಂಡಿದ್ದಾರೆ ಎಂದರು.



ಹಾಸನ ನಗರದ ಬಿ.ಎಂ. ರಸ್ತೆ ಸಮೀಪ ನೂತನವಾಗಿ ನಿರ್ಮಾಣಗೊಂಡಿರುವ ಪ್ರಜಾ ಸೌಧದಲ್ಲಿ ಹಾಸನ ವಿಧಾನಸಭಾ ಕ್ಷೇತ್ರದ ಶಾಸಕರ ಕಚೇರಿಯನ್ನು ಶಾಸಕ ಎಚ್.ಪಿ. ಸ್ವರೂಪ್ ಪೂಜೆ ಸಲ್ಲಿಸುವ ಮೂಲಕ ಲೋಕಾರ್ಪಣೆಗೊಳಿಸಿದರು.

ಶಾಸಕರ ನೂತನ ಕಚೇರಿ ಉದ್ಘಾಟನೆ

• **ಹಾಸನ:** ನಗರದ ಬಿ.ಎಂ. ರಸ್ತೆ ಸಮೀಪ ನೂತನವಾಗಿ ನಿರ್ಮಾಣಗೊಂಡಿರುವ ಪ್ರಜಾ ಸೌಧದಲ್ಲಿ ಹಾಸನ ವಿಧಾನಸಭಾ ಕ್ಷೇತ್ರದ ಶಾಸಕರ ಕಚೇರಿಯನ್ನು ಶಾಸಕ ಎಚ್.ಪಿ. ಸ್ವರೂಪ್ ಪೂಜೆ ಸಲ್ಲಿಸುವ ಮೂಲಕ ಸಾರ್ವಜನಿಕ ಸೇವೆಗೆ ಲೋಕಾರ್ಪಣೆಗೊಳಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವ ಹಾಗೂ ಸರ್ಕಾರಿ ಸೇವೆಗಳನ್ನು ಒಂದೇ ಸ್ಥಳದಲ್ಲಿ ಸುಲಭವಾಗಿ ಪಡೆಯುವ ಉದ್ದೇಶದಿಂದ ಆರಂಭಿಸಲಾದ ಈ ಕಚೇರಿ ಸಾರ್ವಜನಿಕರಿಗೆ ನೆರವಾಗಲಿದೆ.

ಗ್ರಾಮೀಣ ಭಾಗಗಳಿಂದ ಸಮಸ್ಯೆಗಳನ್ನು ಹೊತ್ತು ಬರುವ ರೈತರು ಮತ್ತು ಸಾರ್ವಜನಿಕರು ವಿವಿಧ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಇನ್ನು ಮುಂದೆ ಕಡಿಮೆಯಾಗಲಿದೆ. ಜನರಿಗೆ ಸುಲಭವಾಗಿ ಲಭ್ಯವಾಗುವ ಆಡಳಿತ ವ್ಯವಸ್ಥೆ ರೂಪಿಸುವ ಉದ್ದೇಶದಿಂದ ಈ ಕಚೇರಿಯನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಲಾಗಿದೆ. ಜನರ ಸಮಸ್ಯೆಗಳನ್ನು ಆಲಿಸಿ, ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಸಾಧ್ಯವಾದಷ್ಟು ಬೇಗ ಪರಿಹಾರ ಒದಗಿಸುವುದು ತಮ್ಮ ಪ್ರಮುಖ ಗುರಿಯಾಗಿದೆ ಎಂದು ಶಾಸಕ ವಿಶ್ವಾಸ ವ್ಯಕ್ತಪಡಿಸಿದರು.

ತಹಸೀಲ್ದಾರ್ ಗೀತಾ, ಮಹಾನಗರ ಪಾಲಿಕೆಯ ಮಾಜಿ ಕಾರ್ಪೋರೇಟರ್ ಸಿ. ಕ್ರಾಂತಿ ಪ್ರಸಾದ್ ತ್ಯಾಗಿ, ಗಿರೀಗೌಡ, ಬದರಿಕೆರೆ ಜಯರಾಮ್, ಹೊಂಗೆರೆ ರಘು ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಗಮದ ಅಧ್ಯಕ್ಷ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾದ ಲಲಿತ್ ರಾಘವ್ ಅವರು ಶುಕ್ರವಾರ ಹೊಸದಿಲ್ಲಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿದರು.

ಜಿಲ್ಲೆಗೆ ಯಾವುದೇ ಕೊಡುಗೆ ನೀಡಿಲ್ಲ: ಸ್ವರೂಪ್ ಪ್ರಕಾಶ್ ಬೇಸರ

ಜನರ ನಿರೀಕ್ಷೆ ಹುಸಿ

• **ಹಾಸನ:** ಹಾಸನ ಜಿಲ್ಲೆ ರಾಜ್ಯದಲ್ಲಿ ರಾಜಕೀಯವಾಗಿ ಪ್ರಮುಖ ಸ್ಥಾನ ಹೊಂದಿದ್ದರೂ, ಆಳುವ ಸರ್ಕಾರಗಳು ನಿರೀಕ್ಷಿತ ಪ್ರಮಾಣದಲ್ಲಿ ಜಿಲ್ಲೆಯತ್ತ ಗಮನ ಹರಿಸುತ್ತಿಲ್ಲ ಸ್ಥಳೀಯ ಶಾಸಕ ಎಚ್.ಪಿ.ಸ್ವರೂಪ್ ಪ್ರಕಾಶ್ ಬೇಸರ ಹೊರ ಹಾಕಿದರು.

ನಗರದ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ತುಂಬಿದೆ. ಹಾಸನ ಜಿಲ್ಲೆಗೆ ಸಿದ್ದರಾಮಯ್ಯ ಅವರ ಕೊಡುಗೆ ಏನು ಅಂಥ ನಿಮಗೂ ಗೊತ್ತಿದೆ. ಸಿದ್ದರಾಮಯ್ಯ ವಿಚಾರ ಮುಖ್ಯಮಂತ್ರಿ ರಾಜೀನಾಮೆ ಅವರ ಪಕ್ಷಕ್ಕೆ ಸಂಬಂಧಪಟ್ಟಿದ್ದು, ಆದರೆ ಅವರ ಅವಧಿಯಲ್ಲಿ ಜಿಲ್ಲೆಗೆ ಯಾವುದೇ ಕೊಡುಗೆ ನೀಡಲಿಲ್ಲ, ನಾವು ಹಾಗೂ ಜಿಲ್ಲೆಯ ಜನರು ಇಟ್ಟುಕೊಂಡಿದ್ದ ನಿರೀಕ್ಷೆ ಹುಸಿಯಾಗಿದೆ. ಸಿಎಂ ಬದಲಾವಣೆ ಅವರ ಪಕ್ಷಕ್ಕೆ ಬಿಟ್ಟ ವಿಚಾರ. ಯಾರೇ ಮುಖ್ಯಮಂತ್ರಿ ಆದರೂ ಹಾಸನ ಜಿಲ್ಲೆಗೆ ಏನು ಸಂಬಂಧವಿಲ್ಲ, ಸಿದ್ದರಾಮಯ್ಯ ಅವರ ಮೇಲೆ ನಾವು ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ ಹಾಸನ ಜಿಲ್ಲೆಗೆ ಸಿದ್ದರಾಮಯ್ಯ ಅವರ ಕೊಡುಗೆ ಶೂನ್ಯ ಎಂದು ಅಸಮಾಧಾನ ಹೊರ ಹಾಕಿ, ಯಾರು ಮುಖ್ಯಮಂತ್ರಿ ಆದರೆ ನಮಗೇನು, ಜಿಲ್ಲೆಗೆ ಅದರಲ್ಲೂ, ಹಾಸನ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕೊಟ್ಟರೆ ತುಂಬಾ ಸಂತೋಷ ಎಂದು ತಿಳಿಸಿದರು.

ಇದೀಗ ಡಿ.ಕೆ.ಶಿವಕುಮಾರ್ ಜಿಲ್ಲೆಗೆ ಯಾವ ರೀತಿ ಕೊಡುಗೆ ಕೊಡ್ತಾರೆ ನೋಡೋಣ, ನಮ್ಮ ಜೆಡಿಎಸ್ ಪಕ್ಷ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲಾಗಿದೆ. ಇದಲ್ಲದೆ ಇನ್ನೂ ಸಾಕಷ್ಟು ಅಭಿವೃದ್ಧಿ ಕೆಲಸ-ಕಾರ್ಯಗಳು ಆಗಿವೆ. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆದಮೇಲೆ ಏನು ಕೊಡುಗೆ ನೀಡುತ್ತಾರೆ, ಯಾವ 03 ಅಭಿವೃದ್ಧಿ ಮಾಡುತ್ತಾರೆ ಕಾದು ನೋಡೋಣ ಎಂದು ಹೇಳಿದರು. ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಅನುದಾನ, ಮೂಲಸೌಕರ್ಯ ಹಾಗೂ ಜನಪರ ಯೋಜನೆಗಳು ಬರಬೇಕು. ಅದನ್ನು ನೀಡುವ ನಾಯಕನೇ ಜನರಿಗೆ ಮುಖ್ಯ ಎಂದು ಹೇಳಿದರು.

ಈ ವೇಳೆ ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕಾರ್ಯ ಕುರಿತು ಪ್ರಶ್ನಿಸಿದ ಶಾಸಕರು, ಜೆಡಿಎಸ್ ಆಡಳಿತದಲ್ಲಿ ಹಾಸನ ಜಿಲ್ಲೆಗೆ ಅನೇಕ ಪ್ರಮುಖ ಯೋಜನೆಗಳು ಮಂಜೂರಾಗಿದ್ದವು. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ನಾವು ಅಡಿಪಾಯ ಹಾಕಿದ್ದೇವೆ ಎಂದರು. ಈ ವೇಳೆ ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಹೆಚ್. ಎಸ್.ವಾಸುದೇವ್, ಪ್ರಸಾದ್‌ತ್ಯಾಗಿ, ಬದರಿಕೆರೆ ಜಯರಾಮ್, ಜಿಲ್ಲಾ ಸಿ.ಕ್ರಾಂತಿ ಗಿರೀಗೌಡ, ಜೆಡಿಎಸ್ ವಕ್ತಾರ ಹೊಂಗೆರೆ ರಘು ಮೊದಲಾದವರಿದ್ದರು.



> ಜಿಲ್ಲೆಯ ಜನರಿಗೆ ರಾಜಕೀಯ ಪೈಪೋಟಿಗಿಂತ ಅಭಿವೃದ್ಧಿಯೇ ಮುಖ್ಯ. ಹಾಸನ ಜಿಲ್ಲೆ ರಾಜ್ಯದಲ್ಲಿ ರಾಜಕೀಯವಾಗಿ ಪ್ರಮುಖ ಸ್ಥಾನ ಹೊಂದಿದ್ದರೂ, ಆಳುವ ಸರ್ಕಾರಗಳು ನಿರೀಕ್ಷಿತ ಪ್ರಮಾಣದಲ್ಲಿ ಜಿಲ್ಲೆಯತ್ತ ಗಮನ ಸಿಗುತ್ತಿಲ್ಲ, ಮುಂದಿನ ದಿನಗಳಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಯಾರು ನಿಜವಾಗಿ ಮಾಡುತ್ತಾರೆ ಕೆಲಸ ಎಂಬುದನ್ನು ಜನರು ಗಮನಿಸುತ್ತಿದ್ದಾರೆ.
> ■ ಎಚ್.ಪಿ.ಸ್ವರೂಪ್ ಪ್ರಕಾಶ್, ಶಾಸಕ

ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ ನಾಳೆ

• **ಹಾಸನ:** ಮೇ 31ರಂದು ನಗರದ ಸರ್ಕಾರಿ ಕಲಾ ಕಾಲೇಜು ಮೈದಾನದಲ್ಲಿ ಹಾಸನಾಂಬಾ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದಿಂದ ಇದೇ ಮೊದಲ ಬಾರಿಗೆ ಪತ್ರಿಕಾ ವಿತರಕರ ಪ್ರೀಮಿಯರ್ ಲೀಗ್ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ ಎಂದು ಸಂಘದ ಕಿರಣ್ ಮತ್ತು ಸುನಿಲ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆಸಿ ಮಾತನಾಡಿದ ಅವರು, ಸ್ಥಳೀಯ ಶಾಸಕ ಎಚ್.ಪಿ.ಸ್ವರೂಪ್ ಪ್ರಕಾಶ್ ಉದ್ಘಾಟನೆ ನೆರವೇರಿಸುವರು. ಕ್ರೀಡಾಕೂಟಕ್ಕೆ ಕೆಯೂಡ ಬ್ಯಾಂಕ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಮಾಜಿ ಅಧ್ಯಕ್ಷರಾದ ಬಾಳುಗೋಪಾಲ್, ಹಲೋಹಾಸನ್ ಪತ್ರಿಕೆ ಸಂಪಾದಕರಾದ ರವಿ ನಾಕಲಗೂಡು ಕ್ರೀಡಾಕೂಟಕ್ಕೆ ಚಾಲನೆ ನೀಡುವರು ಎಂದರು.

ಹಾಸನವಾಣಿ ಸಂಪಾದಕರಾದ ಲೀಲಾವತಿ ಆಶಯ ನುಡಿಗಳನ್ನು ಆಡಲಿದ್ದು ಜನಮಿತ್ರ ಸಂಪಾದಕ ಸಿ.ಆರ್.ನವೀನ್ ದಿಕ್ಸೂಚಿ ಮಾತು ಗಳನ್ನಾಡುವರು. ಭುವನವಿಜಯ ಸಂಪಾದಕ ನಾಗರಾಜ್ ಹೆತ್ತೂರು ತಂಡಗಳ ಪರಿಚಯ ಮಾಡಲಿದ್ದಾರೆ. ವಿಶೇಷ ಸಂಪಾದಕರಾದ ಆಸ್ಪಾತನರಾಗಿ ಕೆ.ಹೆಚ್. ವೇಣುಕುಮಾರ್, ಆನಂತೇಗೌಡ, ಜಗದೀಶ್ ಚೌಡುವಳ್ಳಿ, ಚಲಂ ಹಾಡ್ಲಹಳ್ಳಿ, ಸ್ಟ್ರಾಂಗ್ ಹೆಚ್. ಎನ್. ರಘುನಂದನ್, ಕೌಶ್ಯರ ಎ.ಎನ್. ಬಿಜೆಪಿ ಯುವ ಮುಖಂಡರಾದ ಪುನೀತ್ ಪ್ರದೀಪ್ ಆಗಮಿಸುವರು ಎಂದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ.ಗೌಡ, ಕಾರ್ಮಿಕ ನಿರೀಕ್ಷಕ ಆನಂದ್‌ರಾಮ್, ಪತ್ರಿಕಾವಿತರಕರಿಗೆ ಸನ್ಮಾನ ಮಾಡುವರು. ಬಹುಮಾನ ಪ್ರಾಯೋಜಕರಾದ ಕಾಂಗ್ರೆಸ್ ಮುಖಂಡರಾದ ಚಂದ್ರಶೇಖರ್ ಡಿ.ಪಿ. ಬಿಜೆಪಿ ಮುಖಂಡ ಶರತ್ ಬಿ.ಪಿ, ಚನ್ನರಾಯಪಟ್ಟಣ ತಾಲ್ಲೂಕು ಕಸಾಪ ಘಟಕದ ಅಧ್ಯಕ್ಷ ಲೋಕೇಶ್ ಬಹುಮಾನ ವಿತರಿಸುವರು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸುರೇಶ್, ಚೇತನ್, ಶ್ರೀಕಾಂತ್, ದಿನೇಶ್ ಇದ್ದರು.



ಪದಾಧಿಕಾರಿಗಳ ಪದಗ್ರಹಣ

• **ಹೊಳೆನರಸೀಪುರ:** ಕೆಲವು ಕಾರಣಗಳಿಂದ ತಾಲೂಕು ಘಟಕದ ಚುನಾವಣೆಗಳನ್ನು ಸ್ಥಗಿತಗೊಂಡಿದ್ದವು. ಆದರೆ ರಾಜ್ಯ ಮತ್ತು ಜಿಲ್ಲಾ ಘಟಕದ ಆದೇಶದಂತೆ ಚುನಾವಣಾ ಅಧಿಕಾರಿಯಾಗಿದ್ದ ಯೋಗೇಶ್ ಅವರು ಅತ್ಯಂತ ಶ್ರಮವಹಿಸಿ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಎಲ್ಲಾ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ ಎಂದು ಹಿರಿಯ ಮುಖಂಡರಾದ ಮಟ್ಟಕೊಳಾ ಮಹಸ್ವಾ ಸ್ವಾಮಿಸಿದರು.

ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ತಾಲೂಕಿನ ತೇಜೂರು ಗ್ರಾಮದ ಮಠದಲ್ಲಿ ಯಶಸ್ವಿಯಾಗಿ ನೆರವೇರಿತು. ನೂತನವಾಗಿ ಆಯ್ಕೆಯಾದ ತಾಲೂಕು ಅಧ್ಯಕ್ಷರಾದ ಕೆ. ರಾಜಶೇಖರ್ ಹಾಗೂ ತಂಡಕ್ಕೆ ಸಮಾಜದ ಮುಖಂಡರು ಮತ್ತು ಬಂಧುಗಳು ಹೂಗುಚ್ಛ ನೀಡಿ ಅಭಿನಂದಿಸಿದರು. ಧಾರ್ಮಿಕ ಚಿಂತನೆಗಳು ಹಾಗೂ ಸಮಾಜದ ಏಳಿಗೆಗಾಗಿ ಒಗ್ಗಟ್ಟಿಗಿ ಶ್ರಮಿಸುವುದಾಗಿ ನೂತನ ಸಮಿತಿ ಇದೇ ವೇಳೆ ಭರವಸೆ ನೀಡಿತು.

ಬಸವಣ್ಣನವರ ವಿಶ್ವಮಾದರಿ ಚಿಂತನೆ ಅಳವಡಿಸಿಕೊಳ್ಳಿ: ನೂತನ ಅಧ್ಯಕ್ಷ ಕೆ. ರಾಜಶೇಖರ್ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಮಾತನಾಡಿದ ರಾಜಶೇಖರವರು, ವೀರಶೈವ ಲಿಂಗಾಯತ ಧರ್ಮವು ವಿಶ್ವಕ್ಕೆ ಮಾದರಿಯಾಗಿದೆ. ದೇವರು ಕೇವಲ ಗುಡಿ-ಗುಂಡಾರಗಳಲ್ಲಿ ಇಲ್ಲ, ಬದಲಿಗೆ ಪ್ರತಿಯೊಬ್ಬರ ಮನಸ್ಸು ಮತ್ತು ಆತ್ಮದಲ್ಲಿದ್ದಾನೆ ಎಂಬುದನ್ನು ಶರಣರು ಸಾರಿದ್ದಾರೆ. ಶ್ರೀಮಂತರು ಶಿವಾಲಯಗಳನ್ನು ಕಟ್ಟಿಸಿದರೆ, ಬಡವರು ತಮ್ಮ ದೇಹವನ್ನೇ ದೇಗುಲವಾಗಿಸಿಕೊಂಡು ಭಕ್ತಿ ಸಮರ್ಪಿಸಬೇಕು ಎಂಬ ಮಹಾನ್ ಆಶಯದಂತೆ ಸಮಾಜದ ಪ್ರತಿಯೊಬ್ಬರೂ ಸಮಾನತೆಯಿಂದ ಬಾಳಬೇಕು, ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಚಂದ್ರಮತಿ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಕುಮಾರಸ್ವಾಮಿ, ತಾಲೂಕು ನೌಕರ ಸಂಘದ ಅಧ್ಯಕ್ಷ ಕುಮಾರಸ್ವಾಮಿ, ಜಡೆ ಪೂರ್ವ ಅಧ್ಯಕ್ಷ ದೇವರಾಜಪ್ಪ ಇದ್ದರು.



ಹೊಳೆನರಸೀಪುರ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ತಾಲೂಕಿನ ತೇಜೂರು ಗ್ರಾಮದ ಮಠದಲ್ಲಿ ಯಶಸ್ವಿಯಾಗಿ ನೆರವೇರಿತು.

ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಹೊಸ ತಂಡ ಕ್ರಮ

• **ಸಕಲೇಶಪುರ:** ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಎಚ್‌ಡಿಪಿಎ ಹೊಸ ತಂಡ ಶ್ರಮಿಸುತ್ತದೆ ಎಂದು ಹಾಸನ ಜಿಲ್ಲಾ ಬೆಳೆಗಾರರ ಸಂಘದ ನೂತನ ಅಧ್ಯಕ್ಷ ಮಂಜುನಾಥ್ ಶೆಟ್ಟಿ ಹೇಳಿದರು.



ಪಟ್ಟಣದ ಎಚ್‌ಡಿಪಿಎ ಭವನದಲ್ಲಿ ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಇತ್ತೀಚೆಗೆ ಹಾಸನ ಜಿಲ್ಲಾ ಬೆಳೆಗಾರರ ಸಂಘದ ವತಿಯಿಂದ ನಡೆದ ವಾರ್ಷಿಕ ಮಹಾಸಭೆಯಲ್ಲಿ ಬೆಳೆಗಾರರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆಯಾಗಿದೆ. ಸಂಘದ ಹಿಂದಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉತ್ತಮ ಕೆಲಸ ನಿರ್ವಹಿಸಿದ್ದು ಅವರ ಸಲಹೆ ಮಾರ್ಗದರ್ಶನ ಪಡೆದು ನಮ್ಮ ತಂಡ ಕೆಲಸ ಮಾಡಲಿದ್ದು ಅವರಿಗೆ ಮಾರ್ಗದರ್ಶನದಲ್ಲಿ ನಾವು ಸಹ ಬೆಳೆಗಾರರ ಸಂಘವನ್ನು ಬಲಿಷ್ಠ ಗೊಳಿಸಲು ಮುಂದಾಗುತ್ತೇವೆ. ಬೆಳೆಗಾರರ ಸಂಘದಲ್ಲಿ ದೊಡ್ಡ ಬೆಳೆಗಾರರು ಚಿಕ್ಕಬೆಳೆಗಾರರು ಎಂಬುದು ಇಲ್ಲ, ಒಂದು ಎಕರೆ ಭೂಮಿ ಹೊಂದಿರುವ ರೈತನಿಂದ ನೂರು ಎಕರೆ ಭೂಮಿ ಹೊಂದಿರುವ ರೈತನನ್ನು ಒಂದೇ ರೀತಿಯಲ್ಲಿ ನೋಡಲಾಗುತ್ತದೆ. ಬಲಗಾರರ ಹಲವು ಸಮಸ್ಯೆಗಳನ್ನು ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಮಾಧ್ಯಮದ ಮಿತ್ರರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಮಾಧ್ಯಮ ಮಿತ್ರರ ಸಹಯೋಗದಲ್ಲಿ ಮುಂದಿನ ದಿನಗಳಲ್ಲಿ ಹಲವಾರು ಉತ್ತಮ ಕಾರ್ಯಕ್ರಮಗಳನ್ನು ಸಂಘದ ವತಿಯಿಂದ ಮಾಡಲಾಗುವುದು ಎಂದರು.

ಎಚ್.ಡಿ. ಪಿ.ಎ ಉಪಾಧ್ಯಕ್ಷ ಸತೀಶ್ ಎಂ.ಜೆ, ಖಜಾಂಚಿ ಡಿ ಎಸ್ ಲೋಕೇಶ್, ಸಂಘಟನಾ ಕಾರ್ಯದರ್ಶಿ ಮಂಜುನಾಥ್ ಅರಕಲಗೂಡು, ಸಹಕಾರ್ಯದರ್ಶಿ ಶಶಿಧರ್ ಹಾಜರಿದ್ದರು.

ಭೂಮಿ ವಿಚಾರಕ್ಕೆ ಬೆದರಿಕೆ, ದೌರ್ಜನ್ಯ: ಆರೋಪ

• **ಬೇಲೂರು:** ಹಲವು ವರ್ಷಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ಜಾಗದ ವಿಚಾರವಾಗಿ ಭೂಮಿ ದಾಖಲೆಗಳಿಲ್ಲದೆ ಕೆಲವರು ನನ್ನ ಕುಟುಂಬಕ್ಕೆ ಬೆದರಿಕೆ, ದೌರ್ಜನ್ಯ ಹಾಗೂ ಹಣದ ಬೇಡಿಕೆ ಮಾಡುತ್ತಿದ್ದಾರೆ ಎಂದು ಚಿಕ್ಕಬ್ಯಾಡಗೆರೆ ವಾಸಿ ಶೋಭಾ ಗಂಭೀರ ಆರೋಪ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಚಿಕ್ಕಬ್ಯಾಡಗೆರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮ ಠಾಣಾ ಜಾಗದ ವಿಚಾರವಾಗಿ ಈ ವಿವಾದ ಉಂಟಾಗಿದ್ದು, ಪ್ರಕರಣ ಈಗ ಪೊಲೀಸ್ ಹಂತ ತಲುಪಿದೆ.

ದೂರುದಾರರ ಹೇಳಿಕೆಯ ಪ್ರಕಾರ, ಅವರ ಮಾವ ಪಟೇಲ್ ಮರಿಗೌಡರು 1961–62 ರ ಅವಧಿಯಲ್ಲೇ ಹುಲ್ಲಿನ್ನು ಹಾಗೂ ಇತರೆ ಏಳು ಜನರಿಂದ ಜಾಗವನ್ನು ಖರೀದಿಸಿಕೊಂಡಿದ್ದು, ಆ ಕಾಲದಿಂದಲೇ ಕುಟುಂಬದವರು ಜಾಗದಲ್ಲಿ ಉಳುಮೆ ಮಾಡುತ್ತಾ ಬಂದಿದ್ದೇವೆ ಎಂದರು. ರಾತ್ರಿ ವೇಳೆ ಮನೆ ಮೇಲೆ ಕಲ್ಲು ತೂರಾಟ ನಡೆಸುತ್ತಿರುವುದಾಗಿ ಕೂಡ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆದರೆ ಅವರು ದಾಖಲೆ ತರುವುದಿಲ್ಲ, ಬದಲಾಗಿ ಒತ್ತಡ ಮತ್ತು ಬೆದರಿಕೆ ಮಾಡುತ್ತಿದ್ದಾರೆ.

ಕೆಎಚ್‌ಎಂಗೆ ಡಿಸಿಎಂ ಸ್ಥಾನ ನೀಡಿ

• **ಹಾಸನ:** ರಾಜ್ಯದಲ್ಲಿ ಸಂಪುಟ ಮನಾ ರಚನೆ ಸಾಧ್ಯತೆ ಹಾಗೂ ರಾಜಕೀಯ ಬೆಳವಣಿಗೆಗಳ ಚರ್ಚೆ ತೀವ್ರಗೊಂಡ ರುವ ಹಿನ್ನೆಲೆಯಲ್ಲಿ ಹಿರಿಯ ದಲಿತ ನಾಯಕ ಹಾಗೂ ಸಚಿವ ಕೆ.ಹೆಚ್. ಮುನಿಯಪ್ಪ ಅವರಿಗೆ ಉಪಮುಖ್ಯ ಮಂತ್ರಿ ಸ್ಥಾನ ನೀಡುವಂತೆ ಮಾದಿಗ ದಂಡೋರ ಜಿಲ್ಲಾಧ್ಯಕ್ಷ ಟಿ.ಆರ್. ವಿಜಯಕುಮಾರ್ ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಸಾಮಾಜಿಕ ನ್ಯಾಯದ ತತ್ವಕ್ಕೆ ಬದ್ಧವಾಗಿದ್ದು, ಆ ನಿಟ್ಟಿನಲ್ಲಿ ಅನುಭವಿ ನಾಯಕ ಮುನಿಯಪ್ಪ ಅವರನ್ನು ಉನ್ನತ ಹುದ್ದೆಗೆ ಪರಿಗಣಿಸಬೇಕು ಎಂದು ಆಗ್ರಹಿಸಿದರು. ಮುನಿಯಪ್ಪ ಅವರು ಏಳು ಬಾರಿ ಸಂಸದರಾಗಿ, ಪಕ್ಷದ ಕಟ್ಟಾಳುವಾಗಿ ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರ ಮತ್ತು ರಾಜ್ಯ ರಾಜಕೀಯದಲ್ಲಿ ಸಂಘಟನಾತ್ಮಕ ಅನುಭವ ಹೊಂದಿ ರುವ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಎಲ್ಲಾ ಅರ್ಹತೆ ಹೊಂದಿದ್ದಾರೆ. ಆ ಹುದ್ದೆ ನೀಡಲು ಪ್ರಸ್ತುತ ಸಾಧ್ಯವಾಗದಿದ್ದರೆ ಡಿಸಿಎಂ ಸ್ಥಾನದ ಜತೆಗೆ ಇಂಧನ, ಲೋಕೋಪಯೋಗಿ ಅಥವಾ ಸಮಾಜ ಕಲ್ಯಾಣದಂತಹ ಪ್ರಭಾವಿ ಖಾತೆಗಳನ್ನು ನೀಡಬೇಕು ಎಂದು ಕೋರಿದರು. ಗ್ರೆಸ್ ಪಕ್ಷದ ಬಗ್ಗೆ ಹೆಚ್ಚಿನ ವಿಶ್ವಾಸ ಮೂಡುತ್ತದೆ ಎಂದರು.



ವಾಲಿಬಾಲ್ ಪಂದ್ಯಾವಳಿ

• **ಚನ್ನರಾಯಪಟ್ಟಣ:** ಜಿಲ್ಲೆಯ ಮೇರು ರಾಜಕಾರಣಿ, ಮಾಜಿ ಸಚಿವ ದಿವಂಗತ ಎಚ್.ಸಿ.ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವದ ಅಂಗವಾಗಿ ತಾಲೂಕಿನ ಎಚ್.ಸಿ. ಶ್ರೀಕಂಠಯ್ಯ ಸೇವಾಸಮಿತಿಯಿಂದ ಜೂನ್ 5 ರಿಂದ 7 ರವರೆಗೆ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಸೇವಾಸಮಿತಿ ಅಧ್ಯಕ್ಷ ವಿ.ಎನ್.ಅಶೋಕ್ ಹೇಳಿದರು.

ಪಟ್ಟಣದ ದಿ.ಹೆಚ್.ಸಿ.ಶ್ರೀಕಂಠಯ್ಯ ಸಭಾಂಗಣದಲ್ಲಿ ವಾಲಿಬಾಲ್ ಪಂದ್ಯಾವಳಿ ಕುರಿತಾಗಿ ನಡೆದ ಸೇವಾಸಮಿತಿ ಸದಸ್ಯರು ಮತ್ತು ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಕಂಡ ಧೀಮಂತ ನಾಯಕ, ಸಹಕಾರ ಧುರೀಣ ಮಾಜಿ ಸಚಿವ ಹೆಚ್.ಸಿ.ಶ್ರೀಕಂಠಯ್ಯನವರ 100ನೇ ವರ್ಷದ ಜನ್ಮದಿನಾಚರಣೆಯನ್ನು ತಾಲ್ಲೂಕಿನಲ್ಲಿ ಸ್ಮರಣೀಯವಾಗಿ ಆಚರಿಸುವ ನಿರ್ಧಾರವನ್ನು ಅವರ ಕುಟುಂಬವರ್ಗ ಮತ್ತು ಶ್ರೀಕಂಠಯ್ಯನವರ ಅನುಯಾಯಿಗಳು, ಕಾರ್ಯಕರ್ತರು ಮಾಡಿದ್ದು, ಜುಲೈ 18ರಂದು ಆಚರಣೆಗೆ ಸಕಲ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ. ಇದರ ಸಲುವಾಗಿ ಶ್ರೀಕಂಠಯ್ಯನವರ ಮೊಮ್ಮಗ ಕೆಪಿಸಿಸಿ ಅಧ್ಯಕ್ಷ ಹೆಚ್.ಸಿ.ಲಲಿತ್‌ರಾಘವ್ ರವರು ಈಗಾಗಲೇ ತಮ್ಮ ತಾತನ ಸ್ಮರಣಾರ್ಥ ಹತ್ತಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದ್ದಾರೆ. ತಾಲ್ಲೂಕಿನ ವಿದ್ಯಾವಂತ ನಿರುದ್ಯೋಗಿಗಳು ಕೆಲಸ ಪಡೆಯಲು ನೆರವಾಗಲು, 2ಸಾವಿರ ಯುವಕರಿಗೆ ಕೌಶಲ್ಯ ತರಬೇತಿ, ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್, ಕಂಪ್ಯೂಟರ್ ಕಲಿಕೆಯಂತಹ ತರಬೇತಿ ಕಾರ್ಯಕ್ರಮಗಳು, ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಗುಡಿಕೈಗಾರಿಕೆಗಳ ತರಬೇತಿ ನೀಡುವ ಕೆಲಸ ಮಾಡುತ್ತಿದ್ದಾರೆ.



ಅಂತಿಮ ದರ್ಶನ...

ಸಚಿವ ಡಾ.ಜಿ.ಪರಮೇಶ್ವರ್ ಬೆಂಗಳೂರಿನ ಫೋರ್ಟೀಸ್ ಆಸ್ಪತ್ರೆಯಲ್ಲಿ ವೆಂಕಟರಮಣಪ್ಪರವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.

ಗರಿಷ್ಠ 33° ಕನಿಷ್ಠ 22°

ಹೊಸ ದಿಗಂತ

ಶನಿವಾರ 30 ಮೇ 2026

ತುಮಕೂರು

ಕಿರುಸುದ್ದಿ

ಹಾಸ್ಟೆಲ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಕುಣಿಗಲ್: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ತಾಲೂಕಿನಾದ್ಯಂತ ನಡೆಯುತ್ತಿರುವ ಮೆಟ್ರಿಕ್ ಪೂರ್ವ, ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಬಯಸುವವರಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಹಾಯಕ ನಿರ್ದೇಶಕ ಎಂ ಶಿವಲಿಂಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪಟ್ಟಣದ ಸಮಾಜ ಕಲ್ಯಾಣ ಇಲಾಖಾ ಕಚೇರಿಯಲ್ಲಿ ಪತ್ರಿಕೆ ಯೊಂದಿಗೆ ಮಾತನಾಡಿ ತಾಲೂಕಿನಲ್ಲಿ ರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2026-27 ನೇ ಸಾಲಿಗೆ ಪ್ರವೇಶ ಪಡೆಯಲು ಆಸಕ್ತ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್ ಸೈಟ್ www. Sw. kar. Nic.In ಮೂಲಕ 30 -7- 2026ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಗುಬ್ಬಿ ಸರ್ಕಾರಿ ಕಾಲೇಜು ಪ್ರಾಂಶುಪಾಲರಿಗೆ ಬೀಳ್ಕೊಡುಗೆ

ಗುಬ್ಬಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಪ್ರಾಂಶುಪಾಲರಾಗಿರುವ ಡಾ. ಪ್ರಸನ್ನ ಅವರು ವಯೋ ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ಮೇ 30ರಂದು ಶನಿವಾರ ಬೆಳಿಗ್ಗೆ 10.30ಕ್ಕೆ ಕಾಲೇಜು ಸಭಾಂಗಣದಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಗುಬ್ಬಿ ಕ್ಷೇತ್ರದ ಶಾಸಕ ಎಸ್. ಆರ್. ಶ್ರೀನಿವಾಸ್ ಉದ್ಘಾಟಿಸಲಿದ್ದು, ಕಾಲೇಜಿನ ಶೈಕ್ಷಣಿಕ ಡೀನ್ ಡಾ. ಓ. ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಡಿ.ಎನ್. ಯೋಗೀಶ್ವರಪ್ಪ, ಡಾ. ತಿಪ್ಪೇಸ್ವಾಮಿ ಜಿ., ಕೆ.ಆರ್. ಸತೀಶ್ಚಂದ್ರ, ಎಂ.ಎಸ್. ನಟರಾಜು ಹಾಗೂ ಶಿವಯ್ಯ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಡಾ. ಪ್ರಸನ್ನ ಅವರಿಗೆ ಶುಭ ಹಾರೈಸುವಂತೆ ಕಾಲೇಜು ಆಡಳಿತ ಮಂಡಳಿ ಮನವಿ ಮಾಡಿದೆ.

ಅಂತಾರಾಷ್ಟ್ರೀಯ ಕರಾಟೆ ಪಂದ್ಯಕ್ಕೆ ಪ್ರಣವ್ ಆಯ್ಕೆ



ತಿಪಟೂರು: ನಗರದ ಜೈ ಮಾರುತಿ ಟೇಕ್ವಾಂಡೋ ಕರಾಟೆ ತರಬೇತಿ ಕೇಂದ್ರದ ವಿದ್ಯಾರ್ಥಿ ಪ್ರಣವ್ ಲೋಕೇಶ್ ಥೈಲ್ಯಾಂಡ್‌ನಲ್ಲಿ ಮೇ.30 ಶನಿವಾರ ಹಾಗೂ ಮೇ 31 ಭಾನುವಾರ ನಡೆಯಲಿರುವ ಅಂತರ್‌ರಾಷ್ಟ್ರೀಯ ಟೇಕ್ವಾಂಡೋ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲಿದ್ದಾರೆ ಎಂದು ತರಬೇತುದಾರ ವಿನಯ್.ಟಿ.ಆರ್ ತಿಳಿಸಿದ್ದಾರೆ. ಪ್ರಣವ್ ಲೋಕೇಶ್ ದೀಕ್ಷಾ ಶಾಲೆಯಲ್ಲಿ 8ನೇತರಗತಿ ವ್ಯಾಸಂಗ ಮಾಡುತ್ತಿದ್ದು 2024-25 ಮಹಾರಾಷ್ಟ್ರ ಸಿಬಿಎಸ್‌ಈ ಮಂಡಳಿ ನಡೆಸಿದ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಪಡೆದು ಪ್ರಥಮ ಸ್ಥಾನ ಪಡೆಯುವ ಮೂಲಕ ಅಂತರರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. 2023 ಮಂಗಳೂರು ಪಂದ್ಯಾವಳಿಯಲ್ಲಿ ಚಿನ್ನ, 2025-26 ಬೆಂಗಳೂರು ವಿಭಾಗದಲ್ಲಿ ಬೆಳ್ಳಿ 2022ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಿನ್ಸ್ ಕಪ್ ಪಂದ್ಯಾವಳಿಯಲ್ಲಿ ಕಂಚು. ಪದಕ ಪಡೆಯುವ ಮೂಲಕ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗಳಿಸಿದ್ದಾರೆ.

ಎ.ಗಂಗಾಧರಯ್ಯ ನಿಧನ



ಗುಬ್ಬಿ: ಕರ್ನಾಟಕ ರಾಜ್ಯ ರೈತ ಸಂಘದ ತುಮಕೂರು ಜಿಲ್ಲಾಧ್ಯಕ್ಷ ಎ. ಗೋವಿಂದರಾಜು ಅವರ ಅಣ್ಣ ಎ. ಗಂಗಾಧರಯ್ಯ (70) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಗಂಗಾಧರಯ್ಯ ಅವರು ಹೃದಯಾಘಾತಕ್ಕೊಳಗಾಗಿ ಕೊನೆಯುಸಿರೆಳೆದಿದ್ದು, ಅವರ ನಿಧನದ ಸುದ್ದಿ ಕುಟುಂಬಸ್ಥರು, ಬಂಧು-ಬಳಗ ಹಾಗೂ ಸ್ನೇಹಿತರಲ್ಲಿ ದುಃಖದ ವಾತಾವರಣವನ್ನುಂಟು ಮಾಡಿದೆ. ಮೃತರು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯನ್ನು ಪೆಮ್ಮನಹಳ್ಳಿ ಗ್ರಾಮದ ಮೃತರ ತೋಟದಲ್ಲಿ ಕುಟುಂಬದ ಸದಸ್ಯರು ಹಾಗೂ ಬಂಧುಗಳ ಸಮ್ಮುಖದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ. ಗಂಗಾಧರಯ್ಯ ಅವರ ನಿಧನಕ್ಕೆ ವಿವಿಧ ಸಂಘಟನೆಗಳ ಮುಖಂಡರು, ರೈತ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಸಂತಾಪ ಸೂಚಿಸಿದ್ದಾರೆ.

ನಾಲ್ಕು ಬಾರೀ ಪಾವಗಡ ಶಾಸಕರಾಗಿ ಅಪಾರ ಸೇವೆ

ವೆಂಕಟರಮಣಪ್ಪ ಇನ್ನಿಲ್ಲ



ತುಮಕೂರು/ಪಾವಗಡ: ಜಿಲ್ಲೆಯ ಪಾವಗಡ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿ ನಾಲ್ಕು ಬಾರಿ ವಿಧಾನಸಭೆಗೆಆಯ್ಕೆಯಾಗಿ, 2 ಅವಧಿಗೆಸಚಿವರಾಗಿದ್ದ ಮಾಜಿ ಸಚಿವ ವೆಂಕಟರಮಣಪ್ಪ ಶುಕ್ರವಾರ ಮುಂಜಾನೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು.

ಗುತ್ತಿಗೆದಾರರಾಗಿ ವೃತ್ತಿ ಜೀವನ ಆರಂಭಿಸಿದ ವೆಂಕಟರಮಣಪ್ಪ, 1984 ರಲ್ಲಿ ಪೊನ್ನಸಮುದ್ರ ಮಂಡಲ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಎತ್ತಿನಹಳ್ಳಿ ನರಸಿಂಹರೆಡ್ಡಿಯವರ ಮೂಲಕ ಕಾಂಗ್ರೆಸ್ ಪಕ್ಷದ ಟಿಕೆಟ್ ಗಿಟ್ಟಿಸಿ 1989 ರಲ್ಲಿ ಪ್ರಥಮ ಬಾರಿಗೆ ಪಾವಗಡ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾದರು. 1994ರಲ್ಲಿ ಸೋಮ್ಲನಾಯ್ಕ ವಿರುದ್ಧ ಸೋಲು ಕಾಣುವ ವೆಂಕಟರಮಣಪ್ಪ 1999ರಲ್ಲಿ ಎರಡನೇ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಶಾಸಕರಾಗಿ ಆಯ್ಕೆಯಾದರು.

ಮಾಜಿ ಮುಖ್ಯಮಂತ್ರಿ ದಿವಂಗತ ಎಸ್ ಎಂ ಕೃಷ್ಣ ಅವರಿಗೆ ಅಪ್ತರಾಗಿದ್ದ ವೆಂಕಟರಮಣಪ್ಪ ಪಾವಗಡ ಪಟ್ಟಣಕ್ಕೆ ಕುಡಿಯುವ ನೀರು ಕಲ್ಪಿಸಲು ಉತ್ತರ ಪಿನಾಕಿನಿ ನದಿಗೆ ಅಡ್ಡವಾಗಿ ಚೆಕ್‌ಡ್ಯಾಮ್ ಕಟ್ಟಿಸಿ ಪಾವಗಡ ಜನರ ಕುಡಿಯುವ ನೀರಿನ ದಾಹ ನೀಗಿಸಿದರು.

ಪಕ್ಷೇತರರಾಗಿ ಜಯಭೇರಿ: 2004 ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡಿ ತಿಮ್ಮರಾಯಪ್ಪ ಎದುರು ಸೋಲು ಕಂಡರು. ಮತ್ತೆ 2008ರಲ್ಲಿ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ನಿರಾಕರಿಸಿದಾಗ ಧೃತಿಗೆಡದೆ ಪಕ್ಷೇತರವಾಗಿ ಸ್ಪರ್ಧೆ ಮಾಡಿ ಜಯಭೇರಿ ಗಳಿಸಿ ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಬಿಜೆಪಿ ಸರಕಾರ ಬರಲು ಅಡಿಗಲ್ಲು ಹಾಕಿದರು.

ಬಿಜೆಪಿಯ ಬಿ.ಎಸ್ ಯಡ್ಡಿಯೂರಪ್ಪ ಸರಕಾರದಲ್ಲಿ ಸಣ್ಣ ಕೈಗಾರಿಕೆ ಸಚಿವರಾಗಿ ಕೆಲಸ ಮಾಡಿದರು. ಈ ವೇಳೆ ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿಸಚಿವರಾಗಿಸಹಕರ್ತವ್ಯ ನಿರ್ವಹಿಸಿದರು, ಪಾವಗಡ ಪಟ್ಟಣ ಸಮೀಪ ಕೈಗಾರಿಕಾ ಪಾರ್ಕ್ ಸಹ ನಿರ್ಮಾಣ ಆಗಲು ಕಾರಣರಾದರು.

2013 ರಲ್ಲಿ ವೆಂಕಟರಮಣಪ್ಪ ಅವರು ತಮ್ಮ ಪುತ್ರ ವೆಂಕಟೇಶರವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಕೊಡಿಸಿದ್ದರು ವೆಂಕಟೇಶ್ ಅವರು ಚುನಾವಣೆಯಲ್ಲಿ ಸೋಲು ಕಂಡರು. 2013ರಲ್ಲಿ ಮಗ ವೆಂಕಟೇಶ್ ಚುನಾವಣೆಯಲ್ಲಿ ಸೋಲು ಕಂಡರು ಅಂದು ಸಿದ್ದರಾಮಯ್ಯ ಮುಖ್ಯಮಂತ್ರಿಗಳು ಆಗಿದ್ದರಿಂದ ಸಿದ್ದರಾಮಯ್ಯ ಜತೆ ಅಪ್ತವಾಗಿದರಿಂದ ಪಾವಗಡ ಅಭಿವೃದ್ಧಿಗೆ ಒತ್ತುಕೊಟ್ಟು ಕೆಲಸ ಮಾಡಿದರು. ಇದೆ ಸಂದರ್ಭದಲ್ಲಿ ಪಾವಗಡಕ್ಕೆ ಶಾಶ್ವತ ಕುಡಿಯುವ ನೀರು ಕಲ್ಪಿಸುವ ತುಂಗಭದ್ರ ಹಿನ್ನಿರು ಯೋಜನೆ ಮಂಜೂರು ಮಾಡಿಸಲು ಪ್ರಮುಖ ಪಾತ್ರ ವಹಿಸಿದರು. 2018ರಲ್ಲಿ ಮತ್ತೆ ಕಾಂಗ್ರೆಸ್ ಪಕ್ಷದಿಂದ ತಿಮ್ಮರಾಯಪ್ಪ ವಿರುದ್ಧ ಗೆದ್ದಿದ್ದ ವೆಂಕಟರಮಣಪ್ಪ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರಕಾರದಲ್ಲಿ ಕಾರ್ಮಿಕ ಮತ್ತು ರೇಷ್ಮೆ ಸಚಿವರಾಗಿ, ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಹಲವು ಅಭಿವೃದ್ಧಿ ಕೆಲಸ ಮಾಡಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.

25 ವರ್ಷಗಳ ಸುದೀರ್ಘ ಒಡನಾಟ

ಮಠಕ್ಕೂ ಮಾಜಿ ಸಚಿವ ವೆಂಕಟರಮಣಪ್ಪ ಅವರಿಗೂ ಕಳೆದ 25 ವರ್ಷಗಳ ಸುದೀರ್ಘ ಒಡನಾಟ. ಸದಾಕಾಲ ನಮ್ಮ ಹಿತವನ್ನೇ ಚಿಂತಿಸುತ್ತಿದ್ದ ಜೀವವದು. ಮಠದ ಪ್ರಗತಿಯ ಬಗ್ಗೆ ಅವರು ನೀಡುತ್ತಿದ್ದ ಸಲಹೆಗಳು ಮಾರ್ಗದರ್ಶಕವಾಗಿದ್ದವು. ಅವರ ಸಹಕಾರ, ಪ್ರೀತಿಯ ಸೂಚನೆಯ ಮೇರೆಗೇ ನಾವು ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಸಿದ್ಧರಾಮೇಶ್ವರ ಸಂದೇಶ ಯಾತ್ರೆ ಕೈಗೊಂಡಿದ್ದೆವು.ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ದುಶ್ಚಟ ಮುಕ್ತ ಬದುಕು ಕಟ್ಟಿಕೊಳ್ಳಿ ಎಂದು ಅವರು ಸಮಾಜಕ್ಕೆ ನೀಡುತ್ತಿದ್ದ ಕರೆ ಇಂದಿಗೂ ಕಿವಿಯಲ್ಲಿ ಮಾರ್ದನಿಸುತ್ತಿದೆ. ಪಾವಗಡ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಮತ್ತು ಸಮಾಜದ ಉದ್ಧಾರಕ್ಕಾಗಿ ತಮ್ಮ ಇಡೀ ಬದುಕನ್ನೇ ಅವರು ಸಮರ್ಪಿಸಿಕೊಂಡಿದ್ದರು ಎಂದು ಚಿತ್ರದುರ್ಗ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

> ವೆಂಕಟರಮಣಪ್ಪ ಅವರ ಅಗಲಿಕೆ ಕಾಂಗ್ರೆಸ್ ಪಕ್ಷಕ್ಕೆ ಮತ್ತು ತುಮಕೂರು ಜಿಲ್ಲೆಗೆ ತುಂಬಲಾರದ ನಷ್ಟವಾಗಿದೆ.ಅವರ ಪುತ್ರ ಎಚ್.ವಿ. ವೆಂಕಟೇಶ್ ಈಗ ಪಾವಗಡ ಕ್ಷೇತ್ರದ ಶಾಸಕರಾಗಿದ್ದರೂ, ಜನ ಮಾತ್ರ ವೆಂಕಟರಮಣಪ್ಪ ಅವರನ್ನು ಶಾಸಕ ಎಂದೇ ಕರೆಯುತ್ತಿದ್ದರು. ಅಷ್ಟರ ಮಟ್ಟಿಗೆ ಅವರು ಜನಮನದಲ್ಲಿ ಉಳಿದಿದ್ದರು.
>
> ■ **ಡಾ.ಜಿ.ಪರಮೇಶ್ವರ್, ಶಾಸಕ, ಕೊರಟಗೆರೆ**

ಸಹಕಾರ ಕ್ಷೇತ್ರವು ಬೆಳೆಯಲು ಕೆಎನ್‌ಆರ್ ಕೊಡುಗೆ ಅಪಾರ



ತುಮಕೂರು: ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರವು ಪ್ರಬಲವಾಗಿ ಬೆಳೆಯಲು ಮಾಜಿ ಸಚಿವ ಹಾಗೂ ಶಾಸಕ ಕೆ.ಎನ್. ರಾಜಣ್ಣ (ಕೆಎನ್‌ಆರ್) ಅವರ ಕೊಡುಗೆ ಮತ್ತು ಮಾರ್ಗದರ್ಶನವೇ ಕಾರಣ. ಇದರಿಂದಾಗಿ ಈ ಕ್ಷೇತ್ರದಲ್ಲಿ ಸಾವಿರಾರು ಜನರು ಉದ್ಯೋಗಪಡೆದುಬದುಕುರೂಪಿಸಿಕೊಂಡಿದ್ದಾರೆ ಎಂದು ನಗರಸಭೆ ಮಾಜಿ ಅಧ್ಯಕ್ಷ ಟಿ.ಪಿ. ಮಂಜುನಾಥ್ ಹೇಳಿದರು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಡಿಸಿಸಿ) ನಿರ್ದೇಶಕರಾಗಿ ನೇಮಕಗೊಂಡಿರುವ ಹಿರಿಯ ವಕೀಲ ಪಿ.ಆರ್. ನಾರಾಯಣಗೌಡ ಅವರಿಗೆ ಕೆ.ಎನ್. ಆರ್. ಅಭಿಮಾನಿ ಬಳಗ ಶುಕ್ರವಾರ ಹಮ್ಮಿಕೊಂಡಿದ್ದ ಅಭಿನಂದನಾಸಮಾರಂಭದಲ್ಲಿ ಅವರು ಮಾತನಾಡಿದರು. ಅರ್ಹರನ್ನು ಗುರುತಿಸಿ ಸೂಕ್ತ ಸ್ಥಾನಮಾನ ನೀಡುವ ವಿಶೇಷ ವ್ಯಕ್ತಿತ್ವ ರಾಜಣ್ಣ ಅವರದ್ದಾಗಿದೆ. ಬಡವರ ಬಗ್ಗೆ ಸಹಾನುಭೂತಿ ಹೊಂದಿರುವ ಅವರನ್ನು ನಂಬಿದ ಎಲ್ಲರಿಗೂ ಒಂದಲ್ಲಾ ಒಂದು ರೀತಿಯಲ್ಲಿ ಸ್ಥಾನಮಾನ ಸಿಕ್ಕಿದೆ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಆರ್. ನಾರಾಯಣಗೌಡ, 1994ರಿಂದ ನಾನು ಕೆ.ಎನ್. ರಾಜಣ್ಣ ಅವರ ಜೊತೆಯಲ್ಲಿದ್ದು, ಅವರ ಸೇವಾ ಕಾರ್ಯಗಳನ್ನು ಹತ್ತಿರದಿಂದ ಕಂಡಿದ್ದೇನೆ. ಅವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಶೋಷಿತರು ಹಾಗೂ ಅವಕಾಶ ವಂಚಿತರಿಗೆ ನೆರವಾಗುತ್ತಾ ಬಂದಿದ್ದಾರೆ. ರಾಜಣ್ಣ ಅವರು ಶಾಸಕರಾದ ನಂತರ ಮಧುಗಿರಿ ಕ್ಷೇತ್ರವು ಹಿಂದೆಂದೂ ಕಾಣದ ಅಭಿವೃದ್ಧಿ ಕಂಡಿದೆ.

ಕೆ.ಎನ್. ರಾಜಣ್ಣಗೆ ಮಂತ್ರಿ ಸ್ಥಾನ ಸಿಗಲಿ

ಅಂದುಕೊಂಡಿದ್ದನ್ನು ಬಿಡದೆ ಸಾಧಿಸುವ ಕೆ.ಎನ್. ರಾಜಣ್ಣನವರು ತಮ್ಮನ್ನು ನಂಬಿ ಬಂದವರನ್ನೂ ಕೈಬಿಡುವುದಿಲ್ಲ, ಇಂತಹ ಜನಾನುರಾಗಿ ನಾಯಕರಾದ ಕೆ.ಎನ್. ರಾಜಣ್ಣನವರಿಗೆ ಮಂತ್ರಿ ಸ್ಥಾನ ದೊರೆತರೆ ಹೆಚ್ಚಿನ ಜನರಿಗೆ ಸಹಾಯವಾಗುತ್ತದೆ. ಸರ್ಕಾರ ಸಚಿವ ಸಂಪುಟದಲ್ಲಿ ಇವರಿಗೆ ಅವಕಾಶ ನೀಡಬೇಕು ಎಂದು ಟಿ.ಪಿ. ಮಂಜುನಾಥ್ ಮನವಿ ಮಾಡಿದರು.

ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಜಿಲ್ಲಾ ಕೇಂದ್ರದ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿ, ಅದನ್ನೊಂದು ಮಾದರಿ ಕ್ಷೇತ್ರವನ್ನಾಗಿ ಮಾಡಿದ ಅಭಿವೃದ್ಧಿ ಹರಿಕಾರ ಅವರು ಎಂದು ಶ್ಲಾಘಿಸಿದರು.

ಒಕ್ಕೂಟದ ಜಿಲ್ಲಾಧ್ಯಕ್ಷ ಡಾ. ಧನಿಯಾಕುಮಾರ್, ಮುಖಂಡ ಲಕ್ಷ್ಮೀನಾರಾಯಣ್ ಮತ್ತಿತರರು ಉಪಸ್ಥಿತರಿದ್ದು ಕೆ.ಎನ್. ರಾಜಣ್ಣ ಅವರ ಕೊಡುಗೆಗಳನ್ನು ಕೊಂಡಾಡಿದರು. ವಾಲ್ಮೀಕಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪುರುಷೋತ್ತಮ್, ವಿವಿ ಸಿಂಡಿಕೇಟ್ ಸದಸ್ಯ ಶಿವಣ್ಣ, ನಿವೃತ್ತ ಪೊಲೀಸ್ ಅಧಿಕಾರಿ ನಾಗರಾಜು, ಮುಖಂಡರಾದ ಶಿವಣ್ಣ, ಬಂದ್ರೆಹಳ್ಳಿ ಮಂಜುನಾಥ್, ಮುತ್ತರಾಯಪ್ಪ, ಶಿವಕುಮಾರ್, ಅಬಕಾರಿ ನಾಗರಾಜು, ರಮಣರೆಡ್ಡಿ, ಬಸವರಾಜು, ತಿಪ್ಪೇಸ್ವಾಮಿ, ಗುರುಮೂರ್ತಿ ಮೊದಲಾದವರು ಇದ್ದರು.

ಬೋರ್‌ವೆಲ್ ಇದ್ದರೂ ಟ್ಯಾಂಕರ್ ನೀರು



ಕುಣಿಗಲ್: ಅಂತರ್ಜಲಕುಸಿದ ಗ್ರಾಮಗಳಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆದು ಒಂದೂವರೆ ತಿಂಗಳಾದರೂ ವಿದ್ಯುತ್ ಸಂಪರ್ಕ ಹಾಗೂ ಪಂಪ್ ಮೋಟಾರ್ ಅಳವಡಿಸದೆ ಟ್ಯಾಂಕರ್ ನೀರು ಮುಂದುವರಿಸಿರುವುದಕ್ಕೆ ತಾಪಂ ಆಡಳಿತಾಧಿಕಾರಿ ಕೆ.ಪಿ. ಸಂಜೀವಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ತಾಪಂ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೂಡಲೇ ಪೈಪ್‌ಲೈನ್ ಅಳವಡಿಸಿ ಟ್ಯಾಂಕರ್ ನೀರನ್ನು ನಿಲ್ಲಿಸುವಂತೆ ಪಿಡಿಒಗಳಿಗೆ ಸೂಚಿಸಿದರು. ಸಭೆಯಲ್ಲಿ ಆರ್‌ಎಫ್‌ಒ ಜಗದೀಶ್ ಮಾಹಿತಿ ನೀಡಿ, ತಾಲೂಕಿನಲ್ಲಿ ಕೇವಲ 6% ಅರಣ್ಯ ಪ್ರದೇಶವಿದ್ದು, 19,000 ಸಸಿಗಳ ಪೈಕಿ 8,000 ಸಸಿಗಳನ್ನು ರೈತರಿಗೆ ವಿತರಿಸಲಾಗಿದೆ ಎಂದರು. ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಸತೀಶ್ ಬಾಬು ಮಾತನಾಡಿ, ಕಳೆದ ತಿಂಗಳು ತಾಲೂಕಿನಲ್ಲಿ 140 ನಾಯಿ ಕಡಿತದ ಪ್ರಕರಣಗಳು ದಾಖಲಾಗಿದ್ದು, ಸಂತಾನಹರಣ ಚುಚ್ಚುಮದ್ದು ನೀಡಲು ಕ್ರಮ ವಹಿಸಬೇಕು ಎಂದರು. 32 ಅಂಗನವಾಡಿ ಕೇಂದ್ರಗಳಿಗೆ ನಿವೇಶನವಿಲ್ಲದ ಕಾರಣ, ಹಳೆಯ ಶಾಲಾ ಕಟ್ಟಡಗಳನ್ನು ಬಿಟ್ಟುಕೊಡಲು ಸೂಚಿಸಲಾಯಿತು.

ಮಳೆ ಕೊರತೆಯಿಂದ ಏಪ್ರಿಲ್‌ನ ಬಿತ್ತನೆಗೆ ಹಿನ್ನಡೆಯಾಗಿದ್ದು, ಮುಂದಿನ ದಿನಗಳಲ್ಲಿ ರಾಗಿ ಬೀಜಕ್ಕೆ ಬೇಡಿಕೆ ಬರಲಿದೆ ಎಂದು ಕೃಷಿ ಇಲಾಖೆ ತಿಳಿಸಿತು. ಇನ್ನು, ಯಾವುದೇ ಮಾಹಿತಿ ಇಲ್ಲದೆ ಸಭೆಗೆ ಬಂದಿದ್ದ ಶಿಕ್ಷಣ ಇಲಾಖೆಯ ವ್ಯವಸ್ಥಾಪಕ ನಿರಂಜನ್ ಅವರನ್ನು ಆಡಳಿತಾಧಿಕಾರಿಗಳು ಸಭೆಯಿಂದ ಹೊರಗೆ ಕಳುಹಿಸಿದರು.

ಸಭೆಯಲ್ಲಿ ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿ ವಸಂತ್ ಕುಮಾರ್, ಎ ಡಿ ಎ ಕಾಂತರಾಜು, ವ್ಯವಸ್ಥಾಪಕ ಉಮಾ ಮಹೇಶ್, ಬೆಸ್ಕಾಂ ಎಇಇ ವೀರಭದ್ರ ಚಾರ್, ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಜಿಲ್ಲೆಯಲ್ಲಿ ವಿವಿಧೆಡೆ ಉಚಿತ ಯೋಗ ಶಿಬಿರ

ತುಮಕೂರು: 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಜೂನ್ 1ರಿಂದ ನಗರದ ವಿವಿಧ ಬಡಾವಣೆಗಳಲ್ಲಿ ಉಚಿತ ಯೋಗಾಸನ, ಪ್ರಾಣಾಯಾಮ ಹಾಗೂ ಧ್ಯಾನ ತರಗತಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹನುಮಂತಪುರದ ಪತಂಜಲಿ ಯೋಗ ಶಿಕ್ಷಣ ಸಮಿತಿ ತಿಳಿಸಿದೆ.

ನಗರದ ಹಲವು ಬಡಾವಣೆಗಳ ನಿಗದಿಪಡಿಸಿದ ಸ್ಥಳಗಳಲ್ಲಿ ಬೆಳಗ್ಗೆ 5.30ರಿಂದ 7 ಗಂಟೆಯವರೆಗೆ ಹಾಗೂ ಸಂಜೆ ತರಗತಿಗಳನ್ನು ನಡೆಸಲು ಸಮಿತಿಯ ಮುಖಂಡರ ಸಭೆಯಲ್ಲಿ ತೀರ್ಮಾನಿಸಲಾಗಿದೆ. ನಗರದ ಪ್ರಮುಖ 25ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಈ ಉಚಿತ ಯೋಗ ಶಿಬಿರಗಳು ನಡೆಯಲಿವೆ.

ಪ್ರತಿಭಾ ಪುರಸ್ಕಾರ

ಹುಳಿಯಾರು: ತಾಲೂಕಿನ ಶ್ರೀ ಸೇವಾಲಾಲ್ ಮರಿಯಮ್ಮ ತಾಂಡಾಭಿವೃದ್ಧಿ ಟ್ರಸ್ಟ್ ಹಾಗೂ ತಾಲ್ಲೂಕು ಜಯಂತೋತ್ಸವ ಸೇವಾ ಸಮಿತಿ ವತಿಯಿಂದ ಹುಳಿಯಾರು ಪಟ್ಟಣದ ಸೇವಾಲಾಲ್ ಸರ್ಕಲ್ ನಲ್ಲಿ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ, ತಾಲೂಕಿನ 58 ತಾಂಡಾಗಳ ವ್ಯಾಪ್ತಿಯಲ್ಲಿ 90% ಕ್ಕಿಂತ ಹೆಚ್ಚು ಅಂಕ ಗಳಿಸಿದ ಲಂಬಾಣಿ ಸಮುದಾಯದ 35ಕ್ಕೂ ಹೆಚ್ಚು ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಹಾಗೂ ಎಂಎಸ್ಸಿ ಸೇರಿದಂತೆ ಸ್ನಾತಕೋತ್ತರ ಪದವಿಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ ಈ ಸನ್ಮಾನ ಮಾಡಲಾಯಿತು. ಪುರಸ್ಕಾರದ ಅಂಗವಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತಿಭಾ ಪುರಸ್ಕಾರ ಟ್ರೋಫಿ, ಶ್ರೀ ಸೇವಾಲಾಲ್ ಮಹಾರಾಜರ ಶಾಲು, ಕ್ವಾಲಿಟಿ ಬ್ಯಾಗ್, ನೀರಿನ ಬಾಟಲಿ, ಫೈಲ್, ಪುಸ್ತಕಗಳು ಹಾಗೂ 3,000 ನಗದು ಬಹುಮಾನ ಸೇರಿದಂತೆ ಹಲವು ಅಗತ್ಯ ಸಾಮಗ್ರಿಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಿರಣ್ ಕುಮಾರ್, ಅಧ್ಯಕ್ಷರಾದ ಸಿಂಗಟಗೆರೆ ರಾಜ ನಾಯ್ಕ್, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ರಘುನಾಥ್, ಬೆಂಗಳೂರಿನ ಸಾಮ್ರಾಟ್ ಹೋಟೆಲ್‌ನ ಯತೀವೇಂದ್ರ ನಾಯ್ಕ್ ಭೀಯಾ, ಹುಳಿಯಾರು ಪಟ್ಟಣ ಪಂಚಾಯತ್ ಅಧ್ಯಕ್ಷೆ ಗೀತಾ ರಾಘವೇಂದ್ರ, ಸದಸ್ಯ ಮಂಜಾ ನಾಯ್ಕ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯೆ ಲೋಹಿತಾ ಬಾಯಿ ಇದ್ದರು.

ರಮಾಬಾಯಿ ತ್ಯಾಗದ ಪ್ರತೀಕ



ತುಮಕೂರು: ಇಂದು ಭಾರತದ ಇತಿಹಾಸ ಕಂಡ ಅಪ್ರತಿಮ ಮಹಿಳೆ, ತ್ಯಾಗದ ಪ್ರತೀಕವಾದ ಮಾತೃಶ್ರೀ ರಮಾಬಾಯಿ ಭೀಮರಾವ್ ಅಂಬೇಡ್ಕರ್ ಅವರ 91ನೇ ವರ್ಷದ ಪುಣ್ಯತಿಥಿಯನ್ನು ಅಖಿಲ ಭಾರತ ಡಾ. ಅಂಬೇಡ್ಕರ ಪ್ರಚಾರ ಸಮಿತಿ ಹಾಗೂ ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ವತಿಯಿಂದ ಇಂದು ತುಮಕೂರು ಜಿಲ್ಲಾ ಕೇಂದ್ರ ಕಚೇರಿಯಲ್ಲಿ ಸರಳವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಅಖಿಲ ಭಾರತ ಡಾ. ಅಂಬೇಡ್ಕರ ಪ್ರಚಾರ ಸಮಿತಿ ಹಾಗೂ ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ಜಿಲ್ಲಾಧ್ಯಕ್ಷರಾದ ಎನ್.ಕೆ.ನಿಧಿಕುಮಾರ್ ಮಾತನಾಡುತ್ತಾ ಯುಗದನಾಯಕ ಡಾ. ಬಿ.ಆರ್. ಅಂಬೇಡ್ಕರ್ ಅವರ ಮಹೋನ್ನತ ಸಾಧನೆಗಳ ಹಿಂದೆ ಮತ್ತು ಅವರ ಯಶಸ್ಸಿನ ಪ್ರತಿಯೊಂದು ಹೆಜ್ಜೆಯಲ್ಲೂ ದೃಢವಾಗಿ ನಿಂತ ದಿವ್ಯ ಶಕ್ತಿ ರಮಾಬಾಯಿ ಅವರಾಗಿದ್ದರು. ಬಾಬಾಸಾಹೇಬರು ಲಂಡನ್ ಮತ್ತು ಅಮೆರಿಕಾಗಳಲ್ಲಿ ಉನ್ನತ ಶಿಕ್ಷಣವನ್ನು ಮುಂದುವರಿಸಲು ಹಾಗೂ ಅವರ ನಿಜವಾದ ಸಾಮರ್ಥ್ಯವನ್ನು ಜಗತ್ತಿಗೆ ತೋರ್ಪಡಿಸಲು ರಮಾಬಾಯಿಯವರ ನಿರಂತರ ಬೆಂಬಲ ಮತ್ತು ಅಚಲವಾದ ವಿಶ್ವಾಸವೇ ಪ್ರಮುಖ ಕಾರಣವಾಗಿತ್ತು. ಬಾಲ್ಯದಿಂದಲೇ ಕಷ್ಟಗಳು ಆಕೆಯ ಸುತ್ತಲೂ ಸುತ್ತಿಕೊಂಡಿದ್ದವು. ಅವುಗಳ ಮಧ್ಯದಲ್ಲಿದ್ದುಕೊಂಡೇ ಬದುಕು ಸವೆಸಿದ ರಮಾಬಾಯಿ, ಅಂಬೇಡ್ಕರ್ ಅವರಿಗೆ ಮಡದಿಯಷ್ಟೇ ಅಲ್ಲ ಮಾತೆಯೂ ಆಗಿದ್ದಳೆಂದರೆ ತಪ್ಪಾಗಲಾರದು ಎಂದು ಭಾವುಕರಾಗಿ ನುಡಿದರು.

ನಂತರ ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ಜಿಲ್ಲಾ ಉಪಾಧ್ಯಕ್ಷರಾದ ಲಕ್ಷ್ಮೀನಾರಾಯಣ ಎಸ್ ರವರು ಮಾತನಾಡುತ್ತಾ ತಮ್ಮ ಇಡೀ ಜೀವನವನ್ನು ಸಮಾಜದ ಏಳಿಗೆಗಾಗಿ ಮುಡುಪಾಗಿಟ್ಟ ರಮಾಬಾಯಿ ಅವರು ಕೇವಲ ಬಾಬಾಸಾಹೇಬರ ಪತ್ನಿಯಾಗಿ ಮಾತ್ರವಲ್ಲದೆ, ಸೌಲಭ್ಯಗಳ ವಂಚಿತರ, ಶೋಷಿತರ ಮತ್ತು ದೀನದಲಿತರ ಪಾಲಿನ ಹೆಮ್ಮೆಯ ಮಾತೃಶ್ರೀಯಾಗಿ ಹೊರಹೊಮ್ಮಿದಂತಹವರು ಎಂದು ತಿಳಿಸಿದರು.

ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ಕಾನೂನು ಘಟಕದ ಜಿಲ್ಲಾಧ್ಯಕ್ಷರಾದ ವಸಂತ್ ಕುಮಾರ್, ಎನ್.ಕೆ.ನಿಧಿಕುಮಾರ್, ಎಸ್.ಲಕ್ಷ್ಮೀನಾರಾಯಣ, ವಸಂತ್ ಕುಮಾರ್, ಗೂಳೂರು ರಾಜಣ್ಣ, ಗಂಗಾಧರ್ ಜಿ.ಆರ್, ರಂಜನ್, ದರ್ಶನ್, ಸಿದ್ದಲಿಂಗಯ್ಯ, ರಂಗಸ್ವಾಮಯ್ಯ, ದೇವರಾಜ್, ತ್ಯಾಗರಾಜು ಇದ್ದರು.

ಎಸ್‌ಸಿ, ಎಸ್‌ಟಿ ಉದ್ಯಮಿಗಳ ಅಭಿವೃದ್ಧಿ ಕಾರ್ಯಕ್ರಮ

ಲೀಡ್ ಬ್ಯಾಂಕ್ ಮ್ಯಾನೇಜರ್ ಗೈರಿಗೆ ಅಸಮಾಧಾನ



ತುಮಕೂರು: ನಗರದ ಕೈಗಾರಿಕಾ ಕೇಂದ್ರದಲ್ಲಿ ಕೇಂದ್ರ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ ಹಾಗೂ ಕರ್ನಾಟಕ ಮಹಿಳಾ ಉದ್ಯಮಿಗಳ ಸಂಘದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಎಸ್‌ಸಿ, ಎಸ್‌ಟಿ ಉದ್ಯಮಿಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಲೀಡ್ ಬ್ಯಾಂಕ್ ಮ್ಯಾನೇಜರ್ ಅವರ ಗೈರುಹಾಜರಿಗೆ ಕೌಶಲ್ಯಾಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಮುರುಳೀಧರ ಹಾಲಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತುಮಕೂರು ನಗರದ ವಸಂತನರಸಾಪುರ, ಹಿರೇಹಳ್ಳಿ ಹಾಗೂ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಉದ್ಯಮ ಪ್ರಾರಂಭಿಸಲು ಎಸ್‌ಸಿ, ಎಸ್‌ಟಿ ಉದ್ಯಮಿಗಳಿಗೆ ಹೇರಳ ಅವಕಾಶಗಳಿವೆ. ಆದರೆ, ಈ ಯೋಜನೆಗಳು ಕೇವಲ ಜಾಹೀರಾತಿಗೆ ಸೀಮಿತವಾಗದೆ ಅನುಷ್ಠಾನಗೊಳ್ಳಬೇಕು. ಕೈಗಾರಿಕೆಗಳಿಗೆ ಆರ್ಥಿಕ ನೆರವು ಅತ್ಯಂತ ಮುಖ್ಯವಾಗಿದ್ದು, ಲೀಡ್ ಬ್ಯಾಂಕ್ ಮ್ಯಾನೇಜರ್ ಇಂತಹ ಜಾಗೃತಿ ಸಭೆಗಳಿಗೆ ಬರುವುದಿಲ್ಲ. ಅವರ ನಡೆ ಬಗ್ಗೆ ಸಂಸದರು, ಹಿರಿಯ ಅಧಿಕಾರಿಗಳು ಹಾಗೂ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ದೂರು ನೀಡಲಾಗಿದೆ ಎಂದರು.

ಜಿಲ್ಲಾ ದಲಿತ ಉದ್ಯಮಿಗಳ ಸಂಘದ ಅಧ್ಯಕ್ಷ ಸೇವಂತ್ ವಾಸುದೇವ್ ಮಾತನಾಡಿ, ಕಚ್ಚಾವಸ್ತುಗಳ ಖರೀದಿ, ಮಾರುಕಟ್ಟೆ ಹಾಗೂ ನಿವೇಶನ ಕುರಿತು ಅಧಿಕಾರಿಗಳು ನೀಡುವ ಮಾಹಿತಿಯ ಸದುಪಯೋಗ ಪಡಿಸಿಕೊಳ್ಳಲು ಸಲಹೆ ನೀಡಿದರು. ರಾಷ್ಟ್ರೀಯ ಎಸ್.ಸಿ, ಎಸ್.ಟಿ ಯೋಜನಾಧಿಕಾರಿ ಡಾ. ಕೆ. ಸುರೇಶ್ ಮಾತನಾಡಿದರು.

ಕಾರ್ಯಕ್ರಮವನ್ನು ಕರ್ನಾಟಕ ಮಹಿಳಾ ಉದ್ಯಮಿಗಳ ಸಂಘದ ಅಧ್ಯಕ್ಷೆ ಭುವನೇಶ್ವರಿ ಉದ್ಘಾಟಿಸಿದರು. ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ನಾಗರಾಜು, ಸಂಘದ ಉಪಾಧ್ಯಕ್ಷೆ ಜಗದೀಶ್ವರಿ ಡಿ. ಮತ್ತು ಹಲವು ಎನ್‌ಜಿಒ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಾಲೇಜು ವಾರ್ಷಿಕೋತ್ಸವದಲ್ಲಿ ಡಾ. ಲಕ್ಷ್ಮಣ ದಾಸ್ ಸಲಹೆ

ವಿದ್ಯಾರ್ಥಿ ಜೀವನಕ್ಕೆ ಶ್ರದ್ಧೆ, ಶಿಸ್ತು ಅಗತ್ಯ



ತುಮಕೂರು: ವಿದ್ಯಾರ್ಥಿಗಳ ಜೀವನಕ್ಕೆ ಶ್ರದ್ಧೆ, ಶಿಸ್ತು, ಪರಿಶ್ರಮದ ಜತೆಗೆ ಸೂಕ್ಷ್ಮತೆಯೂ ಅತ್ಯಂತ ಮುಖ್ಯ. ಬದುಕು ನಮ್ಮ ಆಯ್ಕೆಯಲ್ಲೇ ಇರುತ್ತದೆ. ಹಾಗಾಗಿ ಒಂದೆರಡು ಕ್ಷೇತ್ರಕ್ಕೆ ಮಾತ್ರ ಸೀಮಿತರಾಗದೆ, ಎಲ್ಲಾ ಕ್ಷೇತ್ರಗಳಲ್ಲೂ ವಿದ್ಯಾರ್ಥಿಗಳು ತಮ್ಮ ಸಾಧನೆ ತೋರ್ಪಡಿಸಬೇಕು ಎಂದು ಜನಕಥಾ ಕೀರ್ತನಕಾರರಾದ ಡಾ. ಲಕ್ಷ್ಮಣ ದಾಸ್ ಹೇಳಿದರು.

ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾಲೇಜು ವಾರ್ಷಿಕೋತ್ಸವ ಸೃಜನ - 2026 ಸಮಾರಂಭದಲ್ಲಿ ಮಾತನಾಡಿದರು. ಸೃಜನ ಅಮೃತ ಸಿಂಚನ. ಜಗತ್ತಿನಲ್ಲಿ ತಾಯಿಗಿಂತ ಮಿಗಿಲಾದ ವಸ್ತು ಅಥವಾ ಶಕ್ತಿ ಮತ್ತೊಂದಿಲ್ಲ. ತಾಯಿಯೇ ಜಗತ್ತಿಗೆ ಮೊದಲ ಗುರು. ವಿದ್ಯಾರ್ಥಿಗಳಾದ ನೀವೆಲ್ಲರೂ ಸಾಂಸ್ಕೃತಿಕ ಅಸ್ತಿ ಮತ್ತು ಶಕ್ತಿ ಎಂದು ಅವರು ಅಭಿಪ್ರಾಯಪಟ್ಟರು.

ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡುವುದು ಪೋಷಕರ ಕರ್ತವ್ಯ. ವಿದ್ಯಾರ್ಥಿಗಳು ಗುರು-ಹಿರಿಯರ ಬಗ್ಗೆ ಶ್ರದ್ಧಾ ಭಕ್ತಿ ಹೊಂದಿರಬೇಕು. ಜ್ಞಾನದ ಜೊತೆಗೆ ಅಂತಃಕರಣ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ತುಮಕೂರು ವಿವಿ ಕೇವಲ ಕಟ್ಟಡವಲ್ಲ, ಅದಕ್ಕೊಂದು ಆಧ್ಯಾತ್ಮಿಕ ಶಕ್ತಿಯಿದೆ. ಇದು ವಿಜ್ಞಾನ, ತಂತ್ರಜ್ಞಾನ ಹಾಗೂ ತತ್ವ ಆದರ್ಶಗಳನ್ನು ಒಳಗೊಂಡಿರುವ ಮಹಾನ್ ಕಟ್ಟಡ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತುಮ ಕೂರು ವಿವಿ ಕುಲಪತಿಗಳಾದ ಪ್ರೊ. ಎಂ. ವೆಂಕ ಟೇಶ್ವರಲು ಮಾತನಾಡಿದರು.

ವಿವಿಯ ಪರೀಕ್ಷಾಂಗ ಕುಲಸಚಿವರಾದ ಪ್ರೊ. ಹೆಚ್. ಎಸ್. ಮೋಹನ ಮಾತನಾಡಿದರು. ತುಮಕೂರು ವಿವಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀನಿವಾಸ ಎಸ್., ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಸಮಿತಿಯ ಸಂಯೋಜಕರಾದ ಡಾ. ಚಿಕ್ಕಪ್ಪ ಉಡುಗಣಿ, ಡಾ. ಮಂಗಳಗೌರಿ ಎಂ. ಡಾ. ನರೇಂದ್ರ ಎನ್. ಉಪಸ್ಥಿತರಿದ್ದರು.

ಕಿರುಸುದ್ದಿ


ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ರಾಮನಗರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2026-27ನೇ ಸಾಲಿಗೆ ಚನ್ನಪಟ್ಟಣ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲಾಗಿದ್ದು, ಹೊಸದಾಗಿ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು https://shp.karnataka.gov.in/bcwd ಮೂಲಕ 2026ರ ಜೂನ್ 8ರೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ: 8050770004 ಅನ್ನು ಸಂಪರ್ಕಿಸುವಂತೆ ಚನ್ನಪಟ್ಟಣ ತಾಲ್ಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲ್ಲೂಕು ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಪತ್ತೆಗೆ ಮನವಿ

ರಾಮನಗರ: ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿಯ ಅಂಕನಹಳ್ಳಿ ಗ್ರಾಮದಲ್ಲಿ ವಾಸವಿದ್ದ ಸುಬ್ರಹ್ಮಣಿ (60 ವರ್ಷ) ಕಾಣೆಯಾಗಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು ದಾಖಲಾಗಿದೆ.



ಚಹರೆಯ ವಿವರ : ಸಾಧಾರಣ ಶರೀರ, ಎಣ್ಣೆಗೆಂಪು ಬಣ್ಣ, 6 ಅಡಿ ಎತ್ತರ, ಎಡಗಾಲಿನ ಮೊಣಕಾಲಿನ ಮೇಲೆ ಹಳೆ ಗಾಯದ ಗುರುತು ಇರುತ್ತದೆ. ಇವರು ಕಾಣೆಯಾಗುವಾಗ ಬಿಳಿ ಬಣ್ಣದ ನೀಲಿಗೆರೆಯುಳ್ಳ ಶರ್ಟ್ ಮತ್ತು ಕೆಂಪು ಬಣ್ಣದ ಲುಂಗಿ ಧರಿಸಿರುತ್ತಾರೆ. ಇವರು ಕಂಡು ಬಂದರೆ ಆರಕ್ಷಕ ಉಪ ನಿರೀಕ್ಷಕರು, ರಾಮನಗರ (ಗ್ರಾ) ಪೊಲೀಸ್ ಠಾಣೆ, ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ. ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ತೆರಿಗೆ ಅಧಿಕಾರಿಗಳಿಂದ ಜಾಗೃತಿ ಅಭಿಯಾನ



ರಾಮನಗರ: ಕಳೆದ ಏಪ್ರಿಲ್‌ನಿಂದ ಜಾರಿಗೆ ಬಂದಿರುವ ಆದಾಯ ತೆರಿಗೆ ಕಾಯ್ದೆ 2026ರ ಕುರಿತು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಜಾಗೃತಿ ಅಭಿಯಾನ ನಡೆಸಿದರು. ಇಲ್ಲಿನ ಅರ್ಚಕರಹಳ್ಳಿಯಲ್ಲಿರುವ ಯೂನಿವರ್ಸಲ್ ಪಬ್ಲಿಕ್ ಶಾಲೆಯಲ್ಲಿ ರೋಟರಿ ಸಿಲ್ಕ್ ಸಿಟಿ ಸಹಯೋಗದಲ್ಲಿ ಆಯೋಜನೆಯಾಗಿದ್ದ ಪ್ರಾರಂಭ್ 2026 ಕಾರ್ಯಕ್ರಮದಲ್ಲಿ ಅಧಿಕಾರಿಗಳು ನೂತನ ಕಾಯ್ದೆಯಲ್ಲಿನ ಹಲವಾರು ಬದಲಾವಣೆಗಳ ಬಗ್ಗೆ ಮಾಹಿತಿ ಒದಗಿಸಿದರು.

ವಿಶೇಷವಾಗಿ ಎನ್.ಜಿ.ಒಗಳು, ಲಾಭರಹಿತ ಸಂಸ್ಥೆಗಳು, ಟ್ರಸ್ಟ್‌ಗಳು, ಶಾಲಾ ಆಡಳಿತ ಮಂಡಳಿಗಳು 12ಎ ಮತ್ತು 80ಜಿ ನೋಂದಣಿ ಮಾಡಿಕೊಳ್ಳುವುದರಿಂದ ಲಾಭಗಳೇನು ಎಂಬ ವಿಚಾರವನ್ನು ತಿಳಿಯಪಡಿಸಿದರು.

ಈ ಸಂದರ್ಭದಲ್ಲಿ ಬೆಂಗಳೂರುವ ವೃತ್ತ 1ರ ಆದಾಯ ತೆರಿಗೆ ಇಲಾಖೆಯ (ವಿನಾಯಿತಿ) ವಿಭಾಗದ ಅಧಿಕಾರಿ ಲಕ್ಕಪ್ಪ ಎಚ್ ಉದ್ದಣ್ಣನವರ್, ಹರಿಣಿ, ಎಂ.ಎಲ್. ಚಂದ್ರಪ್ರಕಾಶ್ ಮತ್ತು ಜಿಲ್ಲಾ ಆದಾಯ ತೆರಿಗೆ ಅಧಿಕಾರಿ ವಿದ್ಯಾ, ರೋಟರಿ ಸಿಲ್ಕ್ ಸಿಟಿ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಇತರರು ಇದ್ದರು.

ನಗರಸಭಾ ಮಾಜಿ ಸದಸ್ಯ ಕೈಲಾಸ್‌ಭವನ್ ನಿಧನ



ಕನಕಪುರ: ನಗರಸಭಾ ನಾಮನಿರ್ದೇಶನ ಮಾಜಿ ಸದಸ್ಯ ಕೈಲಾಸ್‌ಭವನ್ ಮಹೇಶ್(72) ಗುರುವಾರ ಅನಾರೋಗ್ಯದಿಂದ ನಿಧನರಾಗಿದ್ದಾರೆ.

ಇತ್ತೀಚೆಗೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಮೃತರು ಪತ್ನಿ ಮತ್ತು ಇಬಬರು ಗಂಡು ಮಕ್ಕಳನ್ನು ಅಗಲಿದ್ದಾರೆ. ಮರಳೆ ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ಶುಕ್ರುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.



ಚನ್ನಪಟ್ಟಣದ ಐತಿಹಾಸಿಕ ಕೋಟೆ ಮಾರಮ್ಮ ದೇವಿಯ ಕೊಂಡ ಮಹೋತ್ಸವದಲ್ಲಿ ಅರ್ಚಕರು ದೇವಿಯ ಉತ್ಸವ ಮೂರ್ತಿಯೊಂದಿಗೆ ಭಕ್ತಿಭಾವದಿಂದ ಕೊಂಡ ಪ್ರವೇಶ ಮಾಡುತ್ತಿರುವುದು ಮತ್ತು ನೆರೆದಿರುವ ಸಹಸ್ರಾರು ಭಕ್ತ ಸಮೂಹ.

ಕೋಟೆ ಮಾರಮ್ಮ ಕೊಂಡ ಮಹೋತ್ಸವ

ಚನ್ನಪಟ್ಟಣ: ನಗರದ ಐತಿಹಾಸಿಕ ಹಾಗೂ ಪ್ರಸಿದ್ಧ ಕೋಟೆ ಮಾರಮ್ಮ ದೇವಿಯ ಕೊಂಡ ಮಹೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ಸಂಪ್ರದಾಯ ಮತ್ತು ಜಾನಪದ ಆಚರಣೆಗಳ ಸಮನ್ವಯದ ಈ ಉತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

ಮಹೋತ್ಸವದ ಅಂಗವಾಗಿ ಬುಧವಾರ ದೇವಿಗೆ ಮೊಸರನ್ನ ಮತ್ತು ಎಳನೀರಿನ ತಂಪು ಸಮರ್ಪಿಸಿ, ತಂಬಿಟ್ಟಿನ ಆರತಿ ಬೆಳಗಲಾಯಿತು. ಸಂಜೆ ಕೊಂಡಕ್ಕೆ ಅಗ್ನಿಸ್ಪರ್ಶ ಮಾಡುವ ಮೂಲಕ ಚಾಲನೆ ನೀಡಿ, ಪ್ರಮುಖ ರಸ್ತೆಗಳಲ್ಲಿ ದೇವಿಯ ಪೂಜಾ ಮೆರವಣಿಗೆ ನಡೆಸಲಾಯಿತು.

ಗುರುವಾರ ಮುಂಜಾನೆ ಮಂಗಲ ವಾದ್ಯಗಳ ನಡುವೆ ಅರ್ಚಕರು ದೇವಿಯ ಉತ್ಸವ ಮೂರ್ತಿಯನ್ನು ಹೊತ್ತು ಕೊಂಡ ಪ್ರವೇಶಿಸಿದರು. ಈ ವೇಳೆ ಭಕ್ತರು ಜಯಘೋಷಗಳನ್ನು ಕೂಗುತ್ತಾ ಭಕ್ತಿಪರವಶರಾದರು.

ಬೆಳಗ್ಗಿನಿಂದ ಸಂಜೆಯವರೆಗೆ ನಡೆದ ಸಿಡಿ ಉತ್ಸವದಲ್ಲಿ ಭಕ್ತರು ಮತ್ತು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡರು. ಉತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದ್ದು, ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಶುಕ್ರವಾರವೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.



ಶ್ರೀನಿವಾಸಪುರ ಪಟ್ಟಣದ ಪ್ರಥಮದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ಕಾಲೇಜು ವಾರ್ಷಿಕೋತ್ಸವದಲ್ಲಿ ಕ್ರೀಡಾಸಾಧಕ ವಿದ್ಯಾರ್ಥಿಗಳನ್ನು ಶಾಸಕ ಜಿ.ಕೆ.ವೆಂಕಟಶಿವಾರೆಡ್ಡಿ ಪುರಸ್ಕರಿಸಿದರು.

ಜೆಬಿಎ ಭೂಸ್ವಾಧೀನ ವಿರೋಧಿಸಿ ವಿವಿಧ ಸಂಘಟನೆಗಳಿಂದ ಬೈರಮಂಗಲ ಚಲೋ

ಭೂಮಿ ರೈತರ ಹೃದಯ

ರಾಮನಗರ: ರೈತರ ಪಾಲಿಗೆ ಭೂಮಿ ಕೇವಲ ಮಣ್ಣಲ್ಲ, ಅದು ಅವರ ಹೃದಯ. ಭೂಮಿಯನ್ನು ಕಳೆದುಕೊಂಡರೆ ರೈತರು ತಮ್ಮ ಜೀವವನ್ನೇ ಕಳೆದುಕೊಂಡಂತೆ, ಎಂದು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಕಾರ್ಯದರ್ಶಿ ಡಿ. ರವೀಂದ್ರನ್ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಬೈರಮಂಗಲ ಗ್ರಾಮದಲ್ಲಿ ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ ಅಬ್ಬನಕುಪ್ಪೆಯಿಂದ ಬೈರಮಂಗಲ ವೃತ್ತದವರೆಗೆ ರೈತ, ಕಾರ್ಮಿಕ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಬೃಹತ್ ಪಾದಯಾತ್ರೆ ನಡೆಸಿದರು. ಈ ವೇಳೆ ರಾಜ್ಯ ಸರ್ಕಾರ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಸ್ಥಳೀಯ ಶಾಸಕ ಎಚ್.ಸಿ. ಬಾಲಕೃಷ್ಣ ವಿರುದ್ಧ ತೀವ್ರ ಘೋಷಣೆಗಳನ್ನು ಕೂಗಲಾಯಿತು. ಕಳೆದ 443 ದಿನಗಳಿಂದ ನಿರಂತರ ಹೋರಾಟ ನಡೆಸುತ್ತಿರುವ ರೈತರನ್ನು ಬೆಂಬಲಿಸಿ ಮಾತನಾಡಿದ ರವೀಂದ್ರನ್, ಸರ್ಕಾರ ಹೈಟೆಕ್ ಸಿಟಿ ನಿರ್ಮಿಸುವುದಾದರೆ ನಮ್ಮ ಸಮಾಧಿಗಳ ಮೇಲೆ ನಿರ್ಮಿಸಲಿ, ಆದರೆ ಯಾವುದೇ ಕಾರಣಕ್ಕೂ ಭೂಮಿ ಬಿಡುವುದಿಲ್ಲ ಎಂದರು.

ಬಿಡದಿ ಭಾಗದ 20 ಹಳ್ಳಿಗಳ ಸುಮಾರು 9,600 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಸರ್ಕಾರ ಬಲವಂತವಾಗಿ ವಶಪಡಿಸಿಕೊಳ್ಳಲು ಮುಂದಾಗಿದೆ. 2013ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಶೇ. 75ರಷ್ಟು ರೈತರ ಒಪ್ಪಿಗೆಯಿಲ್ಲದೆ ಭೂಮಿ ಸ್ವಾಧೀನಪಡಿಸಿಕೊಳ್ಳುವಂತಿಲ್ಲ. ಆದರೆ ರಾಜ್ಯ ಸರ್ಕಾರ ಈ ಕಾಯ್ದೆಯನ್ನು ಗಾಳಿಗೆ ತೂರಿ, ಹಳೆಯ ಕರಾಳ ಕಾಯ್ದೆಯಡಿ ಭೂಮಿ ಕಸಿಯಲು ಯತ್ನಿಸುತ್ತಿರುವುದನ್ನು ಕಿಸಾನ್ ಸಭಾ ಖಂಡಿಸಿತು.



> ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಹುರಾಷ್ಟ್ರೀಯ ಕಂಪನಿಗಳ ಗುಲಾಮರಂತೆ ವರ್ತಿಸುತ್ತಿವೆ ಎಂದು ಆರೋಪಿಸಿದರು.
>
> ■ ಬಸವರಾಜು, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಯು. ಬಸವರಾಜು ಮಾತನಾಡಿದರು.

ಸಿಐಟಿಯು ನಾಯಕಿ ಕೆ. ವರಲಕ್ಷ್ಮಿ ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ್, ರಾಜ್ಯ ಕಾರ್ಯದರ್ಶಿ ಭರತ್ ರಾಜ್, ರಾಜ್ಯ ಉಪಾಧ್ಯಕ್ಷ ವೆಂಕಟಾಚಲಯ್ಯ, ಅಖಿಲ ಭಾರತ ವಕೀಲರ ಸಂಘದ ರಾಜ್ಯಾದ್ಯಕ್ಷ ಹರೀಂದ್ರ, ಸಿಐಟಿಯುನ ಗೋಪಲ್ ಗೌಡ, ಯೋಗೇಶ್, ರಾಘವೇಂದ್ರ, ಸಿಪಿಎಂ ರಾಮನಗರ ಜಿಲ್ಲಾಧ್ಯಕ್ಷ ಚಂದ್ರು, ಕೆ ಆರ್ ಎಸ್ ಪಕ್ಷದ ರಾಜ್ಯ ಕಾರ್ಯಧ್ಯಕ್ಷ ರಘು ಜಾಣಗೆರೆ, ರಾಜ್ಯ ಕಾರ್ಯದರ್ಶಿ ಜೀವನ್, ಕೆ ಆರ್ ಎನ್ ಪಕ್ಷದ ಅರುಣ್ ಕುಮಾರ್, ಎಚ್.ಮಲ್ಲೇಗೌಡ, ಟಿಕೆಎಂ ಆಟೋ ಪಾರ್ಟ್ಸ್ ಯೂನಿಯನ್‌ನ ಧನಂಜಯ, ರೈತ ಮುಖಂಡರಾದ ಚೀಲೂರು ಮುನಿರಾಜು, ಕಾರಳ್ಳಿ ಶ್ರೀನಿವಾಸ್, ದೇವರಾಜು, ಎಚ್. ಆರ್.ನವೀನ್ ಕುಮಾರ್ ಹಾಸನ, ಚನ್ನರಾಯಪ್ಪ ಚಿಕ್ಕಬಳ್ಳಾಪುರ, ಪ್ರಭಾ ದೊಡ್ಡಬಳ್ಳಾಪುರ, ರಾಜಮ್ಮ ತುಮಕೂರು, ಮಲ್ಲೇಶ್ ತುಮಕೂರು, ದೇವರಾಜ್ ಹಾರೋಹಳ್ಳಿ, ಜಯಕರ್ನಾಟಕ ಕುಮಾರಸ್ವಾಮಿ, ಬೈರಮಂಗಲ ಕಂಚುಗಾರನಹಳ್ಳಿ ಭೂ ಹಿತರಕ್ಷಣಾ ಸಂಘದ ಅಧ್ಯಕ್ಷ ರಾಮಣ್ಣ, ಖಜಾಂಚಿ ನಾಗರಾಜು, ರೈತ ಮುಖಂಡರಾದ ಪ್ರಕಾಶ್, ಶ್ರೀನಿವಾಸ ರೆಡ್ಡಿ, ರಾಧಾಕೃಷ್ಣ, ಅಶ್ವತ್ಥ್, ಕೃಷ್ಣ, ಜಯಮ್ಮ, ಸುಮಿತ್ರ, ಭಾಗ್ಯ ನಾಗರಾಜ್, ಅನಿತಾ, ಚೈತ್ರಾ, ಜ್ಯೋತಿ, ಮಂಜುನಾಥ್, ಹೇಮಂತ್, ರಾಮಚಂದ್ರ, ಗಿರೀಶ್ ಮತ್ತಿತರರು ಇದ್ದರು.

ಡಿಕೆಶಿ ಪ್ರಮಾಣವಚನಕ್ಕೆ 50ಸಾವಿರ ಮಂದಿ: ಶಾಸಕ

ರಾಮನಗರ: ಡಿ.ಕೆ. ಶಿವಕುಮಾರ್ ಅವರ ಮುಖ್ಯಮಂತ್ರಿ ಪ್ರಮಾಣವಚನ ಸಮಾರಂಭಕ್ಕೆ ಅವರ ತವರು ಜಿಲ್ಲೆ ರಾಮನಗರದಲ್ಲಿ ಭರ್ಜರಿ ಸಿದ್ಧತೆಗಳು ಆರಂಭವಾಗಿವೆ. ಹೈಕಮಾಂಡ್ ಮಟ್ಟದಲ್ಲಿ ಪ್ರಕ್ರಿಯೆಗಳು ಚುರುಕಾಗಿರುವ ಬೆನ್ನಲ್ಲೇ, ಪದಗ್ರಹಣ ಕಾರ್ಯಕ್ರಮಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆಯಿಂದಲೇ ಬರೋಬ್ಬರಿ 40 ರಿಂದ 50 ಸಾವಿರ ಜನರನ್ನು ಬೆಂಗಳೂರಿಗೆ ಕರೆದೊಯ್ಯಲು ಕಾಂಗ್ರೆಸ್ ನಿರ್ಧರಿಸಿದೆ.

ಡಿ.ಕೆ. ಶಿವಕುಮಾರ್ ಪದಗ್ರಹಣ ಕಾರ್ಯಕ್ರಮದ ಸಿದ್ಧತೆಗಳ ಸಂಬಂಧ ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಪ್ರಮುಖ ಮುಖಂಡರು ಹಾಗೂ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಮಾತನಾಡಿ ಅವರು, ಜಿಲ್ಲೆಯಿಂದ ಒಟ್ಟು 40 ರಿಂದ 50 ಸಾವಿರ ಜನಭಾಗಿಯಾಗುವನಿರೀಕ್ಷೆಯಿದೆ. ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕನಿಷ್ಠ ಹತ್ತು ಸಾವಿರ ಕಾರ್ಯಕರ್ತರನ್ನು ಕರೆತರಲು ಯೋಜನೆ ರೂಪಿಸಲಾಗಿದೆ. ಬಹುಶಃ ಮುಂದಿನ ಬುಧವಾರದೊಳಗೆ ಅಥವಾ ಅದಕ್ಕಿಂತ ಮೊದಲೇ ಪ್ರಮಾಣ ವಚನ ಕಾರ್ಯಕ್ರಮ ನಡೆಯುವ ಸಾಧ್ಯತೆಯಿದೆ. ಶನಿವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಪ್ರಮುಖ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ದಿನಾಂಕ ಸೇರಿದಂತೆ ಎಲ್ಲಾ ಅಂತಿಮ ತೀರ್ಮಾನಗಳು ಹೊರಬೀಳಲಿವೆ ಎಂದು ಮಾಹಿತಿ ನೀಡಿದರು. ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ. ಚೇತನ್ ಕುಮಾರ್, ಸಭೆಯಲ್ಲಿ ಮಾಜಿ ಶಾಸಕ ಕೆ.ರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಕೆಎಂಎಫ್ ಮಾಜಿ ಅಧ್ಯಕ್ಷ ಪಿ. ನಾಗರಾಜು, ಜಿ.ಪಂ ಮಾಜಿ ಅಧ್ಯಕ್ಷ ಕೆ. ರಮೇಶ್, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಹೆಚ್.ರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿಎನ್ ಆರ್ ವೆಂಕಟೇಶ್ ನಗರಸಭೆ ಮಾಜಿ



ಚುನಾವಣೆ: ಸಮಾನ ಮನಸ್ಕರ ತಂಡಕ್ಕೆ ಜಯ

ಚನ್ನಪಟ್ಟಣ: ತಾಲ್ಲೂಕಿನ ವಿರೂಪಾಕ್ಷಿಪುರ ಹೋಬಳಿಯ ಹಾರೋಕೊಪ್ಪ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಸಮಾನ ಮನಸ್ಕರ ತಂಡದ ಬೆಂಬಲಿತ ಅಭ್ಯರ್ಥಿಗಳು ಸ್ಪರ್ಧಿಸಿದ್ದ ಎಲ್ಲಾ ಹತ್ತು ಸ್ಥಾನಗಳಲ್ಲೂ ಭರ್ಜರಿ ಗೆಲುವು ಸಾಧಿಸಿ, ಸಂಘದ ಆಡಳಿತದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದಾರೆ. ಸಂಘದ ಒಟ್ಟು 11 ಸ್ಥಾನಗಳ ಪೈಕಿ ಪರಿಶಿಷ್ಟ ಪಂಗಡದ ಮೀಸಲು ಸ್ಥಾನ ಖಾಲಿ ಉಳಿದಿದ್ದು, ಬಾಕಿ 10 ಸ್ಥಾನಗಳಿಗೆ ಶುಕ್ರವಾರ ಮತದಾನ ನಡೆದಿತ್ತು. ಸಾಮಾನ್ಯ ವರ್ಗದ ಐದು ಸ್ಥಾನಗಳಿಗೆ ಎಚ್.ಎಂ. ಕರೀಗೌಡ, ಚಿಕ್ಕತಮ್ಮಯ್ಯ, ಮಹದೇವ ಎಚ್.ಎಂ., ಸಾಗರ್ ಎಚ್.ಎಸ್. ಮತ್ತು ಎಚ್.ಎಸ್. ಪುಟ್ಟರಾಜು ಆಯ್ಕೆಯಾಗಿದ್ದಾರೆ. ಮಹಿಳಾ ಮೀಸಲು ಕ್ಷೇತ್ರದಿಂದ ಕಮಲಮ್ಮ ಹಾಗೂ ತಾಯಮ್ಮ, ಹಿಂದುಳಿದ ವರ್ಗ (ಎ) ಸ್ಥಾನಕ್ಕೆ ಜ್ಯೋತಿ, ಹಿಂದುಳಿದ ವರ್ಗ (ಬಿ) ಸ್ಥಾನಕ್ಕೆ ಡಿ. ಶಿವಲಿಂಗಯ್ಯ ಮತ್ತು ಪರಿಶಿಷ್ಟ ಜಾತಿ ಮೀಸಲು ಸ್ಥಾನಕ್ಕೆ ಚೌಡಯ್ಯ ಪಿ. ಚುನಾಯಿತರಾಗಿದ್ದಾರೆ ಎಂದು ಚುನಾವಣಾಧಿಕಾರಿ ಕೆ.ಟಿ. ಉಮೇಶ್ ಅಧಿಕೃತವಾಗಿ ಘೋಷಿಸಿದರು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಹಾರೋಕೊಪ್ಪ ಗ್ರಾಮದಲ್ಲಿ ಬೆಂಬಲಿಗರು ವಿಜಯೋತ್ಸವ ಆಚರಿಸಿದರು. ಕುವೆಂಪು ಕಲಾಕೇತನ ಬಳಗದ ಅಧ್ಯಕ್ಷ ಎಚ್.ಕೆ. ಪುಟ್ಟಸ್ವಾಮಿ ಮಾತನಾಡಿ, ಸಂಘದ ಅಭಿವೃದ್ಧಿ ಹಾಗೂ ಹಾಲು ಉತ್ಪಾದಕರ ಹಿತರಕ್ಷಣೆಗಾಗಿ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ತಿಳಿಸಿದರು. ಅಕ್ಕೂರು ಪೊಲೀಸ್ ಠಾಣೆಯಿಂದ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿತ್ತು.



ಅಂಗಾಂಶ ಕೃಷಿಗೆ ಬಾಳೆ ಸಸಿಗಳನ್ನು ಬಳಸಿ

ರಾಮನಗರ: ರಾಜ್ಯದಲ್ಲಿ ಬಾಳೆ ಉತ್ಪಾದಕತೆ ಹೆಚ್ಚಿಸಲು ಸಾಂಪ್ರದಾಯಿಕ ಕಂದುಗಳ ಬದಲಿಗೆ ವೈಜ್ಞಾನಿಕ ಅಂಗಾಂಶ ಕೃಷಿ (ಟಿಶ್ಯೂ ಕಲ್ಚರ್) ಬಾಳೆ ಸಸಿಗಳನ್ನು ಬಳಸುವಂತೆ ತೋಟಗಾರಿಕೆ ಇಲಾಖೆ ರೈತರಲ್ಲಿ ವಿನಂತಿಸಿದೆ.

ದೇಶದ ಸರಾಸರಿ ಬಾಳೆ ಇಳುವರಿಗೆ (ಪ್ರತಿ ಹೆಕ್ಟೇರ್‌ಗೆ 42 ಮೆಟ್ರಿಕ್ ಟನ್) ಹೋಲಿಸಿದರೆ, ಕರ್ನಾಟಕದಲ್ಲಿ ಸೂಕ್ತ ಮಾಹಿತಿ ಕೊರತೆಯಿಂದ ಹಳೆಯ ಪದ್ಧತಿ ಮುಂದುವರಿದಿದ್ದು, ಇಳುವರಿ ಕೇವಲ 26 ಮೆಟ್ರಿಕ್ ಟನ್‌ಗೆ ಸೀಮಿತವಾಗಿದೆ. ಈ ಹಿನ್ನೆಲೆಯಲ್ಲಿ ಇಲಾಖೆಯು ಸಾಂಪ್ರದಾಯಿಕ ಮತ್ತು ಅಂಗಾಂಶ ಕೃಷಿ ಸಸಿಗಳ ನಡುವಿನ 13 ಪ್ರಮುಖ ವ್ಯತ್ಯಾಸಗಳನ್ನು ಬಿಡುಗಡೆ ಮಾಡಿದೆ.

ಸಸಿಗಳ ದರ ವಿವರ

- ಎಕ್ಸ್ ಅಗಾರ್ ಹಂತದ ಸಸಿ: ರೂ. 6
- 98 ಕ್ಯಾವಿಟಿಯ ಪ್ರೋಟ್ರೇ ಸಸಿ: ರೂ. 7
- 4★6 ಪಾಲಿಬ್ಯಾಗ್ ಸಸಿ: ರೂ. 12

ಅಂಗಾಂಶ ಕೃಷಿ ಸಸಿಗಳು ಸಂಪೂರ್ಣ ರೋಗರಹಿತವಾಗಿದ್ದು, ಏಕರೂಪದ ಬೆಳವಣಿಗೆಯನ್ನು ಹೊಂದಿರುತ್ತವೆ. ಇದರಿಂದ ಇಡೀ ತೋಟದ ಬೆಳೆ ಒಂದೇ ಸಮಯದಲ್ಲಿ ಕೊಯ್ಲಿಗೆ ಬಂದು ಮಾರುಕಟ್ಟೆ ಬೇಡಿಕೆಗೆ ತಕ್ಕಂತೆ ವ್ಯಾಪಾರ ಮಾಡಲು ನೆರವಾಗುತ್ತದೆ. ಆರಂಭಿಕ ವೆಚ್ಚ ಸ್ವಲ್ಪ ಹೆಚ್ಚಿದ್ದರೂ, ನಿರ್ವಹಣಾ ವೆಚ್ಚ ಕಡಿಮೆಯಾಗಿ ದೀರ್ಘಾವಧಿಯಲ್ಲಿ ರೈತರಿಗೆ ಗರಿಷ್ಠ ಲಾಭ ತಂದುಕೊಡುತ್ತದೆ.

ರೈತರು ದಲ್ಲಾಳಿಗಳಿಂದ ವಂಚನೆಗೊಳಗಾಗದೆ, ಬೆಂಗಳೂರಿನ ಹುಳಿಮಾವಿನಲ್ಲಿರುವ ಜೈವಿಕ ಕೇಂದ್ರದಿಂದ ನ್ಯಾಯೋಚಿತ ದರದಲ್ಲಿ ಸಸಿಗಳನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಅಧಿಕಾರಿಗಳ ಮೊಬೈಲ್ ಸಂಖ್ಯೆ: 7975736459 ಅಥವಾ 9880234281 ಅನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.

ನೌಕರರ ಸಂಘದ ಅಧ್ಯಕ್ಷ ಬಿ.ಕೆ. ವೈದ್ಯೇಗೌಡ

ಚನ್ನಪಟ್ಟಣ: ಬೆಂಗಳೂರು ಗ್ರಾಮಾಂತರ (ದಕ್ಷಿಣ) ಜಿಲ್ಲಾ ಗ್ರಂಥಾಲಯ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ಚನ್ನಪಟ್ಟಣ ತಾಲ್ಲೂಕಿನ ಜೆ. ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ಗ್ರಂಥಾಲಯದ ಮೇಲ್ವಿಚಾರಕ ಬಿ.ಕೆ. ವೈದ್ಯೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಜಿಲ್ಲಾ ಮುಖ್ಯ ಗ್ರಂಥಾಲಯ ಅಧಿಕಾರಿ ಚನ್ನಕೇಶವ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ಜರುಗಿತು. ಸಂಘದ ಗೌರವಾಧ್ಯಕ್ಷರಾಗಿ ರಾಜೇಶ್ (ಕೊಟ್ಟಗಾಳು), ಉಪಾಧ್ಯಕ್ಷರಾಗಿ ಶಿಲ್ಪಾ (ನೀಲಸಂದ್ರ), ಕಾರ್ಯದರ್ಶಿಯಾಗಿ ಚಿಕ್ಕಣ್ಣ (ನೇತೇನಹಳ್ಳಿ) ಹಾಗೂ ಸಂಚಾಲಕರಾಗಿ ನಾಗೇಂದ್ರ (ಚಿಕ್ಕಹಳ್ಳಿ) ಸರ್ವಾನುಮತದಿಂದ ನೇಮಕಗೊಂಡಿದ್ದಾರೆ. ಸಭೆಯಲ್ಲಿ ನರಸಿಂಹಮೂರ್ತಿ, ಕೆಂಪೇಗೌಡ ಸೇರಿದಂತೆ ಹಲವರನ್ನು ನೂತನ ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷ ಬಿ.ಕೆ. ವೈದ್ಯೇಗೌಡ ಮಾತನಾಡಿ, ಗ್ರಾಮೀಣ ಭಾಗದ ಗ್ರಂಥಾಲಯಗಳನ್ನು ಕೇವಲ ಪುಸ್ತಕ ಸಂಗ್ರಹಣಾ ಕೇಂದ್ರಗಳನ್ನಾಗಿ ಮಾಡದೆ, ಜ್ಞಾನ ವಿಸ್ತರಣೆಯ ಸಕ್ರಿಯ ಕೇಂದ್ರಗಳನ್ನಾಗಿ ರೂಪಿಸಲಾಗುವುದು. ನೌಕರರ ಸಮಸ್ಯೆಗಳಿಗೆ ಸ್ಪಂದಿಸುವ ಜೊತೆಗೆ ಡಿಜಿಟಲ್ ವ್ಯವಸ್ಥೆ ಅಳವಡಿಕೆ ಹಾಗೂ ಓದುವ ಅಭಿರುಚಿ ಬೆಳೆಸುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗುವುದು ಎಂದರು.

ಮುಂಗಾರು ಉತ್ಸವ ಕಾರ್ಯಕ್ರಮದಲ್ಲಿ ಚಿಕ್ಕಮರಿಯಪ್ಪಗೌಡ ಕರೆ

ಜನಪದ ಕಲೆ, ಸಂಸ್ಕೃತಿ ಉಳಿಸಿ ಬೆಳೆಸಿ

ಕನಕಪುರ: ಮಾನವನ ಹುಟ್ಟು ಮತ್ತು ಬೆಳವಣಿಗೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ನಮ್ಮ ಜನಪದ ಕಲೆಗಳನ್ನು ಉಳಿಸಿ, ಬೆಳೆಸುವತ್ತ ನಾವೆಲ್ಲರೂ ಗಮನಹರಿಸಬೇಕಾಗಿದೆ ಎಂದುರಾಜ್ಯ ಪ್ರಶಸ್ತಿ ಪುರಸ್ಕೃತ ಚಿಕ್ಕಮರಿಯಪ್ಪಗೌಡ ಅವರು ತಿಳಿಸಿದರು.

ಇಲ್ಲಿನ ಶನೈಶ್ಚರಸ್ವಾಮಿ ದೇವಸ್ಥಾನದ ಆವರಣದಲ್ಲಿ ಸುಗ್ಗಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆ ಹಮ್ಮಿಕೊಂಡಿದ್ದ ಮುಂಗಾರು ಉತ್ಸವ - 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾಗತೀಕರಣದ ಅಬ್ಬರದಿಂದಾಗಿ ನಮ್ಮ ಸಾಂಪ್ರದಾಯಿಕ ಕಲೆಗಳು ನಶಿಸುತ್ತಿವೆ. ಇಂದಿನ ಯುವ ಪೀಳಿಗೆಯು ಪಾಶ್ಚಾತ್ಯ ಸಂಗೀತಕ್ಕೆ ಮಾರುಹೋಗಿ, ಗ್ರಾಮೀಣ ಸೊಗಡಿನ ಕಲೆಗಳಿಂದ ದೂರ ಸರಿಯುತ್ತಿರುವುದು ವಿಷಾದನೀಯ ಎಂದರು.

ಮುಖ್ಯ ಅತಿಥಿಯಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಫೆಲೋಶಿಪ್ ಪುರಸ್ಕೃತ ಹಾಗೂ ದಿವ್ಯಾ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಸಿ. ಸುರೇಶ್ ಮಾತನಾಡಿ, ಹಳ್ಳಿಗಳಲ್ಲಿ ಹುಟ್ಟಿ ತಲೆಮಾರುಗಳಿಂದ ಹರಿದುಬಂದಿರುವ ಜನಪದವು ನಮ್ಮ ನಾಡಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮೂಲ ಬೇರಾಗಿದೆ. ಇದು ಸಾಮಾನ್ಯ ಜನರ ದಿನನಿತ್ಯದ ಬದುಕು, ಶ್ರಮ ಮತ್ತು ಸಂಭ್ರಮದ ಅಭಿವ್ಯಕ್ತಿಯಾಗಿದ್ದು, ಇದನ್ನು ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.



ಸಂಸ್ಥೆಯ ಕಾರ್ಯದರ್ಶಿ ಕೆ. ಕಾಳಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ವೇಳೆ ಡೊಳ್ಳು ಕುಣಿತ, ಪೂಜಾ ಕುಣಿತ ಹಾಗೂ ಜಾನಪದ ಗಾಯನ ತಂಡಗಳು ನೆರೆದಿದ್ದ ಪ್ರೇಕ್ಷಕರ ಗಮನ ಸೆಳೆದವು.

ತಟ್ಟಿಗುಪ್ಪೆ ದಿಲೀಪ್, ಹೇರಂದ್ಯಾಪನಹಳ್ಳಿ ಗ್ರಾ.ಪಂ ಮಾಜಿ ಸದಸ್ಯ ವೀರಭದ್ರೇಗೌಡ, ಬಿಜ್ಜಹಳ್ಳಿ ಕೆಂಪಲಿಂಗಯ್ಯ, ಊರಗೌಡ ನಾಗರಾಜು, ರಾಜಣ್ಣ ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳು, ಗ್ರಾಮಸ್ಥರು ಭಾಗವಹಿಸಿದ್ದರು.

ಹೈಕಮಾಂಡ್ ತೀರ್ಮಾನಕ್ಕೆ ಗೌರವ: ಸಿದ್ದರಾಮಯ್ಯ ರಾಜೀನಾಮೆ

ಡಿ.ಕೆ.ಶಿವಕುಮಾರ್ ಮುಂದಿನ ಸಿಎಂ

ಮಾಗಡಿ: ಕಾಂಗ್ರೆಸ್ ಹೈಕಮಾಂಡ್ ತೀರ್ಮಾನದಂತೆ ಮುಖ್ಯಮಂತ್ರಿ ಪದವಿಗೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ್ದು, ಮುಂದಿನ ಮುಖ್ಯಮಂತ್ರಿಯಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ತೋಟದ ಮನೆಯಲ್ಲಿ ಪ್ರಮುಖ ಮುಖಂಡರೊಂದಿಗೆ ಸಿದ್ದರಾಮಯ್ಯ ಅವರ ರಾಜೀನಾಮೆ ಕುರಿತು ಮಾಹಿತಿ ವಿನಿಮಯ ಮಾಡಿಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೊಂದಿಗಿನ ದಶಕಗಳ ಒಡನಾಟವನ್ನು ಸ್ಮರಿಸಿ ಭಾವುಕರಾದರು.

ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ. ಡಿ.ದೇವರಾಜ ಅರಸು ಅವರ ನಂತರ 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ತತ್ವದಡಿ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಧೀಮಂತ ಜಾತ್ಯತೀತ ನಾಯಕ. ಅಧಿಕಾರಕ್ಕೆ ಅಂಟಿಕೊಳ್ಳದೆ ಹೈಕಮಾಂಡ್ ಆದೇಶ ಗೌರವಿಸಿ ಅವರು ರಾಜೀನಾಮೆ ನೀಡಿದ್ದಾರೆ ಎಂದು ಶ್ಲಾಘಿಸಿದರು. ಡಿ.ಕೆ.ಶಿವಕುಮಾರ್ ಅವರು ಮುಂದಿನ ಸಿಎಂ ಆಗುತ್ತಿರುವುದು ಹೆಮ್ಮೆಯ ಸಂಗತಿಯಾಗಿದ್ದು, ಅವರ ನೇತೃತ್ವದಲ್ಲಿ ಸರ್ಕಾರ ಮತ್ತಷ್ಟು ಜನಪರ ಆಡಳಿತ ನೀಡಲಿದೆ ಎಂದು ಶುಭ ಕೋರಿದರು.



ಪುರಸಭೆ ಮಾಜಿ ಸದಸ್ಯ ನರಸಿಂಹಶೆಟ್ಟಿ, ಹಿರಿಯರಾದ ಡ್ರೈವರ್ ಎಚ್.ನಾರಾಯಣಪ್ಪ, ಕೃಷ್ಣಪ್ಪ, ಚಂದ್ರಯ್ಯ, ತೇಜಸ್‌ಕುಮಾರ್, ಸಿದ್ದೇಗೌಡ, ಗಂಗಣ್ಣ, ನಾಗರಾಜು, ಬಸವರಾಜು, ಮಹದೇವ್, ಬಾಲ ಚಿಡಿಭ್ರಜಡಿಥಿ, ರಘುಜವರಪ್ಪ, ನವೀನ್, ಬಲರಾಮ್ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು. ಇದೇ ವೇಳೆ ಪುರಸಭೆ ಮಾಜಿ ಸದಸ್ಯ ನರಸಿಂಹಶೆಟ್ಟಿ, ಹಿರಿಯರಾದ ಡ್ರೈವರ್ ಎಚ್.ನಾರಾಯಣಪ್ಪ, ಪೆಟ್ರೋಲ್ ಬಂಕ್ ಮಾಲೀಕ ಕೃಷ್ಣಪ್ಪ, ಚಂದ್ರಯ್ಯ, ತೇಜಸ್‌ಕುಮಾರ್, ಸಿದ್ದೇಗೌಡ, ಕುಂಬಳಕಾಯಿ ಗಂಗಣ್ಣ, ಮೊಗಣ್ಣನಾಗರಾಜು, ಬಸವರಾಜು, ಮಹದೇವ್, ಕೆ.ವಿ.ಬಾಲು, ರಘುಜವರಪ್ಪ, ನವೀನ್, ಬಲರಾಮ್, ಮಾಡಬಾಳ್ ಕಾಂತರಾಜ್, ಮಾದಣ್ಣ, ಜಿ.ವೆಂಕಟೇಶ್, ರೇಷ್ಮೆ ಹುರಿ ಕಾರ್ಖಾನೆ ಮಾಲೀಕ ರಮೇಶ್ ಇದ್ದರು.

ಕಿರುಸುದ್ದಿ

ಕಂಕ್ರಷ್ ಕಾರ್ಯಕರ್ತೆಯರ ಹುದ್ದೆಗಳಿಗೆ ಅರ್ಜಿ ಆಹ್ವಾನ


ಕೋಲಾರ: ಬಂಗಾರಪೇಟೆ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆಯ 06 ಅಂಗನವಾಡಿ ಕಂಕ್ರಷ್ ಕೇಂದ್ರಗಳಾದ ಹುದುಕಳ, ಗಂಗಮ್ಮನಪಾಳ್ಯ, ದೇಶಿಹಳ್ಳಿ, ನೆಹರು ನಗರ, ಫಲವತ್ತಿಮ್ಮನಹಳ್ಳಿ, ಗೌತಮ್ ನಗರಗಳಲ್ಲಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಖಾಲಿಯಿರುವ ಹುದ್ದೆಗಳಿಗೆ ಗೌರವಧನ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಜೂನ್ 30 ರೊಳಗೆ ಸಲ್ಲಿಸಬಹುದಾಗಿದ್ದು, ಶಿಶುವಿಹಾರದ ಕೆಲಸಕ್ಕೆ ಪಿ.ಯು.ಸಿ 2ನೇ ವರ್ಷ ಪಾಸಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 7795645163 ಹಾಗೂ ವಿವೇಕಾನಂದ ಬಸ್‌ಸ್ಟಾಪ್ ಯುನಿ ಯನ್ ಬ್ಯಾಂಕ್ ಆಫ್ ಇಂಡಿಯಾ ಕಟ್ಟಡದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದೆಂದು ಬಂಗಾರಪೇಟೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ಪಾಸುಗಳಿಗೆ ಅರ್ಜಿ

ಕೋಲಾರ: ಪ್ರಸಕ್ತ ಸಾಲಿನಲ್ಲಿ ಶಾಲಾ/ಕಾಲೇಜು ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಮೇ 29 ರಿಂದ ಸೇವಾಸಿಂಧು ಆನ್‌ಲೈನ್ ಮುಖಾಂತರ ಸೇವಾಸಿಂಧು ಪೋರ್ಟಲ್ ಐಡಿ URL- <http://sevasinduservices.karnataka.gov.in/buspassservices/> ಮುಖಾಂತರ ಅರ್ಜಿಗಳನ್ನು ಸಲ್ಲಿಸಿ, ಜೂನ್ 01 ರಿಂದ ಕರ್ನಾಟಕ-01 ಕೇಂದ್ರಗಳಿಗೆ ಹಾಜರಾಗಿ ಸೂಚಿತ ದಾಖಲೆಗಳನ್ನು ಸಲ್ಲಿಸಿ ಹಾಗೂ ನಿಗದಿಪಡಿಸಿದ ಮೊತ್ತ ಪಾವತಿಸಿ ಪಾಸುಗಳನ್ನು ಪಡೆಯಬಹುದೆಂದು ಕ.ರಾ.ರ.ಸಾ.ನಿಮಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಟೆಕ್ ಜಿಲ್ಲಾಧ್ಯಕ್ಷರಾಗಿ ಹೊನ್ನೇನಹಳ್ಳಿ ಯಲ್ಲಪ್ಪ

ಕೋಲಾರ: ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಇಂಟಕ್ ವಿಭಾಗದ ಅಧ್ಯಕ್ಷ ಡಾ.ಜಿ.ಸಂಜೀವ್ ರೆಡ್ಡಿ ಆದೇಶ ದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅನುಮತಿ ಮೇರೆಗೆ ಇಂಟೆಕ್ ರಾಜ್ಯಾಧ್ಯಕ್ಷ ಲಕ್ಷ್ಮೀ ವೆಂಕಟೇಶ್ ಅವರು ಕೋಲಾರ ಜಿಲ್ಲಾ ಇಂಟಕ್ ವಿಭಾಗದ ಅಧ್ಯಕ್ಷರಾಗಿ ಹೊನ್ನೇನಹಳ್ಳಿ ಗ್ರಾಮದ ಹೆಚ್.ಎಂ ಯಲ್ಲಪ್ಪ ಅವರನ್ನು ತಕ್ಷಣದಿಂದ ಜಾರಿಗೆ



ಬರುವಂತೆ ಮುಂದಿನ ಮೂರು ವರ್ಷಗಳ ಅವಧಿಗೆ ಮರು ನೇಮಕ ಮಾಡಲಾಗಿದೆ. ತಾವು ಕೂಡಲೇ ಅಧಿಕಾರ ವಹಿಸಿಕೊಂಡು, ತಮ್ಮ ಜಿಲ್ಲೆ ಹಾಗೂ ರಾಜ್ಯದಲ್ಲಿ ಇಂಟಕ್ ಪರವಾಗಿ ಕಾರ್ಮಿಕರ ಸಂಘವನ್ನು ರಚಿಸಿ ಸದಸ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೊಂದಾಯಿಸಿ, ಪಕ್ಷದ ಮುಖಂಡರ ಮಾರ್ಗ ದರ್ಶನ ಹಾಗೂ ಸ್ಥಳೀಯ ನಾಯಕರ ಸಹಕಾರದೊಂದಿಗೆ ತಮಗೆ ನೀಡಲಾಗಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ, ಪಕ್ಷದ ಸಂಘಟನೆಗೆ ಶ್ರಮಿಸುವಂತೆ ಆದೇಶ ಪತ್ರದಲ್ಲಿ ಸೂಚಿಸಲಾಗಿದೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಇಂದು

ಕೋಲಾರ: ಲಯನ್ಸ್ ಕ್ಲಬ್ ಆಫ್ ಕೋಲಾರ, ಲೈಫ್ ಹೆಲ್ತ್ ಕೇರ್ ಪಾಲಿಕ್ಲಿನಿಕ್ ಮತ್ತು ಬಿಂದುಮಾಳ್ಯಂ ಚಾರಿಟ ಬಲ್ ಟ್ರಸ್ಟ್ ಇವರ ಸಹಯೋಗದಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ನಗರದ ಕಠಾರಿಪಾಳ್ಯದ ಮಿನಿ ಬಿಂದುಮಾಳ್ಯಂ ಕಲ್ಯಾಣಮಂಟಪದಲ್ಲಿ ಮೇ.31 ರ ಭಾನುವಾರ ಬೆಳಗ್ಗೆ 9-00 ರಿಂದ ಸಂಜೆ 5-00 ಗಂಟೆಯವ ರೆಗೆ ಹಮ್ಮಿಕೊಳ್ಳಲಾಗಿದೆ. ಸ್ತನ ಕ್ಯಾನ್ಸರ್ (ಮಹಿಳೆಯರಿಗೆ) 40 ವರ್ಷ ಮೇಲ್ಪಟ್ಟವರಿಗೆ, ಗರ್ಭಕಂಠ ಕ್ಯಾನ್ಸರ್ (21 ರಿಂದ 65 ವರ್ಷದ ಮಹಿಳೆಯರಿಗೆ) ಬಾಯಿ ಕ್ಯಾನ್ಸರ್ (ತಂಬಾಕು, ಗುಟ್ಕಾ, ಬೀಡಿ ಸೇದುವವರಿಗೆ) ಶ್ವಾಸಕೋಶ ಕ್ಯಾನ್ಸರ್ (ಧೂಮಪಾನ ಮಾಡುವವರಿಗೆ) ತಪಾಸಣೆಯನ್ನು ನಡೆಸಲಾಗುವುದು. 5000ರೂಗಳ ಸ್ಕ್ಯಾನಿಂಗ್ ಮತ್ತು ತಪಾಸಣೆಯನ್ನು ಉಚಿತವಾಗಿ ಪಡೆಯಬಹುದು. 30-05-2026 ರೊಳಗೆ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9448858655 ಸಂಪರ್ಕಿಸಬಹುದು.

ಸಹಾಯಧನಕ್ಕಾಗಿ ಅರ್ಜಿ

ಚಿಕ್ಕಬಳ್ಳಾಪುರ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರು ವಸತಿ ರಹಿತರಾಗಿದ್ದು, ಟೆಂಟು, ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿದ್ದು, ತುಂಬಾ ತೊಂದರೆ ಅನುಭವಿಸುತ್ತಿರುವ ಅಲೆಮಾರಿ ಸಮುದಾಯದವರಿಗೆ 2026-27ನೇ ಸಾಲಿನಲ್ಲಿ ಸಾಲ ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿಯ ಅಲೆಮಾರಿ, ಅರೆ ಅಲೆಮಾರಿ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಜನಾಂಗದವರಿಗೆ ನಿವೇಶನ ಲಭ್ಯವಿರುವವರಿಗೆ ಮನೆ ನಿರ್ಮಾಣ ಮಾಡಲು ಸಹಾಯಧನ ಕೋರಿ ಆಫ್ ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಜೂನ್ 15 ರವರೆಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ:08156-277116 ಕ್ಕೆ ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ತೇಜಾನಂದರೆಡ್ಡಿ ರವರು ತಿಳಿಸಿದ್ದಾರೆ.



ಕೋಲಾರ ನಗರದ 5ನೇ ವಾರ್ಡ್ ವ್ಯಾಪ್ತಿಯ ಕುರುಬರಪೇಟೆ ನಿವಾಸಿಗಳು ನೀರಿನ ಸಮಸ್ಯೆ ನಿವಾರಣೆಗೆ ಕೊಳವೆ ಬಾವಿಯ ನೀರಿನ ಸಂಪರ್ಕ ಕಲ್ಪಿಸಿ ಸಮಸ್ಯೆ ಬಗೆಹರಿಸಲು ಕೋಲಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ನೀರಿನ ಸಮಸ್ಯೆ ಬಗೆಹರಿಸಲು ಮನವಿ

ಕೋಲಾರ: ಕೋಲಾರ ನಗರದ 5ನೇ ವಾರ್ಡ್ ವ್ಯಾಪ್ತಿಯ ಕುರುಬರಪೇಟೆ ನಿವಾಸಿಗಳು ಕಳೆದ ಐದು ವರ್ಷಗಳಿಂದ ಗೃಹಬಳಕೆ ಮತ್ತು ಶುದ್ಧ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಎದುರಿಸುತ್ತಿದ್ದು, ಕೊಳವೆ ಬಾವಿಯ ನೀರಿನ ಸಂಪರ್ಕ ಕಲ್ಪಿಸಿ ಸಮಸ್ಯೆ ಬಗೆಹರಿಸಲು ಕುರುಬರಪೇಟೆಯ ನಿವಾಸಿಗಳು ಕೋಲಾರ ಜಿಲ್ಲಾಧಿಕಾರಿಗಳು ಹಾಗೂ ಕೋಲಾರ ನಗರಸಭೆಯ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಯರಗೋಳ್ ಜಲಾಶಯದ ನೀರಿನ ಸಂಪರ್ಕ ಇದ್ದರೂ ಸಮಸ್ಯೆ ಬಗೆಹರಿದಿಲ್ಲ, ಜಲಾಶಯದ ಹತ್ತಿರ ವಿದ್ಯುತ್ ಇಲ್ಲವೆಂದೂ, ಪೈಪ್ ಲೈನ್ ಒಡೆದುಹೋಗಿದೆಯೆಂದು ವಾರಗಟ್ಟಲೆ ನೀರು ಸರಬರಾಜು ಮಾಡುವುದಿಲ್ಲವೆಂದು ದೂರಿದ್ದಾರೆ. 2015-16 ರಲ್ಲಿ ನಗರೋತ್ಥಾನ ನಗರ ಯೋಜನೆಯಡಿ ವಾರ್ಡಿನ ಗಣೇಶ ವಿಸರ್ಜನೆ ಕೊಳದ ಹತ್ತಿರ ಸ್ಥಾಪಿಸಿದ ಶುದ್ಧ ಕುಡಿಯುವ ನೀರಿನ ಘಟಕವನ್ನು ನೀರಿಲ್ಲದ ಕಾರಣ ಸ್ಥಗಿತಗೊಳಿಸಿದ್ದು ವಾರ್ಡಿನ ಜನತೆ ಶುದ್ಧ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದು ಅದಕ್ಕೂ ಕೇಳವೆ ಬಾವಿ ನೀರಿನ ಸಂಪರ್ಕ ಕಲ್ಪಿಸಿ ಘಟಕವ ದುರಸ್ಥಿಗೊಳಿಸಿ ಮರುಚಾಲನೆ ಮಾಡಲು ಮನವಿ ಮಾಡಿದರು. 5ನೇ ವಾರ್ಡ್ ಕುರುಬರಪೇಟೆ ನಿವಾಸಿಗಳಾದ ಮಾಜಿ ಸೈನಿಕರಾದ ವಿ.ನಾರಾಯಣಪ್ಪ, ಬೆಮಲ್ ಶ್ರೀನಿವಾಸ್, ಶಂಕರನಾರಾಯಣಪ್ಪ, ಸತೀಶ್, ಚಿಕ್ಕಮಲ್ಲಪ್ಪ, ಮಹೇಶ್ ಹಾಗೂ ಅಪ್ಪಿ ನಗರಸಭೆ ಆಯುಕ್ತರಿಗೆ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮನವಿ ಸಲ್ಲಿಸಿ ಸಮಸ್ಯೆ ಬಗೆಹರಿಸಲು ಮನವಿ ಮಾಡಿದರು.



ಕೋಲಾರದ ಶ್ರೀ ರೇಣುಕಾ ಯಲ್ಲಮ್ಮ ದೇವಿಯ ಜಾತ್ರಾ ಮಹೋತ್ಸವ ತಾಲೂಕಿನ ವೀರಾಪುರ ಗ್ರಾಮಕ್ಕೆ ಡಿಐಜಿಪಿ ಡಿ.ದೇವರಾಜ ಭಾಗವಹಿಸಿದ್ದರು. ಶಿವು ಕ್ಲಿಕ್, ಕೆಎಂಎಫ್ ನಿರ್ದೇಶಕ ನಾಗರಾಜ, ಚಲಪತಿ, ಸೋಮಶೇಖರ್, ವೆಂಕಟೇಶ್, ವಕ್ಕಲೇರಿ ರಾಜಪ್ಪ, ಲಕ್ಷ್ಮಿಪತಿ, ಗುಣಶೇಖರ್, ಗೋವಿಂದರಾಜು, ರಂಜಿತ್, ಚಲಪತಿ, ನಿತಿನ್, ನರಸಾಪುರ, ಶೇಖರ್, ರಾಜಣ್ಣ ಕುರುಗಲ್ ಸಂದೀಪ್ ಇದ್ದರು.

ಕಾಂಗ್ರೆಸ್ ಹೈಕಮಾಂಡ್‌ಗೆ ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಮನವಿ

ಕೆಎಚ್‌ಎಂಗೆ ಡಿಸಿಎಂ ಸ್ಥಾನ ನೀಡಿ

ಕೋಲಾರ: ರಾಜ್ಯ ಆಹಾರ ಪೂರೈಕೆ ಖಾತೆ ಸಚಿವ ಕೆ.ಹೆಚ್.ಮುನಿಯಪ್ಪ ಅವರನ್ನು ಉಪ ಮುಖ್ಯ ಮಂತ್ರಿಯಾಗಿ ನೇಮಕ ಮಾಡಲು ಪಕ್ಷದ ಹೈಕಮಾಂಡ್‌ಗೆ ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರವಾಗಿ ಜಿಲ್ಲಾಧ್ಯಕ್ಷ ಲಕ್ಷ್ಮೀನಾರಾಯಣ ಮನವಿ ಮಾಡಿದರು.

ಈ ಸಂಬಂಧ ನಗರದ ಪತ್ರಕರ್ತರ ಭವನದಲ್ಲಿನ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯ,ರಾಷ್ಟ್ರಮಟ್ಟದಲ್ಲಿ ಜನಸ್ನೇಹಿಯಾಗಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿರುವ ಕೆ.ಎಚ್.ಮುನಿಯಪ್ಪ ಅವರನ್ನು ಉಪಮುಖ್ಯಮಂತ್ರಿಯಾಗಿಸಿ ಎಂದು ಎಐಸಿಸಿಗೆ ಮನವಿ ಮಾಡಿರುವುದಾಗಿ ತಿಳಿಸಿದರು.

ಉಪ ಪ್ರಧಾನಿಗಳಾಗಿದ್ದ ಬಾಬು ಜಗಜೀವನ್ ರಾಮ್ ಸಮುದಾಯದಿಂದ ಬಂದಂತಹ ಕೆ.ಹೆಚ್. ಮುನಿಯಪ್ಪನವರು ಉಪಮುಖ್ಯ ಮಂತ್ರಿ ಸ್ಥಾನಕ್ಕೆ ಸೂಕ್ತವಾಗಿದ್ದಾರೆ. 7 ಭಾರಿ ಲೋಕಸಭಾ ಸದಸ್ಯರಾಗಿ, ಕೇಂದ್ರದ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ ಖಾತೆ ಸೇರಿದಂತೆ ಎರಡು ಬಾರಿ ಕೇಂದ್ರ ಸಚಿವರಾಗಿ ಅಪಾರವಾದ ಅನುಭವ ಹೊಂದಿರುವ ಸಂಘಟನಾ ಚತುರರಾಗಿದ್ದು ಉಪಮುಖ್ಯ ಮಂತ್ರಿ ಸ್ಥಾನಕ್ಕೆ ಎಲ್ಲಾ ರೀತಿಯಲ್ಲೂ ಅರ್ಹರಾಗಿದ್ದಾರೆ ಎಂದು ಪ್ರತಿಪಾದಿಸಿದರು.

ಕೆ.ಹೆಚ್.ಮುನಿಯಪ್ಪ ಅವರು ಕೇಂದ್ರ ಸಚಿವ ರಾಗಿದ್ದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಯೋಜನೆಯನ್ನು ಅನುಷ್ಠಾನಕ್ಕೆ ತಂದರು. ನೆನಗುದಿಗೆ ಬಿದ್ದಿದ್ದ ರೈಲೆ ಮಾರ್ಗಗಳಿಗೆ ಮರು ಚಾಲನೆ ನೀಡಿದರು ಕೆಲವೊಂದು ಹೊಸ ಮಾರ್ಗಗಳಿಗೆ ಹಸಿರು ನಿಶಾನೆ ತೋರಿರುವ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ನೂರಾರು ಕೈಗಾರಿಕೆಗಳು ಬಂದು ಲಕ್ಷಾಂತರ ಮಂದಿಗೆ ಉದ್ಯೋಗ ದೊರೆತು



> ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ಮಲ್ಲಿಕಾರ್ಜುನ್ ಖರ್ಗೆಯ ನಂತರದಲ್ಲಿ ಕೆ.ಹೆಚ್.ಮುನಿಯಪ್ಪ ಅವರು ಮುಂಚೂಣಿಯಲ್ಲಿದ್ದಾರೆ. ಅವರಿಗೆ ಕಳೆದ ಬಾರಿಯೇ ಉಪಮುಖ್ಯ ಮಂತ್ರಿ ಸ್ಥಾನದ ಅವಕಾಶ ತಪ್ಪಿದ್ದು, ಈ ಬಾರಿ ಅವಕಾಶ ನೀಡಬೇಕು.
>
> ■ **ಊರುಬಾಗಿಲು ಶ್ರೀನಿವಾಸ್,** ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ

ಜಿಲ್ಲೆಯು ಅಭಿವೃದ್ಧಿ ಪಥದತ್ತ ಸಾಗಲು ಅನುವು ಮಾಡಿ ಕೊಟ್ಟರು ಎಂಬುವುದನ್ನು ನೆನಪಿಸಿದರು.

ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಕೆ.ಜಯದೇವ್ ಮಾತನಾಡಿ, ಮುಖ್ಯ ಮಂತ್ರಿ ಸಿದ್ದರಾಮಯ್ಯ ಆಡಳಿತದಲ್ಲಿ ನೀಡಿದ್ದ ಆಹಾರ ಖಾತೆಯನ್ನು ಯಶಸ್ವಿಯಾಗಿ ನಿಭಾಯಿಸಿ ಮೆಚ್ಚುಗೆಗೆ ಪಾತ್ರರಾಗಿರುವ ಕೆ.ಎಚ್.ಮುನಿಯಪ್ಪ ಅವರ ವ್ಯಕ್ತಿತ್ವ ಮತ್ತು ಸಿದ್ಧಾಂತಗಳು ನುಡಿದಂತೆ ನಡೆಯುವಂತ ಆದರ್ಶಗಳು ರಾಜ್ಯದ ಜನತೆಯ ಗಮನ ಸೆಳೆದು ಜನಪ್ರಿಯತೆಗೆ ಪಾತ್ರರಾಗಿದ್ದು, ಡಿಸಿಎಂ ಆಗಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

ನಗರ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಪ್ರಸಾದ್ ಬಾಬು, ಶ್ರೀಕೃಷ್ಣ ಮತ್ತಿತರರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಪ್ರಶ್ನೆಯೊಂದಕ್ಕೆ ಕೋಲಾರ ಜಿಲ್ಲೆಯ 4 ಶಾಸಕರ ಪೈಕಿ ಓರ್ವರಿಗೆ ಸಚಿವ ಸ್ಥಾನದ ಜೊತೆಗೆ ಜಿಲ್ಲೆಯ ಉಸ್ತುವಾರಿಯನ್ನು ನಮ್ಮ ಜಿಲ್ಲೆಯವರಿಗೆ ನೀಡ ಬೇಕೆಂದು ಕಾಂಗ್ರೆಸ್ ಪಕ್ಷದ ಹೈ ಕಮಾಂಡ್‌ಗೆ ಮನವಿ ಮಾಡುವುದಾಗಿ ಲಕ್ಷ್ಮೀನಾರಾಯಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿಕಾಂಗ್ರೆಸ್ ಎಸ್ಸಿಘಟಕದ ಅಧ್ಯಕ್ಷ ಕೆ.ಜಯದೇವ್, ಪಕ್ಷದ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಮಂಜುನಾಥ್, ಮಾಲೂರು ಮಧು, ಶ್ರೀ ಭುವನೇಶ್ವರಿ ಕನ್ನಡ ಸಂಘದ ಅಧ್ಯಕ್ಷ ತ್ಯಾಗರಾಜ್,ಸೀತಿಹೊಸೂರು ಮುರಳಿಗೌಡ, ನಗರಸಭೆ ಮಾಜಿ ಸದಸ್ಯರಾದ ಎಸ್. ಆರ್.ಮುರಳೀಗೌಡ, ಸೋಮಶೇಖರ್, ಲಾಲ್ ಬಹದ್ದೂರ್ ಶಾಸ್ತ್ರಿ, ರೈತ ಮೋರ್ಚಾ ನಾಗರಾಜ್, ಹಾರೋಹಳ್ಳಿ ರವಿ ಮತ್ತಿತರರಿದ್ದರು.

11 ಜಾತಿ ಪ್ರಮಾಣ ಪತ್ರಗಳು ರದ್ದು: ಡಿಸಿ

ಕೋಲಾರ: ಜಿಲ್ಲಾ ಜಾತಿ ಪರಿಶೀಲನೆ ಸಮಿತಿಯು ನಿಜವಾದ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯ ದೊರಕಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಡಾ. ಎಂ.ಆರ್.ರವಿ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ನಡೆದ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಮಹತ್ವದ ತೀರ್ಮಾನಗಳನ್ನು ಕೈಗೊಂಡಿದ್ದು, 11 ಜಾತಿ ಪ್ರಮಾಣ ಪತ್ರ ರದ್ದು ಮಾಡಿದ್ದಾರೆ.

> ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಮಹತ್ವದ ತೀರ್ಮಾನ



ಸಭೆಯಲ್ಲಿ ಮಂಡಿಸಲಾದ ಒಟ್ಟು 24 ಪರಿಶಿಷ್ಟ ಜಾತಿ/ಪಂಗಡಗಳ ಸಿಂಧುತ್ವ ಪ್ರಕರಣಗಳ ಪೈಕಿ ಬಂಗಾರಪೇಟೆಯ ಬಲಮಂದೆ ಗ್ರಾಮದ 10 ಪ್ರಕರಣಗಳಲ್ಲಿ ಪಡೆದಿರುವ ಪರಿಶಿಷ್ಟ ಪಂಗಡ ಪ್ರಮಾಣ ಪತ್ರಗಳನ್ನು ಹಾಗೂ ಕೋಲಾರ ನಗರದ 1 ಪ್ರಕರಣದಲ್ಲಿ ಪಡೆರುವ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಸಮಿತಿ ರದ್ದುಗೊಳಿಸಿದೆ.

ಜಿಲ್ಲಾಧಿಕಾರಿಯೂ ಆಗಿರುವ ಸಮಿತಿ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜಾತಿಪ್ರಮಾಣಪತ್ರಗಳಸಿಂಧುತ್ವದಕುರಿತು ದಾಖಲೆಗಳ ಕೂಲಂಕೂಷ ವಿಚಾರಣೆ ನಡೆಸಲಾಯಿತು. ಸಮಿತಿಯ ಮುಂದಿದ್ದ ಪ್ರಕರಣಗಳ ಪೈಕಿ ಈ ಸಭೆಯಲ್ಲಿ ಒಟ್ಟು 24 ಪ್ರಕರಣಗಳ ವಿಚಾರಣೆ ನಡೆಸಿದ ಸಮಿತಿಯು ಅರ್ಹರಲ್ಲದಿದ್ದರೂ ಮೀಸಲಾತಿ ಹಾಗೂ ಸೌಲಭ್ಯ ದುರುಪಯೋಗ ಪಡಿಸಿಕೊಳ್ಳಲು ಯತ್ನಿಸಿದ ಬಂಗಾರಪೇಟೆ ತಾಲೂಕಿನ ಬಲಮಂದೆ ಗ್ರಾಮದ ಈ. ಶ್ರೀರಾಮ ಬಿನ್ ಈರಪ್ಪ. ಬಲಮಂದೆ ಗ್ರಾಮದ ಬಿ.ಆರ್. ಮಲ್ಲಪ್ಪ ಬಿನ್ ಎಸ್.ರಾಮಪ್ಪ. ಬಲಮಂದೆ ಗ್ರಾಮದ ಪ್ರಭಾಕರ ಬಿನ್ ಗೋವಿಂದಪ್ಪ. ಬಲಮಂದೆ ಗ್ರಾಮದ ಲೋಕೇಶ್ ಬಿನ್ ಈರಪ್ಪ. ಬಲಮಂದೆ ಗ್ರಾಮದ ಡಿ.ಮಲ್ಲೇಶ್ ಬಿನ್ ದೊಡ್ಡಮುನಿಯಪ್ಪ. ಬಲಮಂದೆ ಗ್ರಾಮದ ಕಿಟ್ಟಪ್ಪ ಬಿನ್ ಚಂದ್ರಪ್ಪ. ಬಲಮಂದೆ ಗ್ರಾಮದ ಶಿವಶಂಕರ್ ಬಿನ್ ಬುಚ್ಚಪ್ಪ. ಬಲಮಂದೆ ಗ್ರಾಮದ ಬಿ.ವಿ.ರಮೇಶ್ ಕುಮಾರ್ ಬಿನ್ ಬಿ.ಎಂ. ವೆಂಕಟೇಶಪ್ಪ. ಬಲಮಂದೆ ಗ್ರಾಮದ ವೆಂಕಟಸ್ವಾಮಿ ಬಿನ್ ನಾರಾಯಣಪ್ಪ. ಬಲಮಂದೆ ಗ್ರಾಮದ ಬಿ.ಆರ್. ಮಂಜುನಾಥ್ ಬಿನ್ ರಾಮಪ್ಪ. ಇವರುಗಳ ಪ್ರಕರಣಗಳಲ್ಲಿ ಪಡೆದ ಪರಿಶಿಷ್ಟ ಪಂಗಡ ಪ್ರಮಾಣಪತ್ರಗಳನ್ನು ರದ್ದುಗೊಳಿಸಲಾಗಿದೆ ಎಂದು ತಿಳಿಸಿದರು.

ಅರ್ಹರಿಗೆ ಮಾತ್ರ ಸರ್ಕಾರದ ಸೌಲತ್ತುಗಳು ಹಾಗೂ ಉದ್ಯೋಗ ಮೀಸಲಾತಿ ತಲುಪಬೇಕು ಎಂಬ ನಿಟ್ಟಿನಲ್ಲಿ ಜಿಲ್ಲಾಡಳಿತವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಮಂಜುನಾಥ್‌ಗೆ ಸಚಿವ ಸ್ಥಾನ ನೀಡಿ: ಶ್ರೀ

ಕೋಲಾರ: ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಶಾಸಕ ಕೊತ್ತೂರು ಮಂಜುನಾಥ್ ಅವರಿಗೆ ಮುಂಬರುವ ರಾಜ್ಯ ಸಚಿವ ಸಂಪುಟದಲ್ಲಿ ಸಚಿವ ಸ್ಥಾನವನ್ನು ನೀಡಬೇಕೆಂದು ನಾಗಲಾಪುರ ಸಂಸ್ಥಾನ ಮಠದ ಶ್ರೀ ತೇಜೇಶಲಿಂಗ ಶಿವಾಚಾರ್ಯ ಸ್ವಾಮೀಜಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಅನ್ನು ಆಗ್ರಹಿಸಿದರು.

ತಾಲೂಕಿನ ನಾಗಲಾಪುರ ಮಠದಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೊತ್ತೂರು ಮಂಜುನಾಥ್ ಅವರ ರಾಜಕೀಯ ಅನುಭವ ಹಾಗೂ ಜನಪರ ಕೆಲಸಗಳನ್ನು ಶ್ಲಾಘಿಸಿದರ ಲ್ಲದೆ ಕೇವಲ ಕೋಲಾರ ಕ್ಷೇತ್ರಕ್ಕೆ ಮಾತ್ರವಲ್ಲದೆ, ಈ ಹಿಂದೆ ಮುಳಬಾಗಿಲು ಕ್ಷೇತ್ರದಲ್ಲೂ ಶಾಸಕರಾಗಿ ಜನಾನುರಾಗಿ ಕೆಲಸ ಮಾಡಿದ್ದಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಬಲಿಷ್ಠವಾಗಿ ಬೆಳೆಯಬೇಕಾದರೆ ಕೊತ್ತೂರು ಮಂಜುನಾಥ್ ಅವರಂತಹ ದಕ್ಷ ನಾಯಕರಿಗೆ ಸಚಿವ ಸ್ಥಾನ ಸಿಗುವುದು ಅತ್ಯಗತ್ಯವಾಗಿದೆ ಎಂದು ತಿಳಿಸಿದರು. ಸ್ವಾಮೀಜಿಗಳ ಜನ್ಮದಿನಾಚರಣೆಯ ಪ್ರಯುಕ್ತವಾಗಿ ಸಾಯಿ ಸ್ವಾಮಿ ಸೇವಾ ಫೌಂಡೇಶನ್, ಲಿಂಗರಾಜೇಶ್ವರ ಸೇವಾ ಟ್ರಸ್ಟ್, ಎಂ.ವಿ.ಜೆ ಆಸ್ಪತ್ರೆ ಹಾಗೂ ಮಠದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ವೀರಶೈವ ಲಿಂಗಾಯತ ಸಮಾಜದ ತಾಲೂಕು ಅಧ್ಯಕ್ಷ ಸಿದ್ದಲಿಂಗ ಒಡೆಯರ್, ಕಾರ ಬೈಲಪ್ಪ, ಬಂಗಾರಪೇಟೆ ಸದಾಶಿವಯ್ಯ, ವೀರೇಂದ್ರ ಪಾಟೀಲ್, ಮಂಜುನಾಥ್, ಸೋಮಣ್ಣ ಮುಂತಾದವರು ಇದ್ದರು.



ಕೋಲಾರ ತಾಲೂಕಿನ ನಾಗಲಾಪುರ ಮಠದಲ್ಲಿ ಶುಕ್ರವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ನಾಗಲಾಪುರ ಸಂಸ್ಥಾನ ಮಠದ ಶ್ರೀ ತೇಜೇಶಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಕಾಂಗ್ರೆಸ್ ಮುಕ್ತ ಕರ್ನಾಟಕಕ್ಕೆ ಎಸ್.ಮುನಿಸ್ವಾಮಿ ಕರೆ

ಬಂಗಾರಪೇಟೆ: ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಮುಕ್ತ ಕರ್ನಾಟಕಮಾಡಲುಶ್ರಮಿಸಬೇಕುಎಂದುಮಾಜಿ ಸಂಸದ ಎಸ್. ಮುನಿಸ್ವಾಮಿ ಕರೆ ನೀಡಿದ್ದಾರೆ.

ಪಟ್ಟಣದ ಕೆ.ಸಿ.ಆರ್ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಮಂಡಲದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ತರಬೇತಿ ಮಹಾ ಅಭಿಯಾನ-2026 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರತಿ ಹಳ್ಳಿಗಳಲ್ಲಿ ನರೇಂದ್ರ ಮೋದಿ ಅವರ ಜನಪರ ಯೋಜನೆಗಳ ಕುರಿತು ಜಾಗೃತಿ ಮೂಡಿಸಬೇಕು. ಮುಂಬರುವ ಜಿಲ್ಲಾ ಮತ್ತು ತಾ.ಪಂ. ಸೇರಿದಂತೆ ಎಲ್ಲಾ ಚುನಾವಣೆ



ಗಳಲ್ಲಿ ಪಕ್ಷವನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಕಾರ್ಯಕರ್ತರು ಕೈಜೋಡಿಸಬೇಕು ಎಂದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ವಿ. ಮಹೇಶ್ ಮಾತನಾಡಿ, ಕಾರ್ಯಕರ್ತರು ತರಬೇತಿ ಕಾರ್ಯಾಗಾರದಲ್ಲಿ ಕಲಿತ ಪಕ್ಷದ ತತ್ವಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕೇಂದ್ರದ ಮೋದಿ ಸರ್ಕಾರ ಹಾಗೂ ರಾಜ್ಯದ ಯಡಿಯೂರಪ್ಪ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸಿ, 2028ರ ಚುನಾವಣೆಯಲ್ಲಿ ಬಂಗಾರಪೇಟೆಕ್ಷೇತ್ರದಲ್ಲಿಬಿಜೆಪಿಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಓಂ ಶಕ್ತಿ ಚಲಪತಿ ಮಾತನಾಡಿ, ಬಿಜೆಪಿ ಶಿಸ್ತಿನ ಪಕ್ಷವಾಗಿದ್ದು, ದೇಶದ 23 ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. 2028ರ ರಾಜ್ಯ ಚುನಾವಣೆಯಲ್ಲಿ 135 ರಿಂದ 150 ಕ್ಷೇತ್ರಗಳನ್ನು ಗೆದ್ದು ಬಿಜೆಪಿ ಅಧಿಕಾರ ಹಿಡಿಯುವುದು ನಿಶ್ಚಿತ ಎಂದರು. ಮಾಜಿ ಶಾಸಕ ಬಿ.ಪಿ. ವೆಂಕಟ ಮುನಿಯಪ್ಪ ಸೇರಿದಂತೆ ಪ್ರಮುಖರು ಇದ್ದರು.

ಶಾಸಕ ನಾರಾಯಣಸ್ವಾಮಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಬಂಗಾರಪೇಟೆ: ಅಭಿವೃದ್ಧಿ ಹರಿಕಾರರು ಜಿಲ್ಲೆಯ ಹಿರಿಯ ಶಾಸಕರು ಮೂರು ಬಾರಿ ಶಾಸಕರಾಗಿ ಎರಡು ಬಾರಿ ನಿಗಮ ಮಂಡಳಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಶಾಸಕ ಎಸ್. ಎನ್.ನಾರಾಯಣಸ್ವಾಮಿಗೆ ಸಚಿವ ಸ್ಥಾನ ನೀಡಬೇಕೆಂದು ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಆರ್.ಮುನಿರಾಜು ಕಾಂಗ್ರೆಸ್ ಹೈಕಮೆಂಡ್‌ನ್ನು ಒತ್ತಾಯಿಸಿದ್ದಾರೆ.

ಈ ಕುರಿತು ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಎಸ್. ಎನ್.ನಾರಾಯಣಸ್ವಾಮಿರವರು ಹೆಚ್ಚು ಅನುಭವಿಗಳು, ಅಭಿವೃದ್ಧಿ ಹರಿಕಾರರು, ಕ್ಷೇತ್ರವನ್ನು ಮಾದರಿಯಾಗಿ ಮಾಡಿರುವವರು, ಅವರಿಗೆ ಸಚಿವ ಸ್ಥಾನ ನೀಡಿದಲ್ಲಿ ಜಿಲ್ಲೆಗೆ ಅಭಿವೃದ್ಧಿಗೆಸಹಕಾರಿಯಾಗುತ್ತದೆ, ಜಿಲ್ಲೆಯಲ್ಲಿ ಹಾಗೂ ಈ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಯ ಜನಾಂಗದವರು ಹೆಚ್ಚಾಗಿದ್ದು, ಜನಪರ ಕಾಳಜಿಇರುವವರು, ಇಂತಹ ಶಾಸಕರಿಗೆ ಸಚಿವ ಸ್ಥಾನ ನೀಡಿದಲ್ಲಿ ಜಿಲ್ಲೆ ಮತ್ತು ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಶ್ರಮಿಸುತ್ತಾರೆ, ಆದ್ದರಿಂದ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್, ರಾಹುಲ್ ಗಾಂಧಿ ರವರು ತಪ್ಪದೆ ನಮ್ಮ ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಿದ್ದಾರೆ.

ಪಟ್ಟಣವನ್ನು ಅಭಿವೃದ್ಧಿ ಮಾಡುತ್ತಿದ್ದು, ಇವರಿಗೆ ಸಚಿವ ಸ್ಥಾನ ನೀಡಿದಲ್ಲಿ ಜಿಲ್ಲೆಯನ್ನು ಮಾದರಿಯನ್ನಾಗಿ ಮಾಡುತ್ತಾರೆ ಆದ್ದರಿಂದ ತಪ್ಪದೇ ತಾವುಗಳು ನಾರಾಯಣಸ್ವಾಮಿ ರವರಿಗೆ ಸಚಿವ ಸ್ಥಾನ ನೀಡಬೇಕೆಂದರು.

ಸಹಾಯಕಿಯರ ಹುದ್ದೆಗಳಿಗೆ ಅರ್ಜಿ

ಕೋಲಾರ: ಮಾಲೂರು ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿಯಿರುವ ಅಂಗನವಾಡಿ ಕಂಕ್ರಷ್ ಕೇಂದ್ರಗಳ್ಲಿ 10 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 10 ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಗೌರವಧನ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಸ್ಥಳೀಯ ಮಹಿಳೆಯರು/ಲಿಂಗತ್ವ ಅಲ್ಪಸಂಖ್ಯಾತರು ಆಫ್‌ಲೈನ್ ಮೂಲಕ ಅರ್ಜಿಗಳನ್ನು ಜೂನ್ 30 ರಂದು ಸಂಜೆ 5.30ರ ವರೆಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮಾಲೂರು ರೆಡ್ಡಿ ಕಲ್ಯಾಣ ಮಂಟಪ ರಸ್ತೆಯ ಕೃಷಿಕ ಸಮಾಜ ಕಟ್ಟಡ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯ ದೂ.ಸಂ. 08151-232215 ಮತ್ತು 9740422335 ಯನ್ನು ಸಂಪರ್ಕಿಸಬಹುದೆಂದು ಮಾಲೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆಗೆ ಶಾಸಕರ ನಿಯೋಗದಿಂದ ಮನವಿ

ಕೋಲಾರ ಜಿಲ್ಲೆಗೆ ಸಚಿವ ಸ್ಥಾನ ನೀಡಲು ಒತ್ತಾಯ

ಬಂಗಾರಪೇಟೆ: ಕೋಲಾರ ಜಿಲ್ಲೆಯ ಶಾಸಕರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕೆಂದು ಒತ್ತಾಯಿಸಿ ಜಿಲ್ಲೆಯ ಕಾಂಗ್ರೆಸ್ ಶಾಸಕರು ಹಾಗೂ ಮುಖಂಡರ ನಿಯೋಗವು ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದೆ.

ಶಾಸಕರುಗಳಾದ ಎಸ್.ಎನ್. ನಾರಾಯಣ ಸ್ವಾಮಿ, ಕೆ.ವೈ.ನಂಜೇಗೌಡ, ಕೊತ್ತೂರು ಜಿ. ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ನಜೀರ್ ಅಹಮದ್, ಅನಿಲ್ ಕುಮಾರ್, ಮುಖಂಡ ವಿ. ಆದಿನಾರಾಯಣ ಮತ್ತು ಡಿಸಿಸಿ ಮಾಜಿ ಅಧ್ಯಕ್ಷ ಕೆ. ಚಂದ್ರಾರೆಡ್ಡಿ ಅವರನ್ನೊಳಗೊಂಡ ನಿಯೋಗವು ಖರ್ಗೆ ಅವರ ನಿವಾಸದಲ್ಲಿ ಈ ಮಾತುಕತೆ ನಡೆಸಿತು.

ದಲಿತ್ (ಬಲ) ಸಮುದಾಯಕ್ಕೆ ಪ್ರಾತಿನಿಧ್ಯ: ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣ ಸ್ವಾಮಿ ಅವರು ಜಿಲ್ಲೆಯ ಹಿರಿಯ ಪರಿಶಿಷ್ಟ ಜಾತಿ (ಬಲ) ನಾಯಕರಾಗಿದ್ದು, ಮೂರು ಬಾರಿ (2013, 2018, 2023) ಆಯ್ಕೆಯಾಗಿದ್ದಾರೆ. ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಸಮುದಾಯದ 12 ಲಕ್ಷಕ್ಕೂ ಹೆಚ್ಚು



ಜನಸಂಖ್ಯೆಯಿದ್ದರೂ, ಹಿರಿಯ ನಾಯಕ ಟಿ. ಚನ್ನಯ್ಯ ಅವರ ನಂತರ ಸೂಕ್ತ ಸಚಿವ ಸ್ಥಾನ ಸಿಕ್ಕಿಲ್ಲ ಎಂದು ನಿಯೋಗ ದೂರಿದೆ.

ಮಾಲೂರು ಶಾಸಕ ಕೆ.ವೈ. ನಂಜೇಗೌಡ ಹಾಗೂ ಕೋಲಾರ ಶಾಸಕ ಕೊತ್ತೂರು ಜಿ. ಮಂಜುನಾಥ್ ಅವರುಗಳು ತಳಮಟ್ಟದಿಂದ ಕಾಂಗ್ರೆಸ್ ಬಲಪಡಿಸಲು ಶ್ರಮಿಸಿದ್ದಾರೆ.

ರಾಜ್ಯದಲ್ಲಿ ನಡೆಯಲಿರುವ ಸಚಿವ ಸಂಪುಟ ಪುನಾರಚನೆ ವೇಳೆ ಕೋಲಾರ ಜಿಲ್ಲೆಯ ಶಾಸಕ ರನ್ನು ಪರಿಗಣಿಸಿ, ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ನೀಡುವ ಮೂಲಕ ಜಿಲ್ಲೆಯ ಸಮಗ್ರ ಅಭಿವೃದ್ಧಿ ಮತ್ತು ಪಕ್ಷದ ಬಲವರ್ಧನೆಗೆ ಅವಕಾಶ ಮಾಡಿಕೊಡಬೇಕೆಂದು ಶಾಸಕರು ಹೈಕಮಾಂಡ್‌ಗೆ ಆಗ್ರಹಿಸಿದ್ದಾರೆ.

ತಾಲೂಕಿನ ಸರ್ಕಾರಿ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಮೂಲಸೌಲಭ್ಯ

ಸರ್ಕಾರಿ ಕಾಲೇಜುಗಳ ಅಭಿವೃದ್ಧಿ: ಅಂಜಿನಪ್ಪ

ಮಾಲೂರು: ತಾಲೂಕಿನ ಸರ್ಕಾರಿ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಶಾಸಕ ಕೆ.ವೈ. ನಂಜೇಗೌಡ ಅವರು ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ. ಇಂದು ನಮ್ಮ ಸರ್ಕಾರಿ ಸಂಸ್ಥೆಗಳು ಯಾವುದೇ ಖಾಸಗಿ ಕಾಲೇಜುಗಳಿಗೆ ಕಮ್ಮಿಯಿಲ್ಲದಂತೆ ಅಭಿವೃದ್ಧಿ ಹೊಂದಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಎಂ. ಅಂಜಿನಪ್ಪ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 2025-26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ಎನ್‌ಸಿಸಿ ಹಾಗೂ ಕಾಲೇಜು ವಾರ್ಷಿಕೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ತಾಲ್ಲೂಕಿನ ಬಡಕುಟುಂಬಗಳ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಧ್ಯೇಯೋದ್ದೇಶದಿಂದ ಶಾಸಕರು ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಈ ಕಾಲೇಜನ್ನು ಜಿಲ್ಲೆಯಲ್ಲೇ ಮಾದರಿ



ಸಂಸ್ಥೆಯನ್ನಾಗಿ ರೂಪಿಸಿದ್ದಾರೆ ಎಂದರು.

ವಿದ್ಯಾರ್ಥಿಗಳು ಕೇವಲ ಶೋಕಿಗಾಗಿ ಕಾಲ ಕಳೆಯದೆ, ಶಿಸ್ತು ಮತ್ತು ಸಂಯಮದೊಂದಿಗೆ ನಿರ್ದಿಷ್ಟ ಗುರಿ ಹೊಂದಬೇಕು. ಇಲ್ಲಿನ ಸೌಲಭ್ಯಗಳನ್ನು ಬಳಸಿ ಉತ್ತಮ ಶಿಕ್ಷಣ ಪಡೆದು, ದೇಶ ಕಟ್ಟುವ ಮುಂಚೂಣಿ ನಾಯಕರಾಗಬೇಕು ಎಂದು ಕರೆ ನೀಡಿದರು. ಇದೇ ವೇಳೆ ವಿವಿಧ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಎಂ ವಿ ರೂಪ, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸುನೀಲ್ ನಂಜೇಗೌಡ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಜಿ ಅಶ್ವಥ್ ನಾರಾಯಣ, ಸ.ಪ್ರ.ದ.ಕಾ. ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಫ್ರೆಂಡ್ಸ್ ಸಂತೋಷ್, ಯುವ ಕಾಂಗ್ರೆಸ್ ಅಧ್ಯಕ್ಷ ತನ್ವೀರ್ ಅಹಮದ್ , ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ ಮತ್ತು ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ನೇಕಾರರ ಮಂಡಳಿ ಅನುಷ್ಠಾನ ಸಂಸ್ಥೆಯಾಗಿ ನೇಮಕ

• **ಚಿಕ್ಕಬಳ್ಳಾಪುರ:** aising and Accelerating MSME Performance (RAMP) ಕಾರ್ಯಕ್ರಮದಡಿ ಎಂ.ಎಸ್.ಎಂ.ಇ ಘಟಕಗಳನ್ನು ಬಲಪಡಿಸುವ ಉದ್ದೇಶದಿಂದ ಘಟಕದವರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಪ್ಯಾಕೇಜಿಂಗ್ ಹಾಗೂ ಬ್ರಾಂಡಿಂಗ್ ಕೈಗೊಳ್ಳಲು ಘಟಕಗಳು ಬಳಸುವ ಕೈಮಗ್ಗ ಗುರುತು, ರೇಷ್ಮೆ ಗುರುತು ಹಾಗೂ ಉತ್ಪನ್ನಗಳ ISO / BIS CERTIFICATION ಮಾಡಿಸಲು, ಇತ್ಯಾದಿಗಳಿಗೆ ಭರಿಸುವ ವೆಚ್ಚವನ್ನು ಮರುಪಾವತಿಸುವ ಸಂಬಂಧ ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ ನಿ., (ಕಾವೇರಿ ಹ್ಯಾಂಡ್ಲೂಮ್ಸ್), ಬೆಂಗಳೂರು ಸಂಸ್ಥೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ನೇಮಿಸಲಾಗಿರುತ್ತದೆ. ಆದ್ದರಿಂದ ಜವಳಿ ಕ್ಷೇತ್ರಕ್ಕೆ ಸಂಬಂದಿಸಿದ ಎಂ.ಎಸ್.ಎಂ.ಇ ಘಟಕದವರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಪ್ಯಾಕೇಜಿಂಗ್ ಹಾಗೂ ಬ್ರಾಂಡಿಂಗ್ ಕೈಗೊಳ್ಳಲು ಘಟಕಗಳು ಬಳಸುವ ಕೈಮಗ್ಗ ಗುರುತು, ರೇಷ್ಮೆ ಗುರುತು ಹಾಗೂ ಉತ್ಪನ್ನಗಳ ISO / BIS CERTIFICATION ಮಾಡಿಸಲು, ಇತ್ಯಾದಿಗಳಿಗೆ ಭರಿಸುವ ವೆಚ್ಚವನ್ನು ಅಬಿಕ ಕಾರ್ಯಕ್ರಮದಡಿ ಮರುಪಾವತಿಸುವ ಸಂಬಂಧ ಕಾವೇರಿ ಹ್ಯಾಂಡ್ಲೂಮ್ಸ್, ಬೆಂಗಳೂರು ಸಂಸ್ಥೆಯನ್ನು ಸಂಪರ್ಕಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯ ದೂರವಾಣಿ ಸಂಖ್ಯೆ: 08156-277031, 9945594959, 8971754927, 9986392953 ಗೆ ಸಂಪರ್ಕಿಸಬಹುದೆಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

• **ಚಿಕ್ಕಬಳ್ಳಾಪುರ:** 2026-27ನೇ ಸಾಲಿನಲ್ಲಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ಸ್ವಯಂ ಉದ್ಯೋಗಕ್ಕಾಗಿ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ಆಸಕ್ತರಾದ ನಿರುದ್ಯೋಗಿ ಯುವಕ/ಯುವತಿಯರು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (HXM@) ಚಿಕ್ಕಬಳ್ಳಾಪುರ ಜಿಲ್ಲಾ ವತಿಯಿಂದ ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಳ್ಳಲು ಇಚ್ಚಿಸುವವರಿಗಾಗಿ ಬ್ಯಾಂಕ್ ಗಳ ಮುಖಾಂತರ ಸಾಲ ನೀಡಿ ಸೇವಾ ಉದ್ದಿಮೆಗಳಿಗೆ ಗರಿಷ್ಠ ಯೋಜನಾ ವೆಚ್ಚ ರೂ.20.00 ಲಕ್ಷ (ರೂಪಾಯಿ ಇಪ್ಪತ್ತು ಲಕ್ಷ) ಗಳವರೆಗೆ ಹಾಗೂ ಉತ್ಪಾದನಾ ಉದ್ದಿಮೆಗಳಿಗೆ ರೂ.50.00 ಲಕ್ಷ (ರೂಪಾಯಿ ಐವತ್ತು ಲಕ್ಷ) ಗಳವರೆಗೆ ಘಟಕಗಳನ್ನು ಸ್ಥಾಪಿಸಬಹುದಾಗಿದೆ. ಆನ್ ಲೈನ್ ಮೂಲಕ (www.kviconline.gov.in/pmegpeporta) ಅರ್ಜಿಯನ್ನು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (HXM@) ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಸಲ್ಲಿಸಬಹುದಾಗಿರುತ್ತದೆ ಹಾಗೂ ಸರ್ಕಾರದಿಂದ ಗರಿಷ್ಟ ಶೇ.35 ರವರೆಗೆ ಅಂಚು ಹಣದ ಸೌಲಭ್ಯವಿರುತ್ತದೆ.

ಆಸಕ್ತಿವುಳ್ಳವರು ಪಾಸ್ ಪೋರ್ಟ್ ಅಳತೆ ಪೋಟೋ, ವಿದ್ಯಾರ್ಹತೆ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ರೇಷನ್ ಕಾರ್ಡ್, ಗ್ರಾಮೀಣ ಪ್ರದೇಶದಲ್ಲಿ ಘಟಕವನ್ನು ಸ್ಥಾಪಿಸುವ ಗ್ರಾಮದ ಜನಸಂಖ್ಯೆ ಪ್ರಮಾಣ ಪತ್ರ (ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ತಹಸೀಲ್ದಾರ್ ರವರಿಂದ) ಹಾಗೂ ಯೋಜನಾ ವರದಿಯನ್ನು ಆನ್ ಲೈನ್ ಮೂಲಕ ಅಪ್ ಲೋಡ್ ಮಾಡಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ.08156-272097 ಅಥವಾ ಮೊಬೈಲ್ ನಂ.9480825620 ರಲ್ಲಿ ಅಥವಾ ನೇರವಾಗಿ ಸಂಪರ್ಕಿಸಬಹುದೆಂದು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಸೈನಿಕ ಮಂಡಳಿ ಪುನರ್ ರಚನೆ

• **ಚಿಕ್ಕಬಳ್ಳಾಪುರ:** ಮಾಜಿ ಸೈನಿಕರ ಕಲ್ಯಾಣ ಯೋಜನೆಗಳಿಗೆ ಪೂರಕವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸೈನಿಕ ಮಂಡಳಿಯನ್ನು ಪುನರ್ ರಚಿಸಲಾಗುತ್ತಿದ್ದು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿಯ ಮಾಜಿ ಸೈನಿಕರು ಜಿಲ್ಲಾ ಸೈನಿಕ ಮಂಡಳಿಯಲ್ಲಿ ವೇತನ-ಭತ್ಯೆ ರಹಿತವಾಗಿ ಸ್ವ-ಇಚ್ಛೆಯಿಂದ ಕಾರ್ಯನಿರ್ವಹಿಸಲು ಆಸಕ್ತಿಯುಳ್ಳವರು ದಿನಾಂಕ 10 ಜೂನ್ 2026 ರೊಳಗಾಗಿ ಸ್ವ-ವಿವರಗಳನ್ನೊಳಗೊಂಡ ಅರ್ಜಿಯನ್ನು ದಾಖಲಾತಿಗಳೊಂದಿಗೆ ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಗ್ರಾಮಾಂತರ ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಗ್ರಾಮಾಂತರ. ದೂರವಾಣಿ ಸಂಖ್ಯೆ. 080-25588718 ಗೆ ಸಂಪರ್ಕಿಸಬಹುದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗುಬ್ಬಿ ಶಾಸಕ ಶ್ರೀನಿವಾಸ ರವರು ಪಾವಗಡದ ಹಿರಿಯ ಕಾಂಗ್ರೆಸ್ ನಾಯಕ ವೆಂಕಟರಮಣಪ್ಪರವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.

ಯೋಜನೆಗಳ ನೆರವು ಪಡೆಯಿರಿ

• **ಶ್ರೀನಿವಾಸಪುರ:** ಸರ್ಕಾರವು ದೇಶದಲ್ಲಿನ ಪ್ರತಿಯೊಬ್ಬ ನಾಗರೀಕನು ಅಕ್ಷರಸ್ಥನ್ನಾಗಿಸುವ ಉದ್ದೇಶದಿಂದಹೆಚ್ಚು ಹೆಚ್ಚು ಉಪಯುಕ್ತ ಯೋಜನೆಗಳಮೂಲಕಅನುದಾನಗಳನ್ನು ಬಿಡುಗಡೆ ಮಾಡುತ್ತಿದ್ದು, ಅವುಗಳನ್ನು ಮಕ್ಕಳ ಸರ್ವತೋಮುಖ ಅಭಿವೃದ್ದಿಗಾಗಿ ಉಪಯೋಗಿಸುವಂತೆ ಶಾಸಕ ಜಿ.ಕೆ.ವೆಂಕಟಶಿವಾರೆಡ್ಡಿ ಸಲಹೆ ನೀಡಿದರು. ಪಟ್ಟಣದ ಪ್ರಥಮದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ಕಾಲೇಜು ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು. ಈಗಾಗಲೇ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವುದು ಶ್ಲಾಘನೀಯ. ಅದರಂತೆ ಪ್ರತಿವರ್ಷದಂತೆ ಈ ಬಾರಿಯೂ ಸಹ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ನಮ್ಮ ತಾಲೂಕು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವುದು ಉತ್ತಮ ಸಾಧನೆಯಾಗಿದ್ದು, ಈ ಸಾಧನೆಗೆ ಕಾರಣಕರ್ತರಾದ ಶಿಕ್ಷಕರನ್ನು ಹಾಗು ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ನಾನು ನಿಮಗೆ ಶೈಕ್ಷಣಿಕವಾಗಿ ಉತ್ತೇಜನ ನೀಡಲು ಸದಾ ಸಿದ್ದನಿದ್ದೇನೆ ಎಂದರು. ವಾರ್ಷಿಕೋತ್ಸವ ಅಂಗವಾಗಿ ಏರ್ಪಡಿಸಿದ್ದ ಕ್ರೀಡೆಗಳಲ್ಲಿ ಜಯಶೀಲರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ಹಾಗು ಬಹುಮಾನಗಳನ್ನು ವಿತರಿಸಿಲಾಯಿತು. ಪ್ರಾಂಶುಪಾಲ ಸಣ್ಣೀರಯ್ಯ, ಪುರಸಭೆ ಮುಖ್ಯಾಧಿಕಾರಿ ವಿ.ನಾಗರಾಜ್, ಪ್ರಾಧ್ಯಾಪಕರಾದ ಡಾ. ಮೃಂತ್ಯುಜಯ, ಡಾ. ಶಾರದಮ್ಮ, ಡಾ.ಪುಷ್ಪ, ಡಾ.ದಿನೇಶ್, ವೇದಶ್ರೀ, ರತ್ನಮ್ಮ, ಶುಭವತಿ, ಕಾವ್ಯ, ಶ್ಯಾಮಲ, ವ್ಯವಸ್ಥಾಪಕ ವಿಜಯ್‌ಕುಮಾರ್ ಇದ್ದರು.



ಶ್ರೀನಿವಾಸಪುರ ಪಟ್ಟಣದ ಪ್ರಥಮದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ಕಾಲೇಜು ವಾರ್ಷಿಕೋತ್ಸವವನ್ನು ಶಾಸಕ ಜಿ.ಕೆ.ವೆಂಕಟಶಿವಾರೆಡ್ಡಿ ಉದ್ಘಾಟಿಸಿದರು.

ಋತುಚಕ್ರ ನೈರ್ಮಲ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಡಿಎಚ್‌ಒ ಚಾಲನೆ

ಮುಟ್ಟಿನ ಮೂಢನಂಬಿಕೆ ಬಿಡಿ

• **ಕೋಲಾರ:** ಮುಟ್ಟಿನ ಬಗ್ಗೆ ಇರುವ ಮೌನ ಮತ್ತು ಮೂಢನಂಭಿಕೆಗಳನ್ನು ತೊಡೆದುಹಾಕುವುದು, ಹಾಗೂ ಮಹಿಳೆಯರಿಗೆ ಸುರಕ್ಷಿತ ನೈರ್ಮಲ್ಯ ಮತ್ತು ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಿ.ಶ್ರೀನಿವಾಸ್ ತಿಳಿಸಿದರು.

ತಾಲ್ಲೂಕಿನ ಹರಟಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಗ್ರಾಮ ಪಂಚಾಯತ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಟ್ಟಿನ ನೈರ್ಮಲ್ಯದ ಬಗ್ಗೆ ಮುಕ್ತವಾಗಿ ಮಾತನಾಡುವುದು. ಸುರಕ್ಷಿತ ಮತ್ತು ಕೈಗೆಟುಕುವ ಬೆಲೆಯ ಸ್ಯಾನಿಟರಿ ಪ್ಯಾಡ್‌ಗಳು ಎಲ್ಲರಿಗೂ ಸುಲಭವಾಗಿ ಸಿಗುವಂತೆ ಮಾಡುವುದು. ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಸ್ವಚ್ಛವಾದ ಶೌಚಾಲಯ ಮತ್ತು ಖಾಸಗಿ ಸ್ಥಳಗಳನ್ನು ಒದಗಿಸುವುದು ಅತಿ ಮುಖ್ಯ ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಎ.ವಿ. ನಾರಾಯಣಸ್ವಾಮಿ ಮಾತನಾಡಿ, ಆರೋಗ್ಯ ಅಧಿಕಾರಿಗಳು ಋತುಚಕ್ರ ನೈರ್ಮಲ್ಯಗಾಗಿ ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಮೂಡಿಸಿದ ಅವರು, ಸರ್ಕಾರ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಉಚಿತ ಶುಚಿ ಪ್ಯಾಡ್ ನೀಡುವ ಯೋಜನೆ ಜಾರಿಗೆ ತಂದಿದೆ ಎಂದು ತಿಳಿಸಿದರು. ಋತು ಚಕ್ರದ ಸಂದರ್ಭದಲ್ಲಿ ಎದುರಾಗುವ ದೈಹಿಕ ಸಮಸ್ಯೆಗಳನ್ನು ಮನಗಂಡು ಸರ್ಕಾರ ಸರ್ಕಾರಿ ನೌಕರರಾಗಿರುವ ಮಹಿಳೆಯರಿಗೆ ತಿಂಗಳಿಗೊಂದು ರಜೆ ಸೌಲಭ್ಯವನ್ನು ಒದಗಿಸಿದೆ ಎಂದು ತಿಳಿಸಿದ ಅವರು, ಗ್ರಾಮೀಣ ಭಾಗದಲ್ಲಿ ಇನ್ನೂ ಮುಟ್ಟಿನ ಕುರಿತು ಇರುವ ಮೂಢ ನಂಬಿಕೆ ಹೋಗಲಾಡಿಸುವ ಅಗತ್ಯವಿದೆ ಅದೊಂದು ಸಾಮಾನ್ಯ ಪ್ರಕ್ರಿಯೆ ಎಂಬ ಅರಿವು ಮೂಡಿಸಬೇಕು ಎಂದು ತಿಳಿಸಿದರು. ಹದಿಹರೆಯದ ಹುಡುಗಿಯರು, ಮಹಿಳೆಯರು, ಟ್ರಾನ್ಸ್ಜೆಂಡರ್ ಮತ್ತು ಬೈನರಿ ಅಲ್ಲದ ವ್ಯಕ್ತಿಗಳು ತಮ್ಮ ಮುಟ್ಟನ್ನು ಸುರಕ್ಷಿತವಾಗಿ ಮತ್ತು ಘನತೆಯಿಂದ ನಿರ್ವಹಿಸಲು ಆತ್ಮವಿಶ್ವಾಸ, ಜ್ಞಾನ ಮತ್ತು ಕೌಶಲ್ಯಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಈ ದಿನಾಚರಣೆ ನಡೆಸುತ್ತಿದ್ದು, ನೀವು ಜಾಗೃತರಾಗಿ ಜೀವನ ನಡೆಸಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ.ಸೌಮ್ಯ ಹೆಣ್ಣು ಮಕ್ಕಳು ಮುಟ್ಟಿನ ಸಂದರ್ಭದಲ್ಲಿ ವಹಿಸಬೇಕಾದ ಎಚ್ಚರಿಕೆ ಹಾಗೂ ಸ್ವಚ್ಛತೆಯ ಕುರಿತು ಅರಿವು ಮೂಡಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗರಾಜ್, ಪ್ರೌಢಶಾಲಾ ಮುಖ್ಯಶಿಕ್ಷಕ ಜಯರಾಮ್ ಶಿಕ್ಷಕರಾದ ರಜನಿ, ಎಸ್. ರಮಾ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತಿತರರಿದ್ದರು.



> ಋತುಚಕ್ರ ನೈರ್ಮಲ್ಯ, ಸಾನಿಟರಿ ನ್ಯಾಪ್ಕಿನ್ ಗಳ ಬಳಕೆ, ವಿಲೇವಾರಿ, ಪೌಷ್ಟಿಕ ಆಹಾರ ಸೇವನೆ ಆರೋಗ್ಯ ಶಿಕ್ಷಣದ ಅರಿವು ನೀಡಿದ ಅವರು, ಶಾಲಾ ಹಾಜರಾತಿ ಮತ್ತು ಸಮುದಾಯ ಜೀವನದಲ್ಲಿ ಭಾಗವಹಿಸುವಿಕೆಯ ಮೇಲೆ ಮುಟ್ಟು ಪರಿಣಾಮ ಬೀರುತ್ತದೆ. ಈ ಸಂದರ್ಭದಲ್ಲಿ ಮಕ್ಕಳಲ್ಲಿ ಹೆಚ್ಚುವರಿ ಒತ್ತಡ ಮತ್ತು ಆತಂಕವನ್ನು ಉಂಟುಮಾಡುತ್ತದೆ ಈ ಹಿನ್ನಲೆಯಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ.
> ■ ಎಂ.ಪ್ರೇಮಾರಾಜು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ

ಕಾಂಗ್ರೆಸ್ಸಿಗರಿಗೆ ತಾಲೂಕು ಜೆಡಿಎಸ್ ಎಚ್ಚರಿಕೆ



• **ಕನಕಪುರ:** ಜೆಡಿಎಸ್ ಪಕ್ಷ ಹಾಗೂ ವರಿಷ್ಠರ ವಿರುದ್ಧ ಹೇಳಿಕೆ ನೀಡುತ್ತಿರುವ ಕಾಂಗ್ರೆಸ್ ಮುಖಂಡರ ವಿರುದ್ಧ ತಾಲೂಕು ಜೆಡಿಎಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ನಗರದ ಕೋಟೆ ಗಣಪತಿ ದೇವಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ತಾಲೂಕು ಅಧ್ಯಕ್ಷ ಬಿ.ನಾಗರಾಜು, ರಾಮನಗರದ ಮಾಜಿ ಶಾಸಕ ಕೆ.ರಾಜು ಹಾಗೂ ತೆಂಗು ಮತ್ತು ನಾರು ಮಂಡಳಿ ಮಾಜಿ ಅಧ್ಯಕ್ಷ ಡಿ.ಎಂ.ವಿಶ್ವನಾಥ್ ಅವರ ಹೇಳಿಕೆಗಳನ್ನು ತೀವ್ರವಾಗಿ ಖಂಡಿಸಿದರು.

ದೇವೇಗೌಡರ ಕುಟುಂಬವು ಇವರಿಬ್ಬರಿಗೂ ರಾಜಕೀಯವಾಗಿ ಉನ್ನತ ಸ್ಥಾನಮಾನ ನೀಡಿ ಪುನರ್ಜನ್ಮ ನೀಡಿತ್ತು. ಆದರೆ, ಇವರು ಅಧಿಕಾರ ಅನುಭವಿಸಿ, ಸ್ವಾರ್ಥಕ್ಕಾಗಿ ಕಾಂಗ್ರೆಸ್ ಸೇರಿ ಈಗ ಜೆಡಿಎಸ್ ವರಿಷ್ಠರನ್ನೇ ಟೀಕಿಸುತ್ತಿರುವುದು ಅವರ ರಾಜಕೀಯ ದಿವಾಳಿತನ ಮತ್ತು ಗೋಸುಂಬೆ ತನವನ್ನು ತೋರಿಸುತ್ತದೆ. ಉಂಡ ಮನೆಗೆ ದ್ರೋಹ ಬಗೆಯುತ್ತಿರುವ ಇವರ ವಿರುದ್ಧ ಜಿಲ್ಲಾದ್ಯಂತ ಉಗ್ರ ಹೋರಾಟ ಮಾಡಲಾಗುವುದು ಎಂದು ಜೆಡಿಎಸ್ ಯುವ ಘಟಕದ ಉಪಾಧ್ಯಕ್ಷ ಚಿನ್ನಸ್ವಾಮಿ ಮತ್ತು ಹಿರಿಯ ಮುಖಂಡ ಸಿದ್ದಮರಿಗೌಡ ಎಚ್ಚರಿಸಿದ್ದಾರೆ. ಓಬಿಸಿ ಜೆಡಿಎಸ್ ತಾಲೂಕು ಅಧ್ಯಕ್ಷ ಸಿದ್ದು ಮಾತನಾಡಿ, ಜೆಡಿಎಸ್‌ನಿಂದ ಶಾಸಕರಾಗಿದ್ದ ರಾಜು ಅವರು ನಮ್ಮ ಪಕ್ಷದ ಬಗ್ಗೆ ಮಾತನಾಡುವುದನ್ನು ಬಿಟ್ಟು, ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು ತೋರಿಸಲಿ ಎಂದು ಸವಾಲು ಹಾಕಿದರು. ಪಕ್ಷಾಂತರಿ ವಿಶ್ವನಾಥ್ ಜೆಡಿಎಸ್ ನೀಡಿದ್ದ ಗೌರವ ಉಳಿಸಿಕೊಳ್ಳಲಾಗದೆ ಹತಾಶೆಯಿಂದ ಮಾತನಾಡುತ್ತಿದ್ದಾರೆ ಎಂದು ಮುಖಂಡರು ಲೇವಡಿ ಮಾಡಿದರು. ಗೋಷ್ಠಿಯಲ್ಲಿ ಮುಖಂಡರಾದ ಸಣ್ಣಪ್ಪ, ರಾಜೇಶ್, ವಕೀಲ ನಂಜೇಗೌಡ, ಲೋಕೇಶ್, ಸ್ಟುಡಿಯೋ ಚಂದ್ರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಎಸ್ ನಾಗರಾಜ್ ಅವಿರೋಧ ಆಯ್ಕೆ



• **ಮಾಲೂರು:** ಕಳೆದ ಮೂರು ವರ್ಷಗಳಿಂದ ನಮ್ಮ ಕೋಲಾರ ಮತ್ತು ಚಿಕ್ಕಬಳ್ಳಾಪುರ ಶುಕ್ಲ ಯಜುರ್ವೇದಿಯ ಮಹಾಸಭಾ ಸಂಘ ರಚನೆಯಾದ ಮೇಲೆ ಹಲವಾರು ಸಾಮಾಜಿಕ ಧಾರ್ಮಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂಘವನ್ನು ಅಭಿವೃದ್ಧಿ ಪಥದತ್ತ ಸಾಗಲು ಎಲ್ಲರ ಸಹಕಾರ ಸಹಾಯದಿಂದ ವಿಪ್ರರ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದು ಸಂಘದ ಸಂಸ್ಥಾಪಕ ಹಾಗೂ ನೂತನ ಅಧ್ಯಕ್ಷರಾದ ಹಿರಣ್ಯಪಲ್ಲಿ ಎಸ್ ನಾಗರಾಜ್ ತಿಳಿಸಿದರು.

ಅವರು ಕೋಲಾರದಲ್ಲಿ ನೂತನ ಸಂಘದ ಪದಾಧಿಕಾರಿಗಳ ಆಯ್ಕೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಮುಂದಿನ ದಿನಗಳಲ್ಲಿ ಸಂಘವನ್ನು ಇನ್ನೂ ಅಭಿವೃದ್ಧಿಪಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬ್ರಾಹ್ಮಣ ವಿಪರ ಬಾಂಧವರಿಗೆ ಸಹಕಾರಿಯಾಗಿ ನಿಲ್ಲುವುದೇ ನಮ್ಮ ಧ್ಯೇಯವಾಗಿದೆ ಎಂದರು.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಶುಕ್ಲಾಯಜುರವೇದಿಯ ಮಹಾಸಭಾದ ಮುಂದಿನ ಮೂರು ವರ್ಷಗಳ ಅವಧಿ ಗೆ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಎಸ್ ನಾಗರಾಜ್, ಗೌರವಾಧ್ಯಕ್ಷರಾಗಿ ಡಿ.ಎಸ್.ರಾಮಜಿ ಗುರು, ಕಾರ್ಯಾಧ್ಯಕ್ಷರಾಗಿ ಟೇಕಲ್ ಲಕ್ಷ್ಮೀಶ್, ಉಪಾಧ್ಯಕ್ಷರುಗಳಾಗಿ ಹೆಚ್. ಎಸ್. ವೆಂಕಟಸುಬ್ಬನ್, ಕೆ.ಆರ್. ವೆಂಕಟೇಶ್ ಮೂರ್ತಿ, ಸಿ.ಎನ್. ಮಂಜುಳಾದೇವಿ, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಐನ್. ಆನಂದಮೂರ್ತಿ, ಸಹಕಾರ್ಯದರ್ಶಿಯಾಗಿ ಸಿ.ಎ. ಮುರುಳಿದ ರಾವ್, ಖಜಾಂಚಿ ಸಿ.ಆರ್. ಅನಂತಪದ್ಮನಾಭ ರಾವ್, ಸಂಘಟನಾ ಕಾರ್ಯದರ್ಶಿಗಳಾಗಿ ವಿ.ಕೆ. ದತ್ತಾತ್ರೇಯ, ಶ್ರೀಮತಿಸಂಧ್ಯಾ ರಾವ್, ಜಿ. ಸುನಿಲ್ ಕುಮಾರ್, ಎನ್.ಕಮಲೇಶ್, ಪಿ.ರಾಘವೇಂದ್ರ, ಜಿ.ಎಲ್. ನಾಗರಾಜ್, ಆಂತರಿಕ ಲೆಕ್ಕಪರಿಶೋಧಕರಾಗಿ ಎಚ್.ಎಸ್. ರಾಘವೇಂದ್ರ, ಕಾನೂನು ಸಲಹೆಗಾರರಾಗಿ ಎ.ಎಸ್. ನಾಗೇಂದ್ರ ರಾವ್ .ನೂತನ ನಿರ್ದೇಶಕರುಗಳಾಗಿ ಎ.ಎನ್. ಗುರುರಾಜರಾವ್, ವೆಂಕಟನಾರಾಯಣ್, ಕೆ.ವಿ .ಶ್ರೀನಾಥ್, ಕೆ.ಎನ್. ರಾಘವೇಂದ್ರ, ಎಸ್. ನಾರಾಯಣ್ ರಾವ್, ಕೆ .ನಾಗೇಶ್, ಎಸ್. ಚಂದ್ರಶೇಖರ್, ಪುಷ್ಪಾ ಪುರುಷೋತ್ತಮ್, ಹೆಚ್. ಎನ್. ಕೃಷ್ಣಮೂರ್ತಿ, ಸುರೇಖ ಕೇಶವರಾವ್, ಕೆ. ವಿ. ನಾಗೇಂದ್ರ, ಕೆ.ಎಲ್. ನರಸಿಂಹ ಮೂರ್ತಿ, ನಾಗಸುಂದರ್ ಡಿ. ಎನ್, ಆರ್.ಎಸ್. ಎನ್ ಬಾಬು,,ಜಿ. ಭಾನುಪ್ರಕಾಶ್, ಕೆ.ಎನ್. ನಾಗಭೂಷಣ್ ರಾವ್, ಸುಂದರ್ ಶೇಖರ್, ಶಂಕರ್ ನಾರಾಯಣ್ ಆಯ್ಕೆಯಾಗಿದ್ದಾರೆ .

ಶಾಸಕ ನಾರಾಯಣಸ್ವಾಮಿಗೆ ಸಚಿವ ಸ್ಥಾನಕ್ಕೆ ಆಗ್ರಹ

• **ಕೋಲಾರ:** ರಾಜ್ಯದಲ್ಲಿ ಮುಂಬರುವ ಸಚಿವ ಸಂಪುಟ ಪುನಃರಚನೆಸಂದರ್ಭದಲ್ಲಿ ಬಂಗಾರಪೇಟೆ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ ಮೂರು ಬಾರಿ ಆಯ್ಕೆಯಾಗಿರುವ ಜಿಲ್ಲೆಯ ಹಿರಿಯ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಹುತ್ತೂರು ಹೋಬಳಿ ಭಾಗದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಆಗ್ರಹಿಸಿದ್ದಾರೆ.

ನಗರದ ಕೋಲಾರಮ್ಮ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ನಂತರ ಹುತ್ತೂರು ಗ್ರಾಪಂ ಮಾಜಿ ಅಧ್ಯಕ್ಷ ವಿಟ್ಟಪ್ಪನಹಳ್ಳಿ ಕೋಟೆ ನಾರಾಯಣಸ್ವಾಮಿ ಮಾತನಾಡಿ, ಎಸ್.ಎನ್. ನಾರಾಯಣಸ್ವಾಮಿ ಅವರು ಬಂಗಾರಪೇಟೆ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸುವ ಮೂಲಕ ಪಕ್ಷವನ್ನು ಬಲಿಷ್ಠವಾಗಿ ಕಟ್ಟಿದ್ದಾರೆ. ದಲಿತ (ಬಲಗೈ) ಸಮುದಾಯದ ಪ್ರಭಾವಿ ನಾಯಕರಾಗಿರುವ ಅವರು, ಜಿಲ್ಲೆಯಾದ್ಯಂತ ಪಕ್ಷದ ಸಂಘಟನೆಗೆ ಅಪಾರ ಕೊಡುಗೆ ನೀಡಿದ್ದಾರೆ ಜಿಲ್ಲೆಯಿಂದ ಗೆದ್ದ ನಾಲ್ಕು ಕಾಂಗ್ರೆಸ್ ಶಾಸಕರಲ್ಲಿ ಹಿರಿಯರಾಗಿದ್ದು ಈ ಬಾರಿ ಜಿಲ್ಲೆಗೆ ಪ್ರಾತಿನಿಧ್ಯವಾಗಿ ಎಸ್ಎನ್ ನಾರಾಯಣಸ್ವಾಮಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಹರಟಿ ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಂಡಹಳ್ಳಿ ನಾಗಭೂಷಣ್ ಬಾಬು, ಗ್ರಾಪಂ ಮಾಜಿ ಸದಸ್ಯ ಹೊಳಲಿ ಚಲಪತಿ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಅಬ್ಬಣಿ ನಾಗರಾಜ್, ಹರಳಕುಂಟೆ ವೆಂಕಟೇಶಪ್ಪ, ಬೆಳಗಾನಹಳ್ಳಿ ಬಿಎಂಟಿಸಿ ಮಂಜುನಾಥ್, ಮಂಜು, ಚಲಪತಿ, ಶ್ರೀರಾಮ್, ಮೇಡತಂಬಿಹಳ್ಳಿ ಗೋವಿಂದ್ ಪ್ರಸಾದ್, ನಾಗಭೂಷಣ್, ಕೆಂಬೋಡಿ ರಾಜಣ್ಣ, ಅಜ್ಜಪನಹಳ್ಳಿ ಪ್ರದೀಪ್, ಇರಗಸಂದ್ರ ವೆಂಕಟೇಶ್, ಲೋಕೇಶ್, ಭಟ್ರಹಳ್ಳಿ ಲೋಕೇಶ್, ಶಿಲ್ಲಂಗೆರೆ ವೇಣು, ಆಕಾಶ್, ಆನಂದ್, ಅಗ್ರಹಾರ ಸೋಮರಸನಹಳ್ಳಿ ಲೋಕೇಶ್, ಪಟ್ನ ನಾರಾಯಣಸ್ವಾಮಿ, ಚಾಮರಹಳ್ಳಿ ಕುಮಾರ್, ಶಿವು, ನಂದಂಬಳ್ಳಿ ವೆಂಕಟೇಶಪ್ಪ ವಿಜಿಕುಮಾರ್, ತಾತಪ್ಪ ತಿಮ್ಮಸಂದ್ರ ಶ್ರೀನಿವಾಸ್, ಸೀರೇಸಂದ್ರ ಜ್ಯೋತಿ ಕುಮಾರ್, ಯಾರಂಘಟ್ಟ ಮುನಿರಾಜು, ಮುಂತಾದವರು ಇದ್ದರು.



ಎಂಎಲ್‌ಸಿ ಡಿ.ಟಿ.ಶ್ರೀನಿವಾಸ್‌ರಿಗೆ ಸಚಿವ ಸ್ಥಾನಕ್ಕೆ ಆಗ್ರಹ

• **ಕೋಲಾರ:** ಕರ್ನಾಟಕ ರಾಜ್ಯ ಪ್ರವರ್ಗ 1ರ ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಾಗೂ ಎಂ.ಎಲ್.ಸಿ ಡಿ.ಟಿ ಶ್ರೀನಿವಾಸ್ ಇವರಿಗೆ ಕರ್ನಾಟಕ ಸರ್ಕಾರದ ಸಚಿವ ಸಂಪುಟದಲ್ಲಿ ಮಂತ್ರಿ ಸ್ಥಾನವನ್ನು ನೀಡಬೇಕೆಂದು ಕರ್ನಾಟಕ ರಾಜ್ಯ ಪ್ರವರ್ಗ 1ರ ಜಾತಿಗಳ ಒಕ್ಕೂಟದ ಉಪಾಧ್ಯಕ್ಷ ಜೋಗ್ ಮಲ್. ಆರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಕರ್ನಾಟಕ ರಾಜ್ಯದಲ್ಲಿ ಬೆಸ್ತ, ಗೊಲ್ಲ, ಉಪ್ಪಾರ, ಹೇಳವ, ದೊಂಬಿದಾಸ, ಬುಡಬುಡಿಕೆ, ಜೋಗಿ, ಗುರ್ಖಾ ಹಾಗೂ 46 ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಗಳನ್ನು ಒಳಗೊಂಡಂತೆ 95 ಮುಖ್ಯ ಜಾತಿಗಳು ಮತ್ತು ಅದರ ಉಪ 365 ಜಾತಿಗಳು ಪ್ರವರ್ಗ-1 ರಲ್ಲಿ ಬರುತ್ತವೆ.ಪ್ರವರ್ಗ -1 ರ ಸುಮಾರು 80 ರಿಂದ 90 ಲಕ್ಷದಲ್ಲಿ ಜನಸಂಖ್ಯೆ ಹೊಂದಿರುತ್ತವೆ. ಈ ಎಲ್ಲಾ ಜಾತಿಗಳು ಸಹ ಬಹಳ ಕಡುಬಡತನದಿಂದ ಹಾಗೂ ಯಾವುದೇ ರಾಜಕೀಯ ಪ್ರಾತಿನಿಧ್ಯವಿಲ್ಲದೆ ಬಹಳ ಹಿಂದುಳಿದಿದ್ದು ಈ ಎಲ್ಲಾ ಜಾತಿಗಳನ್ನು ತಮ್ಮ ಸಂಘಟನಾ ಚತುರತೆಯಿಂದ ಒಂದುಗೂಡಿಸಿ ಅವುಗಳನ್ನು ಮುನ್ನೆಲೆಗೆ ತರಲು ನಮ್ಮ ರಾಜ್ಯಾಧ್ಯಕ್ಷ ಡಿ.ಟಿ ಶ್ರೀನಿವಾಸ್ ರವರ ಪರಿಶ್ರಮ ಬಹಳವಾಗಿ ಇರುತ್ತದೆ. ಕಾಂಗ್ರೆಸ್ ಪಕ್ಷದ ಬೆನ್ನೆಲುಬಾಗಿರುವ ಪ್ರವರ್ಗ ಒಂದರಲ್ಲಿ ಬರುವ ಯಾದವ ಜನಾಂಗಕ್ಕೆ ಕಳೆದ 23 ವರ್ಷದಿಂದ ಯಾವುದೇ ಮಂತ್ರಿಮಂಡಲದಲ್ಲಿ ಸ್ಥಾನವನ್ನು ನೀಡಿರುವುದಿಲ್ಲ . ಆದ್ದರಿಂದ ಕಾಂಗ್ರೆಸ್ ಪಕ್ಷದ ಬಗ್ಗೆ ತೀವ್ರ ಆಸಕ್ತಿ ಇರುವ, ಸಂಘಟನಾ ಚತುರರು ಚಿಂತಕರು ಡಿ.ಟಿ ಶ್ರೀನಿವಾಸ್ ರವರಿಗೆ ಈಗ ಹೊಸದಾಗಿ ಸಂಪುಟ ರಚನೆ ಮಾಡುವ ಸಮಯದಲ್ಲಿ ಮಂತ್ರಿ ಸ್ಥಾನವನ್ನು ನೀಡಬೇಕೆಂದು ಕರ್ನಾಟಕ ರಾಜ್ಯ ಪ್ರವರ್ಗ 1ರ ಜಾತಿಗಳ ಸಮಸ್ತ ಮುಖಂಡರುಗಳು, ಹಿಂದುಳಿದ ಸಮುದಾಯಗಳ ಮುಖಂಡರು, ಯಾದವ ಸಮಾಜದ ಮುಖಂಡರು ಮನವಿ ಮಾಡಿದ್ದಾರೆ.

ವಿದ್ಯುತ್ ಸಂಸ್ಥೆಗಳು ಟಾಟಾ ಪವರ್ ಕಂಪನಿಗೆ ನೀಡಲು ಸರ್ಕಾರದ ನಿರ್ಧಾರ

ಖಾಸಗೀಕರಣಕ್ಕೆ ಮಾರ್ಕ್ಸ್ ವಾದಿ ಪಕ್ಷ ವಿರೋಧ

• **ಬಾಗೇಪಲ್ಲಿ:** ಸರ್ಕಾರಿ ಸ್ವಾಮ್ಯದ ವಿದ್ಯುತ್ ಶಕ್ತಿ ಸಂಸ್ಥೆಯನ್ನು ಟಾಟಾ ಪವರ್ ಕಂಪನಿಗೆ ನೀಡಲು ಮುಂದಾಗಿರುವ ಸರ್ಕಾರದ ನಿರ್ಧಾರವನ್ನು ಭಾರತ ಮಾರ್ಕ್ಸ್ ವಾದಿ ಪಕ್ಷದ (ರೆಡ್ ಫ್ಲ್ಯಾಗ್) ರಾಜ್ಯ ಕಾರ್ಯದರ್ಶಿ ಬಸವಲಿಂಗಪ್ಪ ತೀವ್ರವಾಗಿ ಖಂಡಿಸಿದ್ದಾರೆ. ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ವಿದ್ಯುತ್ ವಲಯವನ್ನು ಟಾಟಾ ಪವರ್‌ಗೆ ಒಪ್ಪಿಸುವುದರಿಂದ ಹಾಲಿ ನೌಕರರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಮೀಸಲಾತಿ ಹಾಗೂ ಬಡ್ತಿ ಅವಕಾಶಗಳು ಕ್ಷೀಣಿಸಲಿವೆ. ಖಾಸಗೀಕರಣದಿಂದ ವಿದ್ಯುತ್ ದರ ಹೆಚ್ಚಳವಾಗಿ, ರೈತರ ಪಂಪ್‌ಸೆಟ್ ಹಾಗೂ ಬಡವರ ಗೃಹಬಳಕೆ ಜ್ಯೋತಿಗಳ ಹಕ್ಕುಗಳು ಕೈತಪ್ಪುವ ಅಪಾಯವಿದೆ.

ಪೆಟ್ರೋಲ್, ಡೀಸೆಲ್, ವಾಣಿಜ್ಯ ಗ್ಯಾಸ್ ಹಾಗೂ ರಸಗೊಬ್ಬರ ಬೆಲೆ ಏರಿಕೆಯಿಂದ ಸಣ್ಣ ಹೋಟೆಲ್‌ಗಳು ಮುಚ್ಚುತ್ತಿದ್ದು, ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ. ಇದರ ವಿರುದ್ಧ ಪಕ್ಷವು ಜನಾಂದೋಲನ ರೂಪಿಸಲಿದೆ. ಬಾಗೇಪಲ್ಲಿಯ ಸರ್ವೆ ನಂ.37ರಲ್ಲಿ ಅರ್ಹ ಫಲಾನುಭವಿಗಳಿಗೆ ತಕ್ಷಣ ನಿವೇಶನ ನೀಡಬೇಕು. ಈ ಕುರಿತು ಶಾಸಕರನ್ನು ಭೇಟಿ ಮಾಡಲು 8 ಮಂದಿಯ ನಿಯೋಗ ರಚಿಸಲಾಗಿದೆ. ಪಕ್ಷದಿಂದ ಹೊರಹಾಕಲ್ಪಟ್ಟ ಕೆಲವರು ಪಕ್ಷ ಮತ್ತು ಪ್ರಜಾ ಸಂಘಟನೆಗಳ ಹೆಸರನ್ನು ದುರ್ಬಳಕೆ ಮಾಡಿಕೊಂಡರೆ ಸೂಕ್ತ ಪಾಠ ಕಲಿಸಬೇಕಾಗುತ್ತದೆ ಎಂದು ಬಸವಲಿಂಗಪ್ಪ ಎಚ್ಚರಿಸಿದರು.

ಗೋಷ್ಠಿಯಲ್ಲಿ ತಾಲೂಕು ಕಾರ್ಯದರ್ಶಿ ಕೆ.ವಿ. ರಾಮಚಂದ್ರ, ಮುಖಂಡರಾದ ರಾಮರೆಡ್ಡಿ, ಆದಿಶೇಷು, ವೆಂಕಟರಮಣಪ್ಪ, ಜಿ. ವೆಂಕಟೇಶ್ ಹಾಗೂ ರಘುನಾಥ ರೆಡ್ಡಿ ಉಪಸ್ಥಿತರಿದ್ದರು.



ತಾಲೂಕು ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಬಿ.ವಿ. ಆನಂದ್ ಅಭಿಮತ

ದಲಿತರ ಏಳಿಗೆಗೆ ಮುಖಂಡರು ಶ್ರಮಿಸಿ

• **ಗೌರಿಬಿದನೂರು:** ದಲಿತ ಸಂಘಟನೆಗಳ ಮುಖಂಡರು ದಲಿತರ ಏಳಿಗೆಗಾಗಿ ಶ್ರಮಿಸುವ ಮೂಲಕ ಅವರ ಪಾಲಿಗೆ ಬೆನ್ನೆಲುಬಾಗಿ ಕೆಲಸ ಮಾಡಬೇಕು ಎಂದು ದಸಂಸ ಜಿಲ್ಲಾ ಸಂಚಾಲಕ ಬಿ.ವಿ. ಆನಂದ್ ಹೇಳಿದರು.

ನಗರದ ವಾಲ್ಮೀಕಿ ಭವನದಲ್ಲಿ ದಲಿತ ಸಂಘರ್ಷ ಸಮಿತಿ (ರಿ) ಹಮ್ಮಿಕೊಂಡಿದ್ದ ವಿಚಾರ ಸಂಕಿರಣ, ಸರ್ವ ಸದಸ್ಯರ ಸಭೆ ಹಾಗೂ ತಾಲೂಕು ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಅವರು ಮಾತನಾಡಿದರು. ದಲಿತ ಚಳುವಳಿ ಇತಿಹಾಸದಲ್ಲಿ ಕರ್ನಾಟಕವೇ ದೇಶಕ್ಕೆ ಮಾದರಿ. ತಾಲ್ಲೂಕಿನ ಹೆಚ್. ನಾಗಸಂದ್ರ ಭೂ ಹೋರಾಟ, ಜೀತಗಾರರ ವಿಮುಕ್ತಿ ಹಾಗೂ ಶಂಬುಕಾನಗರ ಗ್ರಾಮದ ಉದಯ ರಾಜ್ಯಕ್ಕೆ ಮಾದರಿಯಾದ ಐತಿಹಾಸಿಕ ಹೆಜ್ಜೆಗಳಾಗಿವೆ. ಪ್ರಸ್ತುತ ಕೋಮುವಾದದ ಕಬಂಧ ಬಾಹುಗಳು ತಳಸಮುದಾಯವನ್ನು ಮತ್ತೆ ಚಾತುರ್ವರ್ಣ ಪದ್ಧತಿಗೆ ದೂಡಿ ಅವಕಾಶ ವಂಚಿತರನ್ನಾಗಿ ಮಾಡುತ್ತಿವೆ. ನಮ್ಮ ಅಸ್ತಿತ್ವದ ಉಳಿವಿಗಾಗಿ ಸಂಘಟನೆಯನ್ನು ಕಟ್ಟಿ ಬೆಳೆಸುವುದು ಅನಿವಾರ್ಯ ಎಂದರು. ಉಪ ಪ್ರಾಂಶುಪಾಲ ಟಿ. ನಂಜುಂಡಪ್ಪ ಮಾತನಾಡಿ, ಶ್ರಮಜೀವಿಗಳಾದ ಶೂದ್ರರು ಸಮಾಜದ ಬೆನ್ನೆಲುಬು. ಆದರೆ ದಲಿತರ ಕೇರಿಗಳು ಮೂಲಭೂತ ಸೌಕರ್ಯಗಳಿಲ್ಲದೆ ನರಕಯಾತನೆ ಅನುಭವಿಸುತ್ತಿವೆ ಎಂದರು. ಸಂಕಲ್ಪ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕಾಂತರಾಜು ಮಾತನಾಡಿ, ದಲಿತರು ಕೇವಲ ಮತಬ್ಯಾಂಕ್ ರಾಜಕೀಯಕ್ಕೆ ಸೀಮಿತವಾಗದೆ ಶೈಕ್ಷಣಿಕ ಹಾಗೂ ಆರ್ಥಿಕ ಪ್ರಗತಿ ಸಾಧಿಸಬೇಕು ಎಂದರು.

ಇದೇ ವೇಳೆ ತಾಲೂಕು ಸಂಚಾಲಕರಾಗಿ ನಾರಾಯಣಸ್ವಾಮಿ ಸೇರಿದಂತೆ ಹಲವು ಪದಾಧಿಕಾರಿಗಳು ಹಾಗೂ ನಿರ್ವಾಹಕ ಸಮಿತಿ ಸದಸ್ಯರನ್ನು ನೂತನವಾಗಿ ಆಯ್ಕೆ ಮಾಡಲಾಯಿತು.

